ಕನ್ನಡ ಮತ್ತು ಸಂಸ್ಕೃತಿ ಇಲಾಖೆ

**ಸ್ವಾತಂತ್ರ್ಯ ಅಮೃತ ಮಹೋತ್ಸವ ಪುಸ್ತಕ ಮಾಲೆ**

**ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ**

# ಚಳ್ಳಕೂಡ್ಲೂರು


ಪ್ರಧಾನ ಸಂಪಾದಕರು

**ಡಾ. ಬಿ.ವಿ. ವಸಂತಕುಮಾರ್**

ಸಂಪಾದಕರು

**ಡಾ. ಎಸ್.ಜಿ. ರಾಮದಾಸ ರೆಡ್ಡಿ**

ಲೇಖಕರು

**ರಾಮಣ್ಣ ಹವಳೆ**



**ಕರ್ನಾಟಕ ಸಾಹಿತ್ಯ ಅಕಾಡೆಮಿ**

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–೫೬೦ ೦೦೨

ದೂರವಾಣಿ: ೦೮೦–೨೨೨೧೧೭೩೦ / ೨೨೧೦೬೪೬೦

www.karnatakasahithyaacademy.org

ಇ–ಮೇಲ್: sahithya.academy@gmail.com

**CHELLEKOODLRU:** An Introducing Book on the Places in Karnataka that Played a Major Role in the Freedom Struggle, Written by Ramanna Havale, Published by Kariyappa N., Registrar, Karnataka Sahithya Academy, Kannada Bhavana, J.C. Road, Bengaluru-560002

**ಪ್ರಧಾನ ಸಂಪಾದಕರು**
ಡಾ. ಬಿ.ವಿ. ವಸಂತಕುಮಾರ್
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಸಂಪಾದಕ ಮಂಡಳಿ**
೧. ಡಾ. ಎಸ್. ಜಿ. ರಾಮದಾಸ ರೆಡ್ಡಿ
೨. ಡಾ. ಮೃತ್ಯುಂಜಯ ರುಮಾಲೆ
೩. ಶ್ರೀ ನರೇಂದ್ರಕುಮಾರ್ ಎಸ್.ಎಸ್.
೪. ಡಾ. ಪ್ರಕಾಶ ಗ. ಖಾಡೆ
೫. ಶ್ರೀಮತಿ ಕೋಡಿಬೆಟ್ಟು ರಾಜಲಕ್ಷ್ಮಿ

ಹಕ್ಕು: ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಣ : ೨೦೨೨
ಪ್ರತಿಗಳು : ೧೦೦೦
ಬೆಲೆ : ರೂ. ೩೦/–
ಪುಟ: ೬೦

ಮುಖಪುಟ ಚಿತ್ರ: ಮುರಳೀಧರ ವಿ. ರಾಥೋಡ್


ಪ್ರಕಾಶಕರು:
ಕರಿಯಪ್ಪ ಎನ್., ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಕರು
**ರಶ್ಮಿ ಪ್ರಿಂಟರ್ಸ್**
ಸುಧಾಮನಗರ, ಬೆಂಗಳೂರು
ಮೊ: ೯೯೦೧೯೧೬೫೮೧

**ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿ

ಸ್ವಾತಂತ್ರ್ಯದ ಅಮೃತಮಹೋತ್ಸವ

ವಿಧಾನಸೌಧ
ಬೆಂಗಳೂರು–560 001



## ಶುಭ ಸಂದೇಶ

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ದೇಶದಾದ್ಯಂತ ದೇಶಪ್ರೇಮವನ್ನು ಬೆಳೆಸುವ ಸಾವಿರಾರು ಕಾರ್ಯಕ್ರಮಗಳು ನಡೆಯುತ್ತಿರುವ ಹೊತ್ತಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕದ ೩೧ ಜಿಲ್ಲೆಗಳಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ೭೫ ಸ್ಥಳಗಳನ್ನು ಗುರುತಿಸಿ, ೭೫ ಪುಸ್ತಕಗಳನ್ನು ಹೊರತರುತ್ತಿರುವುದು ಸಂತೋಷದ ವಿಚಾರ.

ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರ್ನಾಟಕದ ಕೊಡುಗೆ ಬಹಳ ಮಹತ್ವದ್ದು. ಕರ್ನಾಟಕದ ಹಲವು ಮಹನೀಯರು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ನಡೆಸಿದ ತ್ಯಾಗ ಬಲಿದಾನಗಳು ಅಪಾರ. ಅಂತೆಯೇ ಕರ್ನಾಟಕದ ಸಾವಿರಾರು ಸ್ಥಳಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿ ನಿಂತಿವೆ. ವಿದುರಾಶ್ವತ್ಥ, ಈಸೂರು, ಶಿವಪುರಗಳನ್ನೂ ಒಳಗೊಂಡಂತೆ ಕರ್ನಾಟಕದ ೩೧ ಜಿಲ್ಲೆಗಳ ಸಾವಿರಾರು ಸ್ಥಳಗಳಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮವು ನಡೆದುದಕ್ಕೆ ಸಾಕ್ಷಿಯಾಗಿ ಹಲವಾರು ಕುರುಹುಗಳು, ಅವಶೇಷಗಳು, ಸ್ಮಾರಕಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಆದಾಗ್ಯೂ ಇನ್ನೂ ದಾಖಲಾಗಬೇಕಾದ ಸಂಗತಿಗಳು ಉಳಿದಿವೆ. ಭಾರತ ಸ್ವಾತಂತ್ರ್ಯದ ಅಮೃತೋತ್ಸವದ ಸಂದರ್ಭದಲ್ಲಿ ಈ ಎಲ್ಲ ಅಂಶಗಳನ್ನು ದಾಖಲಿಸುವ ಕೆಲಸ ತುರ್ತಾಗಿ ಆಗಬೇಕಾಗಿದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ಕರ್ನಾಟಕದ ವಿವಿಧ ಸ್ಥಳದಲ್ಲಿ ನಡೆದ ಘಟನೆಗಳು, ತ್ಯಾಗ, ಬಲಿದಾನಗಳು, ಹೋರಾಟಗಳು ಇತ್ಯಾದಿ

ವಿವರಗಳೆಲ್ಲವನ್ನೂ ಪುಸ್ತಕ ರೂಪದಲ್ಲಿ ದಾಖಲಿಸುವ ಮೂಲಕ, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಕೊಡುಗೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಡಿದೆ. ಇದು ನಿಜಕ್ಕೂ ಒಂದು ಸಂಶೋಧನಾತ್ಮಕ ಪ್ರಯತ್ನವೇ ಸರಿ.

ಈ ಸಾರ್ಥಕ ಕಾರ್ಯವನ್ನು ಯಶಸ್ವಿಗೊಳಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಹಾಗೂ ಬಳಗದವರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

ಎಲ್ಲರಿಗೂ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭಾಶಯಗಳು.

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ

**ವಿ ಸುನಿಲ್ ಕುಮಾರ್**

ಸ್ವಾತಂತ್ರ್ಯದ ಅಮೃತಮಹೋತ್ಸವ

ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು



## ಶುಭ ಸಂದೇಶ

**'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ'**

ಜಗತ್ತಿನಲ್ಲಿ ಭಾರತ ಒಂದು ವಿಶಿಷ್ಟವಾದ ಮಹತ್ವದ ರಾಷ್ಟ್ರ. ವಿಶ್ವಕ್ಕೆ ವಿಶ್ವಮಾನವನನ್ನು, ವಿಶ್ವಕುಟುಂಬವನ್ನು, ವಿಶ್ವನಾಥನನ್ನು, ಜಗನ್ಮಾತೆಯನ್ನು ನೀಡಿರುವ ಆಧ್ಯಾತ್ಮದ ಪುಣ್ಯಭೂಮಿ. ವೇದ, ಉಪನಿಷತ್ತುಗಳ ಕಾಲದಿಂದ ಹಿಡಿದು, ರಾಮ, ಕೃಷ್ಣ, ಶಿವ, ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಮೈತ್ರೇಯಿ, ಗಾರ್ಗಿ, ಅರುಂಧತಿ, ಸೀತೆ, ಮಂಡೋದರಿ, ಮೀರಾ, ಅಕ್ಕಮಹಾದೇವಿ ಮೊದಲಾದ ಪೌರಾಣಿಕ, ಐತಿಹಾಸಿಕ ವ್ಯಕ್ತಿತ್ವಗಳ ಅಂತಃಶಕ್ತಿಯಿಂದ ಜಗತ್ತನ್ನು ಬೆಳಗಿದ ದೇಶ ಭಾರತ. ಇಂಥ ದೇಶದ ಮೇಲೆ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗೆ ಆಕ್ರಮಣ ಮಾಡಲು ಪ್ರಯತ್ನಿಸಿ, ಸೋತು ಭಾರತೀಯ ಸಂಸ್ಕೃತಿಯ ಅಗಾಧತೆಗೆ ಶರಣಾಗಿ ಭಾರತೀಯರೇ ಆಗಿಹೋಗಿದ್ದಾರೆ. ಹಾಗೇ ಭಾರತವನ್ನು ಭಾರತವನ್ನಾಗಿ ಉಳಿಸಿರುವ ಮಹಾನ್ ಶಕ್ತಿಯೇ ಸ್ವಾತಂತ್ರ್ಯದ ತೀವ್ರ ತುಡಿತ.

ಭಾರತದ ಸ್ವಾತಂತ್ರ್ಯ ಸಂಗ್ರಾಮ ಸುಮಾರು ಮುನ್ನೂರು ವರ್ಷಗಳಿಗೂ ಹಳೆಯದು. ಇಡೀ ಭಾರತವೇ ಬ್ರಿಟಿಷರ ವಿರುದ್ಧ ಹೋರಾಡಿ ದಾಸ್ಯದಿಂದ ಮುಕ್ತವಾಗಿ ಸ್ವಾತಂತ್ರ್ಯವನ್ನು ಪಡೆದುಕೊಂಡು ಈಗ ೭೫ ವರ್ಷಗಳಾಗಿವೆ. ಈ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭವನ್ನು ಅರ್ಥಪೂರ್ಣವಾಗಿ ಆಚರಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ.

ಇಡೀ ದೇಶವನ್ನೇ ಜಾಗೃತಗೊಳಿಸಿದ ಭಾರತದ ಸ್ವಾತಂತ್ರ್ಯ ಸಂಗ್ರಾಮ,

ನಮ್ಮ ಕರ್ನಾಟಕದಲ್ಲಿಯೂ ಸಹ ಸ್ವಾತಂತ್ರ್ಯ ಸಂಗ್ರಾಮದ ಪಾಂಚಜನ್ಯವನ್ನು ಮೊಳಗಿಸಿತು. ಕರ್ನಾಟಕದ ಕಲಿಗಳು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ, ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ವಿಶಿಷ್ಟ ಕೊಡುಗೆ ನೀಡಿರುವುದನ್ನು ಸ್ಮರಿಸಬೇಕಿದೆ. ಕರ್ನಾಟಕದಲ್ಲಿ ಸಾವಿರಾರು ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ಸಾರುವ ಐತಿಹಾಸಿಕ ಸ್ಥಳಗಳಿವೆ. ಅಂಥ ಸ್ಥಳಗಳು ಅರಿವಿಗೆ ಬಾರದೆ ಮರೆಯಾಗಿ ಹೋಗುತ್ತಿವೆ. ಸ್ವಾತಂತ್ರ್ಯದ ಹಣತೆ ಹೊತ್ತಿಸಿದ ಪ್ರಮುಖ ಸ್ಥಳಗಳಲ್ಲಿ ತ್ಯಾಗ, ಬಲಿದಾನಗಳನ್ನು ನೆನಪಿಸುವ ನಿಟ್ಟಿನಲ್ಲಿ ಮತ್ತು ಇಂದಿನ ಪೀಳಿಗೆಗೆ ತಿಳಿಸಿಕೊಡುವ ಕೆಲಸ ಈ ಅಮೃತ ಮಹೋತ್ಸವದ ಸಂದರ್ಭದಲ್ಲಿ ಆಗುತ್ತಿರುವುದು ಸಂತಸದ ವಿಷಯ. ಈ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಒಂದು ಬೃಹತ್ ಆಂದೋಲನವನ್ನು ಹಮ್ಮಿಕೊಂಡಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಐತಿಹಾಸಿಕ ಮಹತ್ವಗಳನ್ನು ತಿಳಿಸಿಕೊಡುವ ೭೫ ಸ್ಥಳಗಳ ಬಗ್ಗೆ ೭೫ ವಿವಿಧ ಲೇಖಕರಿಂದ ಒಟ್ಟು ೭೫ ಪುಸ್ತಕಗಳನ್ನು, ಅದರ ತಲಾ ೧೦೦೦ ಪ್ರತಿಯಂತೆ ೭೫೦೦೦ ಪ್ರತಿಗಳನ್ನು ಎರಡು ತಿಂಗಳಲ್ಲಿ ಬರೆಯಿಸಿ, ಮುದ್ರಿಸಿ ಓದುಗರಿಗೆ ತಲುಪಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರತಿಯೊಬ್ಬರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ನಾವೆಲ್ಲರೂ ಕೂಡಿ ನಮ್ಮ ನಮ್ಮ ಮನೆಮನಗಳಿಂದ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆಗಳನ್ನು ಬೆಳೆಸೋಣ. ರಸಋಷಿ ಕುವೆಂಪು ಅವರು ಹೇಳಿರುವ 'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಎಂಬ ಆದರ್ಶದೊಂದಿಗೆ ಕರ್ನಾಟಕದ ಮೂಲಕ ಭಾರತವನ್ನೂ, ಭಾರತದ ಮೂಲಕ ಕರ್ನಾಟಕವನ್ನೂ ಅಭಿನ್ನಗೊಳಿಸೋಣ, ಬಲಿಷ್ಠಗೊಳಿಸೋಣ. ಭವ್ಯ ಕರ್ನಾಟಕ, ಭವ್ಯ ಭಾರತ ನಿರ್ಮಿಸೋಣ.

**(ವಿ ಸುನಿಲ್ ಕುಮಾರ್)**
ಇಂಧನ, ಕನ್ನಡ ಮತ್ತು ಸಂಸ್ಕೃತಿ
ಇಲಾಖೆ ಸಚಿವರು

# ಪ್ರಧಾನ ಸಂಪಾದಕರ ಮಾತು

ಸ್ವಾತಂತ್ರ್ಯ ಎಂಬುದು ಲೌಕಿಕವಾಗಿಯೂ ಲೋಕೋತ್ತರವಾಗಿಯೂ ಮಹೋನ್ನತವಾದ ಮೌಲ್ಯ. ಭಾರತೀಯ ಸಂಸ್ಕೃತಿಯು ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪುರುಷಾರ್ಥವೆಂದು ಕರೆದಿದೆ. ಮೋಕ್ಷವೆಂದರೆ ಬಿಡುಗಡೆ, ಸ್ವಾತಂತ್ರ್ಯ ಎಂದರ್ಥ. ಹುಟ್ಟು ಸಾವುಗಳಿಂದ ಬಿಡುಗಡೆ ಎಂಬುದು ಲೋಕೋತ್ತರವಾದ ಅರ್ಥವಾದರೆ, ಸಾವಿಲ್ಲದ, ನೋವಿಲ್ಲದ ಸ್ಥಿತಿಗಾಗಿ ಕಲ್ಯಾಣ ನಾಡಿನ ನಿರ್ಮಾಣಕ್ಕಾಗಿ ನಾವು ಗಳಿಸುವ ನಮ್ಮ ಸ್ವಯಂ ನಿಯಂತ್ರಣದ ಸ್ವಾತಂತ್ರ್ಯ ಎಂಬುದು ಲೌಕಿಕವಾದ ಅರ್ಥ. ಲೌಕಿಕ ಹಾಗೂ ಅಲೌಕಿಕಗಳು ಪರಸ್ಪರ ವಿರೋಧಿಗಳಲ್ಲ; ಅವು ಪರಸ್ಪರ ಪೂರಕವಾದವು. ಲೋಕವನ್ನು ಲೋಕೋತ್ತರದ ಔನ್ನತ್ಯಕ್ಕೆ ಏರಿಸುವ ದರ್ಶನವೇ ಭಾರತೀಯ ದರ್ಶನ. ಸ್ವಾತಂತ್ರ್ಯ ನಮ್ಮ ಧರ್ಮ, ನಮ್ಮ ಆತ್ಮ, ನಮ್ಮ ಜೀವನದ ಪರಮ ಪುರುಷಾರ್ಥ. ಅದನ್ನು ಬಯಲು ಎಂದೂ ಕರೆದಿದ್ದಾರೆ. ಅಂತಹ ಸ್ವಾತಂತ್ರ್ಯಕ್ಕಾಗಿ ಭಾರತವು ತನ್ನ ಪುರಾತನ ಕಾಲದಿಂದಲೂ ಬದುಕುತ್ತಾ ಬಂದಿದೆ. ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಾಗಲೆಲ್ಲ ಭಾರತೀಯರು ಭರತಮಾತೆಯ ಪದತಲದಲ್ಲಿ ತಮ್ಮ ತನು–ಮನ–ಧನಗಳನ್ನು ಅರ್ಪಿಸಿದ್ದಾರೆ. ಅದನ್ನು ರಸಋಷಿ ಕುವೆಂಪು ಅವರು "ಇಂದು ರಕ್ತದ ಬಿಂದು ನಾಳೆ ಸೌಖ್ಯದ ಸಿಂಧು" ಎಂದು ಕರೆದಿದ್ದಾರೆ.

ನಮ್ಮ ದೇಶದ ಸ್ವಾತಂತ್ರ್ಯ ಎಂದರೆ ಅದು ತ್ಯಾಗ, ಬಲಿದಾನಗಳ ಫಲ. ಭಾರತದ ಮೇಲೆ ದಾಳಿ ಮಾಡಲು ಬಂದ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗಿನ ಎಲ್ಲ ದಾಳಿಕೋರರ ಕ್ರೌರ್ಯವನ್ನು ಮೆಟ್ಟಿ ನಿಂತು ಭಾರತೀಯರು ಭಾರತಾಂಬೆಯ ಆತ್ಮಗೌರವವನ್ನು ಎತ್ತಿಹಿಡಿದಿರುವುದರ ಪ್ರತೀಕ ನಮ್ಮ ಸ್ವಾತಂತ್ರ್ಯ.

ಪ್ರಸ್ತುತ ೧೫.೦೮.೧೯೪೭ ರಂದು ನಾವು ಗಳಿಸಿದ ಸ್ವಾತಂತ್ರ್ಯದ ಅಮೃತಫಳಿಗೆಗೆ ಇದೀಗ ೧೫.೦೮.೨೦೨೧ಕ್ಕೆ ೭೫ನೆಯ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಭ್ರಮ. ೧೫.೦೮.೨೦೨೨ಕ್ಕೆ ೭೫ ವರ್ಷಗಳನ್ನು ಪೂರೈಸಿ ೭೬ನೆಯ ಸ್ವಾತಂತ್ರ್ಯೋತ್ಸವದ ಆತ್ಮನಿರ್ಭರ ಭಾರತದ ನವನಿರ್ಮಾಣದ ಅವಕಾಶಗಳ ಸಂಭ್ರಮ. ಈ ಒಂದು ವರ್ಷ ಕಾಲ ಭಾರತ ಸರ್ಕಾರ, ಕರ್ನಾಟಕ ಸರ್ಕಾರ "ಸ್ವಾತಂತ್ರ್ಯದ ಅಮೃತ ಮಹೋತ್ಸವ"ವನ್ನು ಆಚರಿಸುತ್ತಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಆಗಸ್ಟ್– ೨೦೨೧ರ ತಿಂಗಳು ಪೂರ್ತಿ "ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ" ಎಂಬ ಹೆಸರಿನಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ನಡೆದಿರುವ ಸ್ವಾತಂತ್ರ್ಯ ಹೋರಾಟ ಕುರಿತ ಆನ್ಲೈನ್ ಉಪನ್ಯಾಸಗಳನ್ನು ನಡೆಸಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಸುನಿಲ್ ಕುಮಾರ್ ಅವರು ಸ್ವಾತಂತ್ರದ ಅಮೃತ ಮಹೋತ್ಸವವನ್ನು ರಾಜ್ಯಾದ್ಯಂತ ಬೃಹತ್ ಸ್ವರೂಪದಲ್ಲಿ ಅರ್ಥಪೂರ್ಣವಾಗಿ ಆಚರಿಸಬೇಕೆಂದು ತೀರ್ಮಾನಿಸಿದ್ದಾರೆ. ಅವರಿಗೆ ರಾಜ್ಯದ ೭೫ ಸ್ಥಳಗಳಲ್ಲಿ ೭೫ ಸ್ವಾತಂತ್ರ್ಯ ಜಾಥಾಗಳು ನಡೆಯಬೇಕು, ಎಲ್ಲ ಜಿಲ್ಲೆಗಳಿಂದ ರಥಯಾತ್ರೆ ಆಗಬೇಕು, ಬೆಂಗಳೂರು ಮಹಾನಗರದಲ್ಲಿ ಮೂರು ದಿನಗಳ ಸಮಾವೇಶ, ಪ್ರದರ್ಶನ, ಪುಸ್ತಕ ಮಾರಾಟ ಮೊದಲಾದ ಹತ್ತು ಹಲವು ಚಟುವಟಿಕೆಗಳನ್ನು ನಡೆಸುವ ಮೂಲಕ ಹೊಸ ತಲೆಮಾರಿಗೆ ಸ್ವಾತಂತ್ರ್ಯದ ಅಮೃತವನ್ನುಣಿಸಬೇಕೆಂಬ ಕನಸಿದೆ. ಅದರ ಭಾಗವಾಗಿ ಅವರು ರಾಜ್ಯದ ೭೫ ಸ್ವಾತಂತ್ರ್ಯ ಹೋರಾಟದ ಸ್ಥಳಗಳನ್ನು ಗುರುತಿಸಿ ೭೫ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸುವ ಜವಾಬ್ದಾರಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿದ್ದಾರೆ. ನಮಗೆ ಜವಾಬ್ದಾರಿ ವಹಿಸಿದ್ದು ದಿನಾಂಕ: ೩೦.೧೧.೨೦೨೧ರಂದು ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ. ಅಂದಿನಿಂದಲೇ ಕಾರ್ಯಪ್ರವೃತ್ತರಾದ ನಾವು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಜಿಲ್ಲಾ ಸಹಾಯಕ ನಿರ್ದೇಶಕರಿಂದ ಸ್ಥಳಗಳ ಮಾಹಿತಿ ಪಡೆದೆವು. ಜೊತೆಗೆ ರಾಜ್ಯದ ಐದು ಜನರನ್ನು ಸಂಪಾದಕರನ್ನಾಗಿ ನಿಯೋಜಿಸಿ ದಿನಾಂಕ: ೦೩.೧೨.೨೦೨೧ರಂದು ಅಕಾಡೆಮಿಯಲ್ಲಿ ಸಂಪಾದಕರ ಸಭೆ ನಡೆಸಿದೆವು.



ಸಂಪಾದಕರಾಗಿ ಡಾ. ಮೃತ್ಯುಂಜಯ ರುಮಾಲೆ, ಹೊಸಪೇಟೆ, ಡಾ. ಎಸ್. ಜಿ. ರಾಮದಾಸ ರೆಡ್ಡಿ, ಮೈಸೂರು, ಡಾ. ಪ್ರಕಾಶ ಗ. ಖಾಡೆ, ಬಾಗಲಕೋಟೆ, ಶ್ರೀ ನರೇಂದ್ರಕುಮಾರ್ ಎಸ್.ಎಸ್., ಬೆಂಗಳೂರು ಹಾಗೂ ಶ್ರೀಮತಿ ರಾಜಲಕ್ಷ್ಮಿ ಕೋಡಿಬೆಟ್ಟು, ಮಂಗಳೂರು ಇವರೊಂದಿಗೆ ಎಲ್ಲ ಸ್ಥಳಗಳ ಬಗ್ಗೆ ಚರ್ಚಿಸಿ ೭೫ ಸ್ಥಳಗಳನ್ನು ಆಯ್ಕೆ ಮಾಡಿದೆವು. ಒಬ್ಬೊಬ್ಬ ಸಂಪಾದಕರಿಗೆ ೧೫ ಸ್ಥಳಗಳನ್ನು ಹಂಚಿ, ೧೫ ಲೇಖಕರಿಂದ ೧೫ ಕಿರುಪುಸ್ತಕಗಳನ್ನು ಬರೆಯಿಸಿಕೊಡುವ ಜವಾಬ್ದಾರಿ ನೀಡಿದೆವು. ಎರಡು ತಿಂಗಳ ಅವಧಿಯಲ್ಲಿ ಈ ೭೫ ಪುಸ್ತಕಗಳು ಪ್ರಕಟವಾಗುತ್ತಿವೆ. ಇದೊಂದು ತುರ್ತಾದ ಆಂದೋಲನಾತ್ಮಕವಾದ ಪ್ರಯತ್ನ. ಇದಕ್ಕೆ ಸಂಪೂರ್ಣ ಸಹಕಾರ ನೀಡಿದ ಮಾನ್ಯ ಸಚಿವರಾದ ಶ್ರೀ ವಿ ಸುನಿಲ್ ಕುಮಾರ್ ಅವರಿಗೆ, ಎಲ್ಲಾ ಸಂಪಾದಕರಿಗೆ, ಎಲ್ಲಾ ಲೇಖಕರಿಗೆ, ಇಲಾಖೆಯ ಕಾರ್ಯದರ್ಶಿಗಳಾದ ಡಾ. ಎನ್. ಮಂಜುಳಾ ಅವರಿಗೆ, ನಿರ್ದೇಶಕರಾದ ಶ್ರೀ ಎಸ್. ರಂಗಪ್ಪ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಅಶೋಕ್ ಎನ್. ಚಲವಾದಿ ಅವರಿಗೆ ಹಾಗೂ ಎಲ್ಲಾ ಅಧಿಕಾರಿ ವರ್ಗಕ್ಕೆ ಸಾಹಿತ್ಯ ಅಕಾಡೆಮಿಯ ಸರ್ವ ಸದಸ್ಯರಿಗೆ ಪ್ರೀತಿಯಿಂದ ವಂದಿಸುತ್ತೇನೆ. ಯೋಜನೆ ಪೂರ್ಣಗೊಳ್ಳಲು ವಿಶೇಷವಾಗಿ ನೆರವಾದ ಮಿತ್ರರಾದ ಶ್ರೀ ಮಾಲತೀಶ್ ಭಟ್, ಶ್ರೀ ಹರ್ಷ ನಾರಾಯಣ, ಶ್ರೀಮತಿ ನಯನಾ ಎಸ್. ಅವರನ್ನು ನೆನೆಯುತ್ತಾ ವಂದಿಸುತ್ತೇನೆ. ಕಡಿಮೆ ಅವಧಿಯಲ್ಲಿ ಹಗಲಿರುಳು ಶ್ರಮಿಸಿದ ದಣಿವರಿಯದ ದುಡಿಮೆಗಾರರಾದ ರಿಜಿಸ್ಟ್ರಾರ್ ಎನ್. ಕರಿಯಪ್ಪ, ನಮ್ಮ ಬಳಗ ವಿ. ಹರೀಶ್‌ಕುಮಾರ್, ಹರೀಶ್, ಸೈಯದ್ ಜಾವೀದ್, ಸುಚಿತ್ರ ಎಸ್. ಜಿ., ಗೋಪಾಲ ಎನ್., ಸುನೀಲ್ ಅವರಿಗೆ ಹಾಗೂ ಸುಂದರವಾಗಿ ಮುದ್ರಿಸಿದ ರಶ್ಮಿ ಪ್ರಿಂಟರ್ಸ್ ಬಳಗಕ್ಕೆ, ಮುಖಪುಟ ರಚಿಸಿಕೊಟ್ಟ ಶ್ರೀ ಮುರಳೀಧರ ವಿ. ರಾಥೋಡ್ ಅವರಿಗೆ ವಂದಿಸುತ್ತೇನೆ.

**ಬಿ. ವಿ. ವಸಂತಕುಮಾರ್**
ಅಧ್ಯಕ್ಷರು

# ಲೇಖಕರ ಮಾತು

ಸ್ವಾತಂತ್ರ್ಯದ ೭೫ ವರುಷದ ಅಮೃತ ಮಹೋತ್ಸವದಲ್ಲಿ ಬೆನ್ನ ಹಿಂದಿನ ಬೆಳಕುಗಳನ್ನು ಹುಡುಕಿ ಅವರಿಂದ ಈ ಸ್ವಾತಂತ್ರ್ಯದ ಸಂಪುಟವನ್ನು ತುಂಬಿಸಲು ಸಂಕಲ್ಪ ಮಾಡಿರುವ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾದ ಡಾ. ಬಿ.ವಿ. ವಸಂತಕುಮಾರ ಅವರನ್ನು ನೆನೆದರಷ್ಟೆ ಸಾಲದು. ಇಡೀ ಕರ್ನಾಟಕದ ಸ್ವಾತಂತ್ರ್ಯದ ಹೂಮಾಲೆಯನ್ನು ಕಟ್ಟಿಕೊಟ್ಟಿದುದಕ್ಕೆ ಕರ್ನಾಟಕ ಜನತೆ ಕೃತಜ್ಞರು.

ಯಾವುದೋ ಒಂದು ಕ್ರಾಂತಿ ಅಥವಾ ಹೋರಾಟ ದಿಢೀರನೆ ಜನ್ಮ ತಳೆಯುವುದಿಲ್ಲ. ಅದಕ್ಕಾಗಿ ಹಿನ್ನೆಲೆಯಾಗಿ ಜನ ಅನುಭವಿಸಿದ ನೋವು, ಕಷ್ಟ, ಅಪಮಾನ ಜನರ ಅಂತರಂಗದ ಲಾವಾರಸವಾಗಿ ಜನ್ಮ ತಳೆಯುತ್ತದೆ. ಅವರ ಧಾರ್ಮಿಕ ನಂಬಿಕೆಗಳಿಗೆ, ಪರಂಪರೆಗೆ ಏನಾದರೂ ಆಡಳಿತ ಧಾರೆಯು ಕುಂದು ತಂದರೆ ಅದು ಕುದಿಯುತ್ತದೆ. ಆಗ ಬಾಹ್ಯ ಅಂಶಗಳು (ಉದಾ: ಸ್ವಾತಂತ್ರ್ಯದ ಕಲ್ಪನೆ) ಅದರಿಂದ ಆಗುವ ಲಾಭಗಳು, ಅದನ್ನು ಸಂಪಾದಿಸಲು ಇತರೆಡೆ ನಡೆದ ಹೋರಾಟಗಳು, ಹುತ್ಮಾತ್ಮರ ಕಥೆಗಳು ಪ್ರಚೋದಿಸಿದರೆ, ಸರ್ಕಾರಗಳ ಕ್ರೂರ ದಬ್ಬಾಳಿಕೆ, ಜನರ ಕಷ್ಟ ಶಮನ ಮಾಡದ ಆಡಳಿತವು ಈಗಾಗಲೇ ಹೊತ್ತಿಕೊಂಡು ಹೊಗೆಯಾಡುತ್ತಿದ್ದ ಅಗ್ನಿಕುಂಡಕ್ಕೆ ಆಜ್ಯ(ತುಪ್ಪ) ಹೊಯ್ಯುತ್ತವೆ. ಆಗ ಕ್ರಾಂತಿ ಅಥವಾ ಹೋರಾಟಗಳು ಭುಗಿಲಿಡುತ್ತವೆ, ಜ್ವಾಲೆಗಳು ಘೂತ್ಕರಿಸುತ್ತವೆ, ಆವರಿಸುತ್ತವೆ. ಇದೆ ಹೈದರಾಬಾದ ಪ್ರಾಂತದಲ್ಲಿ ಆಗಿದ್ದು, ನಮ್ಮ ೫ ಜಿಲ್ಲೆಗಳಲ್ಲಿ ಸಂಭವಿಸಿದುದು.

ಭಾರತವು ೧೯೪೭ ಆಗಸ್ಟ ೧೫ ರಂದು ಸ್ವತಂತ್ರ ಆದಾಗ ಹೈದರಾಬಾದ ಕರ್ನಾಟಕವು ಪಾರತಂತ್ರ್ಯದಲ್ಲಿತ್ತು. ಇಲ್ಲಿ ತ್ರಿರಂಗಿ ಧ್ವಜವು ನಿಷೇಧ, ಬಟ್ಟೆ, ವಂದೆ ಮಾತರಂ ಗೀತೆ ದೇಶದ್ರೋಹದ ಹಾಡು, ಜೈಹಿಂದ್ ಘೋಷಣೆಗೆ ಜೈಲುವಾಸ. ಇದನ್ನು ನಾವು ೧೯೪೭ ಆಗಸ್ಟ ೧೫ ರಿಂದ ೧೯೪೮ ಸೆಪ್ಟೆಂಬರ ೧೭ ರವರೆಗೆ ಅನುಭವಿಸಿದ್ದೇವೆ. ಹೈದರಾಬಾದ ಪ್ರಾಂತದಲ್ಲೆಲ್ಲಾ "ಅಜಾದ

ಹೈದರಾಬಾದ" ಸಲುವಾಗಿ ರಾಕ್ಷಸಿ ಕೃತ್ಯಗಳ ವಿರುದ್ದ ಹೋರಾಡಿದ ಕಥೆಯೇ ಈ ಚಿಕ್ಕ ಪುಸ್ತಿಕೆಯ ಅಂತರಾಳ. ಅದನ್ನು ಎದುರಿಸಿದ ಬಗೆಯೆ ಚಳ್ಳೆಕೂಡ್ಲೂರು ಶಿಬಿರದ ಹೋರಾಟದ ವೀರಗಾಥೆ.

ಚಳ್ಳೆಕೂಡ್ಲೂರು ಶಿಬಿರ ಇದ್ದದ್ದು ಬಳ್ಳಾರಿ ಜಿಲ್ಲೆ (ಆಗ ಮದ್ರಾಸ್ ಪ್ರಾಂತ ಆಂಗ್ಲರ ನೇರ ಆಡಳಿತದ ಜಿಲ್ಲೆ) ಅಲ್ಲಿ ಈ ಹೋರಾಟವಿರಲಿಲ್ಲ. ಆದರೆ ನಿಜಾಮ ಆಡಳಿತ ಹೊಂದಿದ ರಾಯಚೂರು ಜಿಲ್ಲೆಯ ಗಡಿಗೆ ತುಂಗಭದ್ರ ನದಿಯೇ ಗಡಿ. ಚಳ್ಳೆಕೂಡ್ಲೂರಿಗೆ ರಾಯಚೂರು ಜಿಲ್ಲೆ ಆಯನೂರು ೨ ಕಿ.ಮಿ. ದಿಂದ ೯ ಕಿ.ಮೀ. ಹೀಗೆ ಗಡಿಗಳು ಹೊಂದಿಕೊಂಡಿದ್ದವು. ಸ್ವಾತಂತ್ರ್ಯ ಹೋರಾಟಗಾರರು ರಕ್ಷಣೆ ಪಡೆಯಲು ಇದು ಬಹಳ ಸಹಕಾರಿಯಾಗಿತ್ತು. ಆದ ಕಾರಣ ಇಲ್ಲಿ ಶಿಬಿರ ಸ್ಥಾಪನೆಯಾಗಿತ್ತು. ಅಲ್ಲಿ ಊಟ, ವಸತಿ, ಶಸ್ತ್ರಾಸ್ತ್ರ ಇಡಲು ಸಹಕಾರಿ, ಕಾರ್ಯಚರಣೆ ಮಾಡಿ ಅವಿತುಕೊಳ್ಳುವ ಸೂಕ್ತವಾದ ಸ್ಥಳ. ಆದ ಕಾರಣ ಅಲ್ಲಿ ಶಿಬಿರ ಮಾಡಲಾಗಿತ್ತು. ರಾಯಚೂರು ಜಿಲ್ಲೆಯ ಎಲ್ಲ ಶಿಬಿರಗಳು ಗಡಿಯ ಹೊರಗಡೆ ಮದ್ರಾಸ್ ಪ್ರಾಂತದ ಬಳ್ಳಾರಿ ಜಿಲ್ಲೆ ಇಲ್ಲವೆ ಮುಂಬೈ ಪ್ರಾಂತದ ಧಾರವಾಡ ಜಿಲ್ಲೆಯ ಗಡಿ ಗುಂಟ ಇದ್ದವು.

ಕರೋಡಗಿರಿ ನಾಕಾ ಎಂದರೆ Actroy ಅಥವಾ ಪರ ದೇಶಗಳಿಂದ ಬರುವ ವಸ್ತುಗಳಿಗೆ ಹಾಕುವ ಕಸ್ಟಮ್ ಡ್ಯೂಟಿ ಕೇಂದ್ರಗಳು. ಇವು ಹೈದರಾಬಾದ ಗಡಿಗುಂಟ ಇದ್ದವು. ಇವುಗಳಿಗೆ ಸಶಸ್ತ್ರ ಪೋಲಿಸರ ಕಾವಲಿತ್ತು. ಅಲ್ಲಿ ಹಣ ಹಾಗೂ ಸಶಸ್ತ್ರಗಳು ಇರುತ್ತಿದ್ದವು. ಇವುಗಳ ಕೊಳ್ಳೆ ಹೊಡೆಯುವ ಕೆಲಸವನ್ನು ಸ್ವಾತಂತ್ರ್ಯ ಯೋಧರು ಮಾಡಿ ಆಡಳಿತಕ್ಕೆ ಅಸಹಕಾರವನ್ನು ನೀಡಿದರು. ಇದು ಒಂದು ರೀತಿಯ ಕಾಯ್ದೆಭಂಗ ಚಳುವಳಿ.

"ನಜರಾನಾ ಅದಾ" ಎಂದರೆ ನಿಜಾಮನ ಭೇಟಿ ಮಾಡಲು ಹೋಗ ಬೇಕಾದ ವ್ಯಕ್ತಿಯು ರಾಜನ ಗೌರವಕ್ಕಾಗಿ ಬೆಲೆ ಬಾಳುವ ಮುತ್ತು ರತ್ನ ಇಲ್ಲವೆ ಹಣದ ಥೈಲಿಯನ್ನು ನೀಡಬೇಕಾಗಿತ್ತು. ಇದೊಂದು ಜನರಿಗೆ ಭಾರವಾಗಿತ್ತು. ಕಷ್ಟ ಹೇಳಿ ಕೊಳ್ಳಲು ಆಸ್ಪದವೇ ಪ್ರಜೆಗಳಿಗೆ ಇರಲಿಲ್ಲ. ಅದೇ ಮೈಸೂರು ಅರಸರಿಗೆ ಒಂದು ನಿಂಬೆ ಹಣ್ಣು ಗೌರವದಿಂದ ಸಲ್ಲಿಸಿ ಭೇಟಿಯಾಗ ಬಹುದಿತ್ತು. ಹೈದರಾಬಾದ ನಿಜಾಮನು ಬರಗಾಲದಲ್ಲೂ ಹಪ್ತೆ (ಕಂದಾಯ) ವಸೂಲಿ ಮಾಡುತ್ತಿದ್ದನು. ಇವನು ಅತ್ಯಂತ ಜಿಪುಣನು. ಹಣಕ್ಕಾಗಿ ಕ್ರೂರ ಆಡಳಿತ



ನಡೆಸಿದನು. ಇವನು ಭಾರತದ ಎಲ್ಲ ಸಂಸ್ಥಾನಿಕರಿಗಿಂತಲೂ ಹೆಚ್ಚು ಶ್ರೀಮಂತನು. ಆದರೂ ಅತ್ಯಂತ ಕಡಿಮೆ ದರದ ೧೨ ಪೈಸೆಗೆ ೧೦ ಸಿಗರೇಟು ದೊರೆಯುವ ಚಾರಮಿನಾರ ಸಿಗರೇಟ ಸೇದುತ್ತಿದ್ದನು. ಹೈದರಾಬಾದ ಪ್ರಾಂತ ಭಾರತದಲ್ಲಿ ವಿಲೀನವಾದ ಮೇಲೆ ಅವರ ರತ್ನಾಭರಣ, ವಜ್ರಗಳನ್ನು ಹೊಂದಿದ್ದ ಅನೇಕ ಪೆಟ್ಟಿಗೆಗಳನ್ನು ಬಂಗಾರದ ಗಟ್ಟಿಗಳನ್ನು ಇಡಲು ಮುಂಬೈ ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾಕ್ಕೆ ಸಾಗಿಸಿದಾಗ ಇವುಗಳು ಹಿಡಿಯುವಷ್ಟು ಜಾಗದ ಕೋಣೆಯೇ ಇರಲಿಲ್ಲ. ನಂತರ ಮರ್ಕಂಟೈಲ್‌ನ ಬ್ಯಾಂಕ್ ಆಫ್ ಇಂಡಿಯಾದ ನೆಲಮಾಳಿಗೆಯಲ್ಲಿ ಇಡಲಾಯಿತು. ಇದಲ್ಲದೆ ೪೬ ಕೋಟಿ ರೂಪಾಯಿಗಳ ವಿಶ್ವಸ್ಥ ನಿಧಿಯನ್ನು ರಚಿಸಲಾಯಿತು. ಇದಲ್ಲದೆ ಅಸಂಖ್ಯಾತ ಪತ್ನಿ ಉಪಪತ್ನಿಯರು ಅವನಿಗಿದ್ದರು. ಇದು ಇತಿಹಾಸ– ಹೀಗೆ ಏನೇನು ನೆನಪು ಇರಲಿ. ಪ್ರೀತಿಯಿಂದ ಓದಿರಿ. ಸ್ವಾತಂತ್ರ್ಯ ಹೋರಾಟಗಾರರನ್ನು ನೆನೆಯಿರಿ. ಭ್ರಷ್ಟಾಚಾರ ಮುಕ್ತವಾದ ಜಾತ್ಯಾತೀತ ಭಾರತವನ್ನು ನಿರ್ಮಾಣ ಮಾಡಿರಿ.

ಈ ಚಿಕ್ಕ ಪುಸ್ತಿಕೆಯಲ್ಲಿ ಆನೆಯನ್ನು ಕನ್ನಡಿಯಲ್ಲಿ ಹಿಡಿಯುವಂತೆ, ಪಕ್ಷಿ ನೋಟದಲ್ಲಿ ವಿವರಿಸಿರುವೆನು. ಹೆಚ್ಚಿನ ವಿವರ ಅಪೇಕ್ಷಿಸುವವರು 'ಹೈದರಾಬಾದ ಪ್ರಾಂತ ವಿಮೋಚನೆಯಲ್ಲಿ ರಾಯಚೂರು ಜಿಲ್ಲೆಯ ಹೋರಾಟ' ಲೇ: ರಾಮಣ್ಣ ಹವಳೆ ಓದಬಹುದು. ಈ ಕೃತಿಯ ಸಂಪಾದಕರಿಗೂ, ಕನ್ನಡ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಿಗೂ, ಪ್ರಕಾಶಕರಾದ ರಿಜಿಸ್ಟ್ರಾರ್ ಅವರಿಗೂ, ಸಿಬ್ಬಂದಿಗೂ ಧನ್ಯವಾದಗಳು.

**– ರಾಮಣ್ಣ ಹವಳೆ**

# ಪರಿವಿಡಿ


ಶುಭ ಸಂದೇಶ ೩

ಶುಭ ಸಂದೇಶ ೫

ಪ್ರಧಾನ ಸಂಪಾದಕರ ಮಾತು ೭

ಲೇಖಕರ ಮಾತು ೧೧

ಅಧ್ಯಾಯ–೧

ಸ್ವಾತಂತ್ರ್ಯ ಹೋರಾಟದಲ್ಲಿ ಚಳ್ಳೆಕೂಡ್ಲೂರು ಶಿಬಿರ ಅಥವಾ ಹೆಡಗಿನಾಳ ಸುತ್ತಮುತ್ತ ಸ್ವಾತಂತ್ರ್ಯ ಹೋರಾಟ ೧೭

ಅಧ್ಯಾಯ–೨

ಹೈದರಾಬಾದ್ ಪ್ರಾಂತ ೨೦

ಅಧ್ಯಾಯ–೩

ಆಜಾದ್ ಹೈದರಾಬಾದ್ ಮತ್ತು ಸಾಂವಿಧಾನಿಕ ಹೋರಾಟಗಳು ೨೬

ಅಧ್ಯಾಯ–೪

ಆಜಾದ ಹೈದರಾಬಾದ್ ಕನಸು ನನಸು ಮಾಡಲು ನಿಜಾಮನ ಹುನ್ನಾರಗಳು ೩೨

ಅಧ್ಯಾಯ–೫

ಚಳ್ಳೆಕೂಡ್ಲೂರು ಮೊದಲಾದ ಶಿಬಿರಗಳ ಭೂಗತ ಹೋರಾಟಗಳು: ಚಳ್ಳೆಕೂಡ್ಲೂರು, ತುಂಗಭದ್ರಾ, ಮಂತ್ರಾಲಯ ೩೭

ಅಧ್ಯಾಯ–೬

ಭಾರತ ಸರ್ಕಾರದ ಕ್ರಮಗಳು: ನಿಜಾಮ ಸರ್ಕಾರದ ಆಡಳಿತಕ್ಕೆ ಬೇಸತ್ತು ಅದಕ್ಕೆ ಬುದ್ಧಿಕಲಿಸಲು ಹೇರಿದ ಮೊದಲನೆಯ ಕ್ರಮವೇ ಆರ್ಥಿಕ ದಿಗ್ಬಂಧನ ೫೫

ಆಧಾರ ಗ್ರಂಥಗಳು ೫೯

ಹೈದ್ರಾಬಾದ್ ಸಂಸ್ಥಾನ ನಕಾಶೆ ೬೦

ಹೈದ್ರಾಬಾದ್ ಕರ್ನಾಟಕ ೬೦

ಆಧಾರ ಗ್ರಂಥಗಳು ೫೯

ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ ೬೧

---

# ಸ್ವಾತಂತ್ರ್ಯ ಹೋರಾಟದಲ್ಲಿ ಚಳ್ಳಕೂಡ್ಲೂರು ಶಿಬಿರ
# ಅಥವಾ
# ಹೆಡಗಿನಾಳ ಸುತ್ತಮುತ್ತ ಸ್ವಾತಂತ್ರ್ಯ ಹೋರಾಟ

## ಅಧ್ಯಾಯ–೧

ಯಾವುದೋ ಒಂದು ಕ್ರಾಂತಿ ಸಂಭವಿಸಬೇಕಾದರೆ ಅದು ತಕ್ಷಣ ಹುಟ್ಟುವುದೂ ಅಲ್ಲ. ಭುಗಿಲಿಡುವುದು ಅಲ್ಲ. ಅದರ ಅಂತರ ಜ್ವಾಲೆಗಳು ಪ್ರಪ್ರಥಮವಾಗಿ ಸಾಮಾಜಿಕ ಬದುಕಿನಲ್ಲಿ ಕಾಣಬರುತ್ತವೆ. ಸ್ವಾತಂತ್ರ್ಯ ಸಮರವಾಗಲಿ(೧೮೫೭) ರಷ್ಯಾದ ಕ್ರಾಂತಿಯಾಗಲಿ ಇವಕ್ಕೆ ಸಾಕ್ಷಿಗಳು. ಭಾರತವು ಕೇವಲ  ಸತ್ಯಾಗ್ರಹ, ಅಹಿಂಸಾತ್ಮಕ ಚಳವಳಿ ಹಾಗೂ ಬಹಿಷ್ಕಾರಗಳಿಂದ ಮಾತ್ರ ಸ್ವಾತಂತ್ರ್ಯ ಪಡೆಯಲಿಲ್ಲ ಎಂಬುದನ್ನು ಭಾರತದ ಸಮಗ್ರ ಸ್ವಾತಂತ್ರ ಇತಿಹಾಸ ಓದಿದರೆ ಸ್ಪಷ್ಟ ಜ್ಞಾನವಾದೀತು. ಕ್ರಾಂತಿಕಾರಿಗಳಾದ ರಾಮಪ್ರಸಾದ ಬಿಸ್ಮಿಲ್ಲ, ಚಂದ್ರಶೇಖರ ಆಜಾದ್, ಭಗತ್‌ಸಿಂಗ್, ಸೂರ್ಯಸೇನ, ಸುಭಾಷಚಂದ್ರಭೋಸ್ ಇವರ ಹೋರಾಟ ಹಾಗೂ ಬಲಿದಾನದ ಪುಣ್ಯದ ಫಲ ಗಾಂಧೀಜಿಯ ಅಹಿಂಸಾತ್ಮಕ ಚಳವಳಿಗೆ ದೊರಕಿತು. ಚೌರಿಚೌರಾ ಘಟನೆ, ೧೯೪೬ ರ ನೌಕಾದಳದ ಬಂಡಾಯ ಬ್ರಿಟಿಷರ ನೆಲದ ಬೇರುಗಳನ್ನು ಸಡಿಲಿಸಿತು.

ಭಾರತವನ್ನು ಬಹುಕಾಲ ದಾಸ್ಯದಲ್ಲಿಡಲು, ಸಾಧ್ಯವಿಲ್ಲವೆಂದು ಆಂಗ್ಲ ಸರ್ಕಾರಕ್ಕೆ ಮನವರಿಕೆಯಾಯಿತು. ಗಾಂಧೀಜಿಯವರ ತಣ್ಣನೆಯ  ಅಹಿಂಸಾತ್ಮಕ ಹೋರಾಟದ ಬಿರುಗಾಳಿಯಲ್ಲಿಯೂ ಬಿಸಿಯ ಅನುಭವವಾಯಿತು. ಈ ಜ್ವಾಲಾಮುಖಿ ಕಿಡಿ ಇಡುವುದಕ್ಕಿಂತ ಮುಂಚೆ ಅದರ ಪಾಲಿಗೆ ಅದನ್ನು ಬಿಟ್ಟು ಬಿಡೋಣ ಎಂದೆನಿಸಿತು. ಭಾರತೀಯರ ಮೃದು ಧೋರಣೆ, ಎರಡನೆಯ ಮಹಾಯುದ್ಧದ ಸಹಾಯ, ಬ್ರಿಟಿಷರ ರಾಜನೀತಿ ತಜ್ಞರ ಹೇಳಿಕೆಯನ್ವಯ

ಇಂಗ್ಲೆಂಡ್ ಸರ್ಕಾರದ ಪ್ರಧಾನಿ ಆಟ್ಲಿಯವರು ೨೦–೦೨–೧೯೪೭ ರಂದು ಭಾರತಕ್ಕೆ ಸ್ವಾತಂತ್ರ್ಯ ಕೊಡುವ ಹೇಳಿಕೆ ನೀಡಿದರು. ೧೯೪೮ ಜೂನ್ ತಿಂಗಳೊಳಗಾಗಿ ಭಾರತವು ಸ್ವತಂತ್ರ ರಾಷ್ಟ್ರವಾಗುವುದೆಂದು ಸಾರಿ ೨೪–೦೩–೧೯೪೭ ರಂದು ಲಾರ್ಡ್‌ಮೌಂಟ್ ಬ್ಯಾಟನ್ನರನ್ನು ಸ್ವಾತಂತ್ರ್ಯ ಪ್ರಕ್ರಿಯೆ ಪೂರ್ಣಗೊಳಿಸಲು (ವೈಸರಾಯರನ್ನಾಗಿ) ರಾಜಪ್ರತಿನಿಧಿಯನ್ನಾಗಿ ಭಾರತಕ್ಕೆ ಕಳುಹಿಸಿದರು.

ಆಗ ಆಗಿನ ಗೃಹಮಂತ್ರಿಯೂ, ರಾಜ್ಯಗಳ ಮೇಲ್ವಿಚಾರಣೆ ಮಂತ್ರಿಯಾಗಿದ್ದ ಸರ್ದಾರ ವಲ್ಲಭಭಾಯಿ ಪಟೇಲ್‌ರು ಬಹು ಚಾಣಾಕ್ಷತೆಯಿಂದ ಸಾಮ, ದಾನ, ಭೇದ, ದಂಡ ಎಂಬ ಚಾಣಕ್ಯನ ರಾಜನೀತಿಯನ್ನು ಉಪಯೋಗಿಸಿ ಭಾರತದಲ್ಲಿ ಒಳಗೊಳ್ಳುತ್ತಿರುವ ೫೬೨ ಸಂಸ್ಥಾನಗಳನ್ನು ಭಾರತದಲ್ಲಿ ವಿಲೀನಗೊಳಿಸಲು ಹರಸಾಹಸ ಪಟ್ಟರು. ೫೬೨ ಸಂಸ್ಥಾನಗಳಲ್ಲಿ ೫೫೯ ಸಂಸ್ಥಾನಗಳು ಭಾರತದಲ್ಲಿ ವಿಲೀನವಾಗಲು ಒಪ್ಪಿದವು. ಇದನ್ನು ಕಾರ್ಯಗತ ಮಾಡಿದವರು ಭಾರತದ ಉಕ್ಕಿನ ಮನುಷ್ಯನೆಂದು ಖ್ಯಾತಿ ಪಡೆದ ಉಪಪ್ರಧಾನಿಯೂ, ಗೃಹ ಮಂತ್ರಿಯೂ ರಾಜ್ಯಗಳ ಮೇಲ್ವಿಚಾರಣೆ ಮಂತ್ರಿಯಾದ ಸರ್ದಾರ ವಲ್ಲಭಭಾಯಿ ಪಟೇಲರು.

ಬ್ರಿಟಿಷ್ ಪಾರ್ಲಿಮೆಂಟ್ ೧೯೪೭ ರ ಜುಲೈ ತಿಂಗಳಲ್ಲಿ "ಇಂಡಿಯನ್ ಇಂಡಿಪೆಂಡೆನ್ಸ್ ಆಕ್ಟ್" ಅಂಗೀಕರಿಸಿತು. ಅದಕ್ಕೆ ಬ್ರಿಟನ್ ಅರಸರ ಹಸ್ತಾಕ್ಷರಗಳು ಜುಲೈ ೧೮ ಕ್ಕೆ ಬಿದ್ದವು".

**ಇಂಡಿಯನ್ ಇಂಡಿಪೆಂಡೆಂಟ್ ಆಕ್ಟ್:**

ಈ ಕಾಯಿದೆಯಲ್ಲಿ ಬಹಳ ಮಹತ್ವದ ಭಾಗ ಹೀಗಿದೆ. ಬ್ರಿಟಿಷರ ಸಾರ್ವಭೌಮತ್ವವು ಭಾರತ ದೇಶದಲ್ಲಿ ಕೊನೆಯಾಗುತ್ತದೆ. ಅದರಿಂದ ಭಾರತದಲ್ಲಿನ ಸಂಸ್ಥಾನಗಳು ಭಾರತದ ಒಕ್ಕೂಟ ಅಥವಾ ಪಾಕಿಸ್ತಾನದಲ್ಲಿ ಸೇರಬೇಕು. ಅಥವಾ ಈಗಿರುವ ಹಕ್ಕು ಮಾನ್ಯತೆಗಳೊಂದಿಗೆ ಸ್ವತಂತ್ರ ವಾಗಿಯೂ ಇರಬಹುದೆಂದು ಸಾರಿತು.

**ಆಜಾದ ಹೈದ್ರಾಬಾದ್ ಕನಸು:**

ಆಂಗ್ಲರು ಭಾರತ ಬಿಟ್ಟು ಹೋದಾಗ ನವಾಬ ನಿರ್ಮಿತ ಹೈದ್ರಾಬಾದ್



ಜಿಂದಾಬಾದ್ ಎಂದು ಪ್ರತಿಗಾಮಿಗಳು, ಮತೀಯ ಶಕ್ತಿಗಳು ಕುಹಕ ಘೋಷಣೆಗಳನ್ನು ಮಾಡಿ ವಾತಾವರಣವನ್ನು ಕದಡುವ ಪ್ರಯತ್ನ ಮಾಡಿದರು. ಭಾರತ ಆಗಸ್ಟ್ ೧೫ ರಂದು ಸ್ವತಂತ್ರವಾದಾಗ, ಹೈದ್ರಾಬಾದ್ ಪ್ರಾಂತ ಮಾತ್ರ ನಿರಂಕುಶ ಪ್ರಭುತ್ವವಾಗಿ ಉಳಿದಾಗ ಜಗತ್ತಿಗೆ ನಿಜಾಮನ ಹುನ್ನಾರ ಹೊಳೆಯಿತು. ಇದೇ ರೀತಿ ಜುನಾಗಢದ ನವಾಬ, ಕಾಶ್ಮೀರದ ರಾಜಾ ಹರಿಸಿಂಗ್ ಸ್ವತಂತ್ರ ಘೋಷಿಸಿ ಕೊಂಡರು.

**ಭಾರತ ಸ್ವಾತಂತ್ರ್ಯ ಘೋಷಣೆ:**

ಆಗಸ್ಟ್ ೧೫, ೧೯೪೭ ರಂದು ಭಾರತ ಸ್ವತಂತ್ರವಾಯಿತು. ದಿಲ್ಲಿಯ ಕೆಂಪು ಕೋಟೆಯ ಮೇಲೆ ಮಧ್ಯರಾತ್ರಿ ೧೨ ಗಂಟೆ ಮುಗಿಯುತ್ತಲೆ ಭಾರತದ ಧ್ವಜ ಹಾರಾಡಿತು. 'ಜನಗಣಮನ' ವಿಶ್ವ ಆಲಿಸಿತು. ಭಾರತೀಯರು ಭಾರತ ಮಾತಾಕಿ ಜೈ, ಜೈಹಿಂದ್, ಮಹಾತ್ಮಾಗಾಂಧೀಜಿಕಿ ಜೈ ಎನ್ನುತ್ತಾ ಭಾರತದ ಬೀದಿ ಬೀದಿಯಲ್ಲಿ ಸ್ವಾತಂತ್ರ್ಯ ಜ್ಯೋತಿಯನ್ನು ಬೆಳಗಿಸಿದರು.

ಪ್ರಧಾನಮಂತ್ರಿ ಜವಾಹರಲಾಲ್ ನೆಹರೂರವರು ಭಾವನಾಪರವಶರಾಗಿ ಕಂಠ ತುಂಬಿ ಮಾತನಾಡುತ್ತಾ ಸಮಸ್ತ ಪ್ರಪಂಚವು ನಿದ್ರಿಸುತ್ತಿದ್ದಂತೆ ಭಾರತವು ಸ್ವಾತಂತ್ರ್ಯ ಘೋಷಿಸಿ ಚೇತನದ ಚಿಲುಮೆಯಂತೆ ಮೇಲೆಳುತ್ತಿದೆ. ನಮ್ಮ ಕಷ್ಟದ ಕಾಲ ಹಿಂದಾಯಿತು. ಭಾರತ ಭವ್ಯ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲಿದೆ. ನಾಡಿನ ಸೇವೆಗೆ ಕಂಕಣ ಬದ್ಧರಾಗಿರಿ ಎಂದು ಹೇಳಿದಾಗ ಸೇರಿದ್ದ ಲಕ್ಷಾಂತರ ಜನರ ಚಪ್ಪಾಳೆ ಗಡಚಿಕ್ಕಿದವು. ಭಾರತದಲ್ಲೆಲ್ಲಾ ಮಾರ್ದನಿ ಅನುರಣಿಸಿತು.

❑

# ಅಧ್ಯಾಯ–೨
# ಹೈದರಾಬಾದ್ ಪ್ರಾಂತ

ಈಗಾಗಲೆ ತಿಳಿಸಿದಂತೆ ಇಂಡಿಯನ್ ಇಂಡಿಪೆಂಡೆಂಟ್ ಆಕ್ಟ್‌ನ ದುರುಪಯೋಗ ಪಡೆದು ತಾತ್ಕಾಲಿಕವಾಗಿ ಭಾರತದೊಡನೆ ಮಾಡಿಕೊಂಡ "ಯಥಾಸ್ಥಿತಿ ಒಪ್ಪಂದದಂತೆ ಹೈದರಾಬಾದ್ ನಿಜಾಮನು ಜೂನ್ ೨೬, ೧೯೪೭ ರಂದು ಸ್ವತಂತ್ರ ಸಾರಿದನು.

ಈ ಹೈದರಾಬಾದ್ ಪ್ರಾಂತ ಏನು ಎಂಬುದನ್ನು ನೋಡೋಣ.

ಹೈದ್ರಾಬಾದ್ ಮುಕ್ತಿ ಅಂದೋಲನವನ್ನು ತಿಳಿದು ಕೊಳ್ಳುವಾಗ ಕೆಲವು ಕೊಂಡಿಗಳ ಅಗತ್ಯವಿದೆ. ಪ್ರಪ್ರಥಮವಾಗಿ ಹೈದರಾಬಾದ್ ಪ್ರಾಂತವು ತೆಲಂಗಾಣ (೮), ಮರಾಠವಾಡ (೫) ಮತ್ತು ಕರ್ನಾಟಕದ (೩) ಜಿಲ್ಲೆಗಳನ್ನು ಒಳಗೊಂಡ ೧೬ ಜಿಲ್ಲೆಗಳ ಪ್ರಾಂತ. ಭಾರತದ ದಕ್ಷಿಣಕ್ಕಿದ್ದ ಆಯಕಟ್ಟಿನ ಸ್ಥಳ. ಕರ್ನಾಟಕದ ಮೂರು ಜಿಲ್ಲೆಗಳು ಬೀದರ್, ಗುಲ್ಬರ್ಗಾ ಹಾಗೂ ರಾಯಚೂರು ಜಿಲ್ಲೆ.

ಇದು ಹೈದರಾಬಾದ್ ನವಾಬ್ ಆಸಫ ಜಹಾ ಮನೆತನದ ಮೀರ ಉಸ್ಮಾನ ಆಲಖಾನ ಬಹದ್ದೂರನ ೧೭೨೪ ರಲ್ಲಿ ಆಳ್ವಿಕೆಗೆ ಒಳಪಟ್ಟಿತ್ತು. ರೈಲ್ವೆ, ಅಂಚೆ ಹಾಗೂ ಹಣ (ಕರೆನ್ಸಿ) ಮೊದಲಾದ ತನ್ನದೇ ಆದ ಸೌಲಭ್ಯ ಹೊಂದಿದ್ದ ಪ್ರಬಲ ರಾಜ್ಯವಾಗಿತ್ತು.

ಈ ಪ್ರಾಂತದ ವಿಸ್ತೀರ್ಣ ೮೨,೬೯೮ ಚ.ಮೈಲಿ (೧೯೪೭), ಸುಮಾರು ೧ ಕೋಟಿ ೬೦ ಲಕ್ಷದಲ್ಲಿ ಶೇ.೮೨ ರಷ್ಟು ಹಿಂದೂಗಳು (೧,೩೧,೨೦,೦೦), ಶೇ.೧೫ ಮುಸಲ್ಮಾನರು(೧೯ ಲಕ್ಷ ೨೦ ಸಾವಿರ), ಶೇ. ೪ ಇತರರು (೯,೬೦,೦೦೦).

## ರಾಯಚೂರು ಜಿಲ್ಲೆಯಲ್ಲಿ ಶಿಕ್ಷಣ:

ಶಿಕ್ಷಣ ಶ್ರೀಮಂತರ ಸೊತ್ತು. ಜಹಗೀರುದಾರರಿಗೆ ದೊಡ್ಡ ದೊಡ್ಡ ವ್ಯಾಪಾರಿಗಳಿಗೆ, ಪಟ್ಟಣದಲ್ಲಿರುವವರಿಗೆ ಮಾತ್ರ ದೊರಕುತ್ತಿತ್ತು. ರಾಯಚೂರು ಜಿಲ್ಲೆಯ ಸಾಕ್ಷರತೆ ಶೇ.೭ ರಿಂದ ೯ ರ ಮಧ್ಯೆ ಹೊಯ್ದಾಡುತ್ತಿತ್ತು. ಹೆಣ್ಣು ಮಕ್ಕಳಿಗೆ ಶಿಕ್ಷಣ ಇಲ್ಲವೆಂದರೂ ತಪ್ಪಾಗಲಾರದು. ಕೇವಲ ೯೪೦ ಸ್ತ್ರೀಯರು ಸಾಕ್ಷರರು. ಶಿಕ್ಷಣ ಮಾಧ್ಯಮ ಉರ್ದು ಮಾಡಿಕೊಂಡು ಭಾಷೆಯ ಮೂಲಕ ತಮ್ಮ ಸಂಸ್ಕೃತಿಯನ್ನು ಹೇರುವ ಪ್ರಯತ್ನ ಸಾಗಿತ್ತು. ಬದುಕಿನ ಮಾಧ್ಯಮವಲ್ಲದ ಭಾಷೆಯ ಪರಿಣಾಮವಾಗಿ ಉರ್ದು ಕಲಿಯಲು ಹಿಂಜರಿದ ಜನ. ಅಯ್ಯನವರ ಮಠದ ಶಾಲೆಗಳಲ್ಲಿ 'ರಾಜಶೇಖರ ವಿಳಾಸ', 'ಜೈಮಿನಿ ಭಾರತ' ಮತ್ತು 'ಕುಮಾರ ವ್ಯಾಸ ಭಾರತ'ದೊಂದಿಗೆ ಸೇರು, ಪಂಚೇರು ಧಡೆ ಮಣಗಳ ಲೆಕ್ಕ ಕಲಿತು ಜೀವನದ ವ್ಯವಹಾರ ಚಕ್ರ ಸರಿದೂಗಿಸಿ ಕೊಳ್ಳುತ್ತಿದ್ದರು. ೧೯೪೭ ರಲ್ಲಿ ೪೬ ಹಳ್ಳಿಗಳಿಗೆ ಒಂದು ಸರ್ಕಾರಿ ಶಾಲೆ, ಇಡಿ ಕೊಪ್ಪಳಾಂತರ್ಗತ ರಾಯಚೂರು ಜಿಲ್ಲೆಗೆ ೪ ಹೈಸ್ಕೂಲುಗಳು ಅಂದ ಮೇಲೆ ಶೈಕ್ಷಣಿಕ ದುಸ್ಥಿತಿಯ ಬಗ್ಗೆ ಸ್ಪಷ್ಟ ಚಿತ್ರಣ ಮೂಡುತ್ತದೆ.

## ಆರ್ಥಿಕ ಸ್ಥಿತಿ ಮತ್ತು ಬರಗಾಲ:

ಈ ಜಿಲ್ಲೆಯ ವಾರ್ಷಿಕ ಸರಾಸರಿ ಆದಾಯವು ೧೯೫೦ ರಲ್ಲಿ ೨೬೭ ರೂ. ಭೂಮಿ ಖರೀದಿಯ ಹಕ್ಕು ಸರಳವಾಗಿ ಹಿಂದುಗಳಿಗೆ ಇರಲಿಲ್ಲ. ೧೯೩೦, ೧೯೩೨, ೧೯೩೩, ೧೯೪೨, ೧೯೪೬–೪೭ ರಲ್ಲಿ ರಾಯಚೂರು ಜಿಲ್ಲೆಯಲ್ಲಿ ಭಯಂಕರ ಬರಗಾಲ ಬಿದ್ದಿತು. ಇವನ್ನು ಕೊಪ್ಪಳ ನಾಡಿನಲ್ಲಿ ಡೋವಿಬರ ಡೊಕ್ಕಿಬರ ಎಂದು ಕರೆಯುತ್ತಾರೆ. ೧೯೩೦ ರಲ್ಲಿ ಇಡೀ ಜಿಲ್ಲೆಯಲ್ಲಿ ಭಾರಿ ಬರಗಾಲ ಬಿತ್ತು. ಅದರ ಜೊತೆಗೆ ಪ್ಲೇಗ್ ಬೇರೆ. ಜನ ಹುಳು ಹುಪ್ಪಡಿಗಳಂತೆ ಸತ್ತರೂ ಸರ್ಕಾರ ನೆರವಿಗೆ ಬರಲಿಲ್ಲ. ಆಗಿನ ಕಾಲದ ಕಥೆಯನ್ನು ನನ್ನ ತಾಯಿ ಪಾರ್ವತಮ್ಮ ಹವಳೆ (ಅವರು ಶತಾಯುಷಿ ೧೯೯೭ ರಲ್ಲಿ ತೀರಿಕೊಂಡರು) ಯವರಿಂದ ಕೇಳಿದ ನನಗೆ ಅದೆಷ್ಟು ಸಲ ಕಣ್ಣಲ್ಲಿ ನೀರಾಡಿದೆ.

## ಒಕ್ಕಲುತನ:

ಇಲ್ಲಿ ಮಳೆಯು ವಾರ್ಷಿಕವಾಗಿ ೨೫" ಮಳೆ. ಅದು ಜೂಜಾಟದಂತೆ ಆದರೆ ಆಯಿತು. ಇಲ್ಲವಾದರೆ ಇಲ್ಲ. ೩ ವರುಷಕ್ಕೊಮ್ಮೆ ಬರಗಾಲ.

**ಭೂಮಿಯ ಸಾಗುವಳಿ:**

ಬಡ ರೈತರಿಗೆ ಸಾಗುವಳಿಗೆ ದಕ್ಕಿದ್ದು ಒಟ್ಟು ಸಾಗುವಳಿಯ ೧೭ ಭಾಗ ಮಾತ್ರ. ಇದು ೧೦ ಎಕರೆ ಒಳಗಿನ ಒಣಭೂಮಿಯಾಗಿತ್ತು. ೧೦ ರಿಂದ ೪೫ ಎಕರೆ ಭೂಮಿ ಶೇ.೫೮ ಭಾಗ ಮಧ್ಯಮ ವರ್ಗದವರ ಕೈಯಲ್ಲಿತ್ತು. ಉಳಿದ ಭೂಮಿ ಶೇ.೨೫. ೫೦ ರಿಂದ ೫೦೦ ಎಕರೆವರೆಗೆ ಭಾಗ ಜಮೀನ್ದಾರರ ಸಾಹುಕಾರ, ದೇಸಾಯಿ, ದೇಶಪಾಂಡೆಯವರ ಕೈಯಲ್ಲಿತ್ತು. ಈಗಿನ ವಿಭಜಿತ ರಾಯಚೂರು ಜಿಲ್ಲೆಯಲ್ಲಿ ಕೇವಲ ೧೮೮೪೯ ಎಕರೆ ಮಾತ್ರ ನೀರಾವರಿಯಾಗಿತ್ತು. ಅದು ಕೆರೆ, ಕುಂಟೆ, ಬಾವಿಗಳಿಂದ ಆದ ನೀರಾವರಿ. ನದಿ ದಂಡೆಯಲ್ಲಿಯೂ ಏತ ನೀರಾವರಿಯಾಗಲಿ ಕಾಲುವೆ ನೀರಾವರಿಯಾಗಲಿ ಇರಲಿಲ್ಲ. (ಎಲ್ಲ ಅಂಕಿ ಸಂಖ್ಯೆಗಳು ರಾಯಚೂರು ಜಿಲ್ಲೆಯ ೧೯೫೭ ರ ಗೆಜೆಟಿಯರ್)

**ಲೇವಿ:**

ರೈತನು ಬೆಳೆದ ಧಾನ್ಯದ ಮೇಲೆ ಆಣೆವರಿ ಲೆಕ್ಕ ಮಾಡಿ ಸರ್ಕಾರಕ್ಕೆ ಧಾನ್ಯ ಕೊಡಬೇಕು. ಇದು ಕಾಯ್ದೆ. ಈ ಕಾಯ್ದೆಯನ್ನು ಬಳಸಿಕೊಂಡು ಅಧಿಕಾರಿಗಳು ಹಿಂಸಿಸುತ್ತಿದ್ದರು. ಲೇವಿ ಕೊಡದವನ ಮೇಲೆ, ಹಪ್ತೆ (ಹೊಲದ ಮೇಲಿನ ಕರ) ಕೊಡದವನ ಮೇಲೆ ಬೆನ್ನಿಗೆ ಕಲ್ಲು ಹೇರಿ ಛಾವಡಿಕಟ್ಟೆಗೆ ನಿಲ್ಲಿಸುತ್ತಿದ್ದರು. ಹಗ್ಗ ಕಟ್ಟಿ ಕುದುರೆ ಬೆನ್ನ ಹಿಂದೆ ಓಡಿ ಬರುವಂತೆ ಅಮಾನವೀಯವಾಗಿ ತೊಂದರೆ ನೀಡುತ್ತಿದ್ದರು. ಕಿವಿಗೆ ಹರಳು ಹಚ್ಚಿ ದಾರ ಕಟ್ಟಿ ಎಳೆಯುತ್ತಿದ್ದರು. ಮನೆಯ ಸಾಮಾನು ಪಾತ್ರೆ ಪಗಡೆ ಸಹ ಲೂಟಿ ಮಾಡುತ್ತಿದ್ದರು. ಗೌರವ ಉಳಿಸಿಕೊಳ್ಳಲು ಅನೇಕರು ಮನೆ ಮಾರಿ ಹಣ ಕಟ್ಟುತ್ತಿದ್ದರು.

**ಧಾರ್ಮಿಕ ಬದುಕು:**

ಯಾವುದೇ ಸರ್ಕಾರ ಜನ ಸಾಮಾನ್ಯರ ಧಾರ್ಮಿಕ ಬದುಕಿನಲ್ಲಿ ಕೈ ಆಡಿಸಿದರೆ. ಇರುವೆಗೆ ರೆಕ್ಕೆ ಬಂದಿದೆ ಎಂದರ್ಥ ಅಂದರೆ ಸಾವು ಸನ್ನಿಹಿತವಾಗಿದೆ ಅಷ್ಟೇ ! ಹಿಂದುಗಳಿಗೆ ಆಮಿಷ ಒಡ್ಡಿ ಮತಾಂತರ ಮಾಡುವ ಪ್ರಕ್ರಿಯೆ ಇಡಿ ಹೈದ್ರಾಬಾದದಾದ್ಯಂತ ಇತ್ತು. ಮತಾಂತರದ ಉದ್ದೇಶವು ಮುಸ್ಲಿಂ ಜನರ ಸಂಖ್ಯೆಯನ್ನು ಹೆಚ್ಚಿಸುವುದು ಆಗಿತ್ತು. ಆರ್ಯ ಸಮಾಜವು ಈ ಮತಾಂತರವನ್ನು



ಬಲವಾಗಿ ವಿರೋಧಿಸಿತು. ಮತಾಂತರರಾದವರನ್ನು ಆರ್ಯ ಸಮಾಜಕ್ಕೆ ಮರು ಮತಾಂತರ ಮಾಡಿತ್ತು. ರಾಯಚೂರು ಜಿಲ್ಲೆಯಲ್ಲಿ ಇಂತಹ ಪ್ರಕರಣಗಳು ನೂರಾರು. ಮುಸ್ಲಿಂ ಜನಸಂಖ್ಯೆ ಹೆಚ್ಚಿಸಲು ಉಪಕ್ರಮವಾಗಿ ೧೯೪೭ ರಲ್ಲಿ ಭಾರತದ ಉತ್ತರ ಭಾಗದಿಂದ ವಿವಿಧ ಸೌಲಭ್ಯಗಳನ್ನು ಒಡ್ಡಿ ೬೦ ಸಾವಿರ ಮುಸ್ಲಿಂರನ್ನು ಕರೆಯಿಸಿಕೊಂಡು ವಿವಿಧ ಉದ್ಯೋಗ ನೀಡಿ ಹೈದ್ರಾಬಾದಿನಲ್ಲಿ ನೆಲೆಗೊಳಿಸಿತು. ಅಲ್ಲದೆ ಪಂಜಾಬ್‌ನಿಂದ ೭೪೯೬, ಸಂಯುಕ್ತ ಪ್ರಾಂತಗಳಿಂದ ೧೦,೦೪೯, ರಾಜಪುತಾನದಿಂದ ೨೯೯೦ ಮುಸ್ಲಿಂರನ್ನು ಕರೆತರಲಾಯಿತು. ಸದ್ಯ ಕಾಶ್ಮೀರದಲ್ಲಿ ಪಾಕಿಸ್ತಾನದ ಬಾಡಿಗೆ ಗೂಂಡಾಗಳಿಂದ ಹಿಂದುಭಟ್ಟರನ್ನು ಓಡಿಸಿ, ಮುಸ್ಲಿಂಮಯವನ್ನಾಗಿ ಮಾಡುವ ಪ್ರಯತ್ನದಂತೆ ಇದು ಇತ್ತು ಎಂಬುದು ಗಮನಾರ್ಹ ಅಂಶ.

**ಕರಗಳು:**

ಈಗಿನಂತೆ ಅತಿಯೂ ಇರದಿದ್ದರೂ ಅಮಾನವೀಯ ಅಪಮಾನ ಮಾಡುವ ಕರಗಳು ಇದ್ದವು. ನವಾಬ ಭೇಟಿಯಾಗ ಬಯಸುವ ಪ್ರತಿಯೊಬ್ಬ ಪ್ರಜೆಯು **"ನಜರಾನಾಅದಾ"** ದಂತಹ ಕರ ಸಲ್ಲಿಸ ಬೇಕಾಗಿತ್ತು. ಪುಂಡಗಂದಾಯ ಇನ್ನಿತರ ಕರಗಳು, ಜನರು ಇದನ್ನು ಒಲ್ಲದ ಮನಸ್ಸಿನಿಂದ ಕೊಡುತ್ತಿದ್ದರು. ಈ ಬಗ್ಗೆ ವಿರೋಧವು ಬೆಳೆದಿತ್ತು.

**ರಾಯಚೂರು ಜಿಲ್ಲೆ ಸಾಮಾಜಿಕ ಸ್ಥಿತಿ:**

ರಾಯಚೂರು ಜಿಲ್ಲೆಯ ಪರಿಸ್ಥಿತಿಯು ಹೈದರಾಬಾದ್ ಪ್ರಾಂತದ ಇತರ ಜಿಲ್ಲೆಗಳಿಗಿಂತ ಭಿನ್ನವಾಗಿರಲಿಲ್ಲ. ಇಲ್ಲಿಯ ಜನರ ಜೀವನ ಒಕ್ಕಲುತನದ ಮೇಲೆ ನಿರ್ಧರಿತವಾಗಿತ್ತು. ಜನ ಬರಗಾಲದಿಂದ ತತ್ತರಿಸುತ್ತಿದ್ದರು. ಮಳೆಯೋ ಜೂಜಾಟದಂತೆ ಇತ್ತು. ಬಂದರೆ ಬಂತು, ಹೋದರೆ ಹೋಯ್ತು ಕೆರೆ–ಕಟ್ಟೆ ಕಾಲುವೆಗಳಿಂದ ಕೊಪ್ಪಳಾಂತರ್ಗತ ರಾಯಚೂರು ಜಿಲ್ಲೆಯಲ್ಲಿ ೨೯ ಲಕ್ಷ ಎಕರೆ ಸಾಗುವಳಿ ಜಮೀನಿನಲ್ಲಿ ನೀರಾವರಿ ೧೮,೮೪೯ ಎಕರೆ ಮಾತ್ರ ಇತ್ತು. ಕೃಷ್ಣೆ ಮತ್ತು ತುಂಗಭದ್ರ ನದಿಗಳಿಂದ ಕಾಲುವೆಗೆ ನೀರು ಹರಿಸಿ ಅಥವಾ ಏತ ನೀರಾವರಿ ಕೃಷಿ ಈ ಜಿಲ್ಲೆಯಲ್ಲಿ ಇರಲಿಲ್ಲ. ಬಾವಿಯಿಂದ ತೋಟಗಾರಿಕೆ ಹಾಗೂ ಕೆರೆಗಳಿಂದ ಅಲ್ಪ ಸ್ವಲ್ಪ ದುಗ್ಗನಕ್ಕಿ (ದಪ್ಪನ ಅಕ್ಕಿ) ಬೆಳೆಯುತ್ತಿದ್ದರು. ಇಲ್ಲಿ ತಲಾ ಆದಾಯ ಮಾತ್ರ ಇತ್ತು. ಹಳ್ಳಿಗೊಂದು ಶಾಲೆಗಳು ಇರಲಿಲ್ಲ.

೧೯೪೦ ರಲ್ಲಿ ರಾಯಚೂರು ಜಿಲ್ಲೆಯ ಜನರ ತಲಾ ಆದಾಯವು ವರ್ಷಕ್ಕೆ ರೂ.೧೫೦ ಕ್ಕಿಂತ ಕಡಿಮೆಯಿತ್ತು. ಅಂತಹ ಶೋಚನೀಯ ಸ್ಥಿತಿ. ೧೯೪೮–೫೦ ರಲ್ಲಿ ರೂ. ತಲಾ ಆದಾಯ ೨೫೦ರೂ ಮಾತ್ರ ಇತ್ತು. ಇವು ಗೆಜೆಟಿಯರ್‌ನ ಅಂಕಿ–ಸಂಖ್ಯೆಗಳು. ಯಾವುದೇ ಹಬ್ಬ ಹರಿದಿನ ಮದುವೆ ಮುಂಜಿವೆ ಮಾಡಬೇಕಾದರೂ ಋತಮತಿಗೆ ಆರತಿ ಮಾಡಲು ಗೌಡರ ಅಪ್ಪಣೆ ಬೇಕಾಗಿತ್ತು. ಇವುಗಳ ಕಾರಣವಾಗಿ ನಿಜಾಮನ ಆಡಳಿತವು ಜನರಲ್ಲಿ ಬೇಸರ ತಂದಿತ್ತು. ಜನರು ಸುಖ–ದುಃಖಗಳಿಗೆ ಸ್ಪಂದಿಸದ ನಿಜಾಮನಿಗೆ ವಿರೋಧಿಸುವ ತಾಕತ್ತಿಲ್ಲದೆ ನಿಟ್ಟುಸಿರು ಬಿಡುತ್ತಿದ್ದರು.

**ಜನಜಾಗೃತಿಯ ಸಭೆಗಳು:**

ಹರ್ಡೇಕರ್ ಮಂಜಪ್ಪನವರು ೧೯೪೫ ರಲ್ಲಿ ಸಿಂಧನೂರಿಗೆ ಹಾಗೂ ರಾಯಚೂರಿಗೆ ಬಂದಾಗ ಸುತ್ತಲಿನ ಹಳ್ಳಿಯ ಜನರು ಸೇರಿದ್ದರು. ಸಾವಿರಾರು ಜನ ಸೇರಿದ ಬಗ್ಗೆ ಉಲ್ಲೇಖಗಳಿವೆ. ಅವರನ್ನು ಜನರು ಕರ್ನಾಟಕದ ಗಾಂಧೀಜಿ ಎಂದೇ ಕರೆಯುತ್ತಿದ್ದರು. ಅವರು ಸ್ವಾತಂತ್ರ್ಯದ ಮಹತ್ವ ಹೇಳಿ ಜನಜಾಗೃತಿ ಮಾಡುತ್ತ ಸ್ವಾತಂತ್ರ್ಯ ಸಂಕೇತವಾದ ಖಾದಿ ಧರಿಸುವುದು, ನೂಲುವುದು, ನೇಯುವುದು ಅದರ ಜೊತೆಗೆ ಹರಿಜನೋದ್ಧಾರದ ಕಾರ್ಯಕ್ರಮಗಳನ್ನು ಹೇಳುತ್ತಿದ್ದರು. ಇದರ ಜೊತೆಗೆ ಕೀರ್ತನೆ ಕೇಸರಿ ಜಯರಾಮಚಾರ್ಯರು ಹಳ್ಳಿ–ಹಳ್ಳಿಗೆ ಹೋಗಿ ಶಿವಾಜಿ, ರಾಣಾಪ್ರತಾಪ ಮೊದಲಾದ ಸ್ವಾತಂತ್ರ್ಯ ಯೋಧರ ಕಥೆ ಕೀರ್ತನೆ ಮಾಡಿ ಜನರಲ್ಲಿ ಜಾಗೃತಿ ಮೂಡಿಸುತ್ತಿದ್ದರು. ಸಿಂಧನೂರಿನ ರಾಮದೇವರ ಗುಡಿಯಲ್ಲಿ ಶಿವಾಜಿಯ ಬಗ್ಗೆ ಹೇಳಿದ ಕೀರ್ತನೆಯನ್ನು ಹಳೆಯ ತಲೆಮಾರಿನವರು ಇನ್ನೂ ನೆನೆಸಿಕೊಳ್ಳುತ್ತಾರೆ.

೧೯೪೭ ಆಗಸ್ಟ್‌ನಲ್ಲಿ ಲೇವಿ ಕೊಡಬಾರದೆಂದು, ಹಪ್ತೆ ನೀಡಬಾರದೆಂದು ಆಡಳಿತಕ್ಕೆ ಸಹಕಾರವನ್ನು ನೀಡಬಾರದೆಂದು ಹಳ್ಳಿ–ಹಳ್ಳಿಗೆ ಹೋಗಿ ಬೆಟ್ಟದೂರು ಶಂಕರಗೌಡ, ನೆರವಿ ಪಂಪಣ್ಣ, ಆಯನೂರು ನರಸಪ್ಪ, ಎಂ.ನಾಗಪ್ಪ ಮೊದಲಾದ ಸ್ವಾತಂತ್ರ್ಯ ಯೋಧರು ತಪ್ಪಡಿ ಬಾರಿಸುತ್ತ ಜನರನ್ನು ಜಾಗೃತಿ ಮಾಡಿ ಸರ್ಕಾರಕ್ಕೆ ಅಸಹಕಾರ ತೋರಬೇಕೆಂದು ಸಾರಿ ಹೇಳುತ್ತಿದ್ದರು. ಹಳ್ಳಿಗಳಲ್ಲಿ ಪೋಲಿಸರು ಇರುತ್ತಿರಲಿಲ್ಲ. ಇವರೆಲ್ಲ ೧೮–೧೯ ವರುಷದ ಹುಡುಗರಾಗಿದ್ದರಿಂದ ಜನರು ಪ್ರೀತಿಯಿಂದ ನೋಡುತ್ತಿದ್ದರು. ಕಾರಣ ಇವರು ಗೌಡರ ಮಕ್ಕಳಾಗಿದ್ದು ಜನಸೇವೆಗೆ



ಮುಂದಾಗಿದ್ದುದು ಅವರಿಗೆ ಸಂತೋಷವಾಗಿತ್ತು. ಊಟ–ವಸತಿ ಮಾಡಿಸಿ ಮೆರವಣಿಗೆಯಿಂದ ಮುಂದಿನ ಊರಿಗೆ ಕಳುಹಿಸಿದ್ದನ್ನು ನೆರವಿ ಪಂಪಣ್ಣನವರು (೯೫ ವರುಷ) ಇಂದಿಗೂ ನೆನೆಸುತ್ತಾರೆ. ಹಳ್ಳಿಯ ಜನರಲ್ಲಿ ಹಿಂದುಗಳನ್ನು ಮುಸಲ್ಮಾನ ಮೌಲ್ವಿಗಳು ಮುಸ್ಲಿಂ ಧರ್ಮಕ್ಕೆ ಮತಾಂತರಿಸುವರೆಂಬ ಭೀತಿ ಮನೆ ಮಾಡಿತ್ತು. ಕಾರಣ ರಾಯಚೂರಿನ ರಸ್ತಾಪುರದ ಹೆಣ್ಣು ಮಗಳನ್ನು ಮತಾಂತರ ಮಾಡಿ ಲಗ್ನವಾಗಿದ್ದು ಹಳ್ಳಿ–ಹಳ್ಳಿಗಳಲ್ಲಿ ಕಥೆಯಾಗಿ ಹರಡಿತ್ತು.

ಪತ್ರಿಕೆಗಳಿಂದ ಗಾಂಧೀಜಿ ಅಸಹಕಾರ ಆಂದೋಲನ ಸತ್ಯಾಗ್ರಹ ಸ್ವಾತಂತ್ರ್ಯ ಹೋರಾಟ ಭಾರತ ಸ್ವತಂತ್ರವಾದರೂ ತಮ್ಮ ಭಾಗ ನಿಜಾಮ ಪ್ರಾಂತ (ಮೊಗಲಾಯಿ) ನಿಜಾಮ ದೇಶವಾಗಲಿದೆ. **“ಆಜಾದ್ ಹೈದರಾಬಾದ್”** ಪದವು ಅವರಿಗೆ ಕಾದ ಸೀಸದಂತೆ ಅನುಭವವಾಗ ಹತ್ತಿತು.

❑

# ಅಧ್ಯಾಯ-೩

## ಆಜಾದ್ ಹೈದರಾಬಾದ್ ಮತ್ತು ಸಂವಿಧಾನಿಕ ಹೋರಾಟಗಳು:

೧೯೪೭ ಆಗಸ್ಟ್ ೧೫ ರಂದು ಭಾರತದಾದ್ಯಂತ ಉತ್ಸಾಹದ ಸಂತೋಷದ ಹಬ್ಬ. ಖಾದಿ ಧರಿಸಿ ಗಾಂಧೀ ಟೊಪ್ಪಿಗೆ ಹಾಕಿಕೊಂಡು ಕೈಯಲ್ಲಿ ಧ್ವಜ ಹಿಡಿದು ವಂದೇ ಮಾತರಂ ಹಾಡುತ್ತ ಊರು ತುಂಬ ಅಡ್ಡಾಡುವುದು ಸಾಮಾನ್ಯವಾಗಿತ್ತು ಅದೊಂದು ಪರ್ವ.

ಆದರೆ ಹೈದರಾಬಾದ್ ಪ್ರಾಂತದಲ್ಲಿ ಭಾರತೀಯರ ಭಾವೋಜ್ವಲದ ಸಂಕೇತವಾಗಿದ್ದ ತಿರಂಗಿ ಧ್ವಜವು ನಿಷೇಧಿತ ಬಟ್ಟೆಯಾಯಿತು. ವಂದೇ ಮಾತರಂ ಗೀತೆ ದೇಶ ದ್ರೋಹದ ಹಾಡಾಯಿತು. ಗಾಂಧೀ ಟೊಪ್ಪಿಗೆ ತಿರಸ್ಕೃತವಾಯಿತು. ನವ ಭಾರತದ ನಿರ್ಮಾಪಕರಾದ ಗಾಂಧೀಜಿ, ನೆಹರು, ಸರ್ದಾರ್ ವಲ್ಲಭಭಾಯಿ ಪಟೇಲ್, ಮೌಲಾನಾ ಅಬ್ದುಲ್ ಕಲಾಂ ಆಜಾದ್, ಮೊದಲಾದ ದೇಶಭಕ್ತರ ಭಾವಚಿತ್ರಗಳು ಬಹಿಷ್ಕೃತವಾಗಿದ್ದವು.

ಇಡಿ ಹೈದರಾಬಾದ್ ಪ್ರಾಂತದ ತುಂಬ ರಾಷ್ಟ್ರಧ್ವಜ ಏರಿಸಬಾರದೆಂದು ಜನರನ್ನು ತಡೆಯಲು, ಭೀತಿ ಹುಟ್ಟಿಸಲು ಸೈನ್ಯವನ್ನು ಎಳೆದು ತಂದು ಮೈನಡುಗುವ ಕೂಚುಗಳನ್ನು ಎಲ್ಲ ಜಿಲ್ಲೆಗಳಲ್ಲಿ ದೊಡ್ಡ ಹಳ್ಳಿಗಳಲ್ಲಿ ನಡೆದವು. ಭಯದ ಬೀಜ ಬಿತ್ತಿ ಜನರ ಹೋರಾಟವನ್ನು ಹತ್ತಿಕ್ಕುವ ಪ್ರಯತ್ನಗಳು ನಡೆದವು.

೧೯೪೭ ರಂದು ಆಗಸ್ಟ್ ೧೫ ರಂದು ರಾಯಚೂರಿನಲ್ಲಿ ಹಾಗೂ ಇಡೀ ಜಿಲ್ಲೆಯಲ್ಲಿ ಸ್ಮಶಾನ ಮೌನ. ತಾಲೂಕಾ ಹಾಗೂ ದೊಡ್ಡ ದೊಡ್ಡ ಹಳ್ಳಿಗಳಲ್ಲಿ ಪೋಲಿಸರ ಕಟ್ಟೆಚ್ಚರವಿತ್ತು.



## ಸಾತ್ ಕಚೇರಿಯ ಮೇಲೆ ಧ್ವಜಾರೋಹಣ:

ರಾಯಚೂರು ನಗರ ಸೇರಿ ಎಲ್ಲಿಯೂ ಈ ಪರಿಸ್ಥಿತಿ ಭಿನ್ನವಾಗಿರಲಿಲ್ಲ. ಎಲ್ಲೆಲ್ಲೂ ಧ್ವಜವೇರಿಸದಂತೆ ಕಟ್ಟೆಚ್ಚರ, ಊರು ತುಂಬ ಪೋಲೀಸರ ಹೆಜ್ಜೆಗಳು, ವಂದೇ ಮಾತರಂ ಘೋಷಿಸದಂತೆ ಭೀಕರ ರಾಜಾಜ್ಞೆ ಎಲ್ಲೆಡೆ ಸ್ಮಶಾನ ಮೌನ ಆದರೆ ಈ ಭಯಾನಕ ಗಂಭೀರ ಪರಿಸ್ಥಿತಿಯಲ್ಲಿಯೂ ತಮ್ಮ ಪ್ರಾಣವನ್ನು ಪಣಕ್ಕಿಟ್ಟು ದೇಶಕ್ಕಾಗಿ ಧ್ವಜವೇರಿಸಿ ಕೃತಾರ್ಥತೆ ಪಡೆಯುವ ತರುಣರಿಗೇನೂ ಕಡಿಮೆ ಇರಲಿಲ್ಲ.

ರಾಯಚೂರು ಸಾತ್ ಕಚೇರಿ ಪ್ರಸಿದ್ಧವಾದ ಐತಿಹಾಸಿಕ ಕಟ್ಟಡ ಜಿಲ್ಲಾಧಿಕಾರಿಯ ಸ್ಥಳ ಅನೇಕ ಕಚೇರಿಗಳು ಆ ಕಟ್ಟಡದಲ್ಲಿವೆ. ಅದು ದಿಬ್ಬದ ಮೇಲೆ ಇರುವ ಸುಂದರ ಕಟ್ಟಡ. ಸುತ್ತ ಮುತ್ತಲು ಪೋಲಿಸರ ಕಾವಲು. ಅಲ್ಲಲ್ಲಿ ಪಠಾಣರು, ರಜಾಕಾರರು ಗಸ್ತು ಹಾಕುತ್ತಿದ್ದರು. ಅವರ ಬೂಟಿನ ಸಪ್ಪಳ ಬಿಟ್ಟರೆ ಎಲ್ಲೆಲ್ಲೂ ನೀರವತೆ. ಸರಿ ರಾತ್ರಿ ಕತ್ತಲು ತನ್ನ ಸಾಮ್ರಾಜ್ಯವನ್ನು ವ್ಯಾಪಿಸಿತ್ತು. ಈ ಹೊತ್ತಿನಲ್ಲಿ ಹಿಂಬದಿಯಿಂದ ಮೆಲ್ಲನೆ ಕತ್ತಲೆಯಲ್ಲಿ ಕಳ್ಳ ಹೆಜ್ಜೆಯಿಡುತ್ತಾ ಕೈಯಾಡಿಸುತ್ತ ತೆವಳುತ್ತ ಕಟ್ಟಡದ ಹಿಂಬದಿಗೆ ಬಂದರು. ಶರಭಯ್ಯ, ಚಂದ್ರಯ್ಯ, ಪರ್ವತರೆಡ್ಡಿಯವರು ಎರಡು ಬದಿಗೆ ಪೋಲಿಸರ ಕಾವಲು ನೋಡುತ್ತಾ ನಿಂತರು. ಎಂ.ನಾಗಪ್ಪ ಮತ್ತು ಬಸಣ್ಣ ಒಂದು ಗತ್ತಿನಲ್ಲಿ ಪಸಾಪಸಾ ಸದ್ದಿಲ್ಲದೆ ಕಟ್ಟಡದ ಮೇಲೆ ಏರಿದರು. ಮೇಲೆ ನಿಂತಾಗ ಕತ್ತಲೆಯ ಮಧ್ಯದಲ್ಲಿ ಧ್ವಜದ ಕಂಬ ಕಾಣಿಸಿತು. ಮೆಲ್ಲನೆ ಅಸಫ ಜಹಾ ಧ್ವಜ ಇಳಿಸಿ ದಾರಕ್ಕೆ ತ್ರಿರಂಗ ಧ್ವಜ ಕಟ್ಟಿ ಮೇಲೇರಿಸಿದರು. ಅದಕ್ಕೆ ಕಣ್ಣಂಚಿನಲ್ಲಿಯೇ ವಂದನೆ ಸಲ್ಲಿಸಿ ಮೆಲ್ಲನೆ ಇಳಿದರು. ಕೆಳಗೆ ನಿಂತವರು ಇವರನ್ನು ತಬ್ಬಿಕೊಂಡು ಮಾತಿಲ್ಲದೆ ಮೆಲ್ಲನೆ ಸಾತ ಕಚೇರಿ ದಿನ್ನೆ ಇಳಿದು ಕತ್ತಲಲ್ಲಿ ಕರಗಿದರು. ಪೋಲಿಸರ ಗಸ್ತಿನ ಬೂಟಿನ ಶಬ್ದ ಮಾತ್ರ ಕೇಳಿ ಬರುತ್ತಿತ್ತು. ಯಾರು ಧ್ವಜವೇರಿಸಿದ್ದನ್ನು ನೋಡಲೆ ಇಲ್ಲ. ಹುಡುಗರ ಸಾಹಸ ಯಾತ್ರೆ ಫಲಿಸಿತ್ತು. ಏನಾದರೂ ಆಚಾತುರ್ಯವಾಗಿದ್ದರೆ ೫ ಜನರು ಪ್ರಾಣಕ್ಕೆ ಎರವಾಗಬೇಕಿತ್ತು. ಬಂದೂಕಿನ ಗುಂಡುಗಳಿಗೆ ಆಹುತಿಯಾಗುತ್ತಿದ್ದರು. ಈ ಧ್ವಜ ವೀರರು ಬೆಳಗಿನ ಅನಾಹುತ ನೆನೆದು ಪಾರಾಗಬೇಕೆಂದು ರಾತ್ರಿಯೆಲ್ಲ ನಡೆದು ತುಂಗಭದ್ರಾ ನದಿಯನ್ನು ದಾಟಿ ಸ್ವತಂತ್ರ ಭಾರತದ ಮದ್ರಾಸ್ ಪ್ರಾಂತದ ಆದೋನಿಗೆ ಹೋಗಿ ಪಾರಾದರು. ಮರು ದಿನವೇ ಇದು ಗೊತ್ತಾದಾಗ ಜನರೆಲ್ಲಾ ಸೇರಿ ನೋಡುವಾಗ

ಪೊಲೀಸರಿಗೆ ಅರಿವಾಯಿತು. ಜನರನ್ನು ಚದುರಿಸಿ ಧ್ವಜ ಇಳಿಸಿದರು. ಈ ವೀರರ ಬಗ್ಗೆ ಜನರಲ್ಲಿ ಅಭಿಮಾನ ಮೂಡಿತು.

**ಗುಬ್ಬೇರಬೆಟ್ಟದಲ್ಲಿ ತಿರಂಗಿ ಧ್ವಜ:**

ಆಗಸ್ಟ್ ೧೫ ರ ಸೂರ್ಯೋದಯ ರಾಯಚೂರಿನಲ್ಲಿ ತ್ರಿರಂಗ ಧ್ವಜ ಹೊತ್ತು ತಂದಿತು. ಸ್ವಾತಂತ್ರ್ಯದ ಸವಿಯನ್ನು ನೆನೆದವರ ಮನಸ್ಸಿನಲ್ಲಿ ಆಹ್ಲಾದಕರವಾದ ಭಾವನೆಗಳನ್ನು ಕ್ಷಣ ಮಾತ್ರ ಬಿತ್ತಿದವು. ಪೋಲಿಸರು, ಪಠಾಣರು, ರಜಾಕಾರರು ಬೆಚ್ಚಿಬಿದ್ದರು. ಸುತ್ತಮುತ್ತ ನೋಡುತ್ತ ಇರುವಾಗ ಪೋಲಿಸರಿಗೆ, ಅಧಿಕಾರಿಗಳಿಗೆ ಮೈನಡುಗಿಸುವ ಮತ್ತೊಂದು ಸುದ್ದಿ, ರಾಯಚೂರಿನ ರಕ್ಷಣೆಗೆ ನಿಂತಂತೆ ಇರುವ ಗುಬ್ಬೇರು ಬೆಟ್ಟದಲ್ಲಿ ರಾತ್ರೋರಾತ್ರಿ ಧ್ವಜವೇರಿಸಿದ್ದು, ಅದು ಗಾಳಿಯೊಡನೆ ಪಟಪಟ ಸದ್ದು ಮಾಡುತ್ತ ಬಾನೆತ್ತರ ಹಾರಿದ್ದು ಆ ಧ್ವಜಾರೋಹಣದ ಧೀಮಂತ ತನ್ನ ಹೆಸರನ್ನು ಬಹಿರಂಗ ಪಡಿಸಲೇ ಇಲ್ಲ. ಸಾರ್ಥ್ಯಕ್ಯದ ಭಾವದಲ್ಲಿ ಭಾರತೀಯ ಭಾವನೆಗಳನ್ನು ಅಲ್ಲಿ ಅವನು ಅರಳಿಸಿದ್ದನು. ರಾಯಚೂರು ಜೈಲು ಸೇರಿದ್ದ ರಾ.ಗು. ಜೋಷಿ ಕೈದಿಗಳಿಗೆಲ್ಲ ಅದನ್ನು ತೋರಿಸಿ ವಂದನೆ ಸಲ್ಲಿಸಿದ ಘಟನೆ ಅಧಿಕೃತ ಧ್ವಜವೇರಿಸಿದ ಸಾಹಸಿಯನ್ನು ಮನಸ್ಸಿನಲ್ಲಿಯೇ ಅಭಿನಂದಿಸಿದುದು ಅವರ ಪುಸ್ತಕ ನೆನಹಿನ ಪುಟಗಳಲ್ಲಿ ದಾಖಲೆಯಾಗಿದೆ.

**ಎರಡನೆಯ ಸತ್ಯಾಗ್ರಹ:**

ಆಗಸ್ಟ್ ೧೫ ರ ದಿನವೇ "ಹಿಂದಿ ಒಕ್ಕೂಟ ಸೇರಿ" ಕರೆಯ ಮೇರೆಗೆ ಎರಡನೆಯ ಸತ್ಯಾಗ್ರಹಿ ತಂಡ ಭಾರತ ಧ್ವಜ ಹಿಡಿದು ಸತ್ಯಾಗ್ರಹ ಮಾಡಿತು. ಜಿ.ಮಧ್ವರಾಯರು, ಲಕ್ಷ್ಮಣಾಚಾರ್ಯ ವೈದ್ಯ, ಲಿಂಗನಖಾನದೊಡ್ಡಿ ರಾಘವೇಂದ್ರ ಬಂಧಿತರಾದರು. ಜನ ಬೆರಗುಗಣ್ಣಿನಿಂದ ಇವರನ್ನು ನೋಡಿ ಇವರ ಧೈರ್ಯಕ್ಕೆ ಮೆಚ್ಚಿದರೂ ಊರಿನಲ್ಲೆಲ್ಲಾ ಸಾತಕಚೇರಿ, ಗುಬ್ಬೇರು ಬೆಟ್ಟದಲ್ಲಿ ಧ್ವಜವೇರಿಸಿದ ಸುದ್ದಿಯಾದರೆ ಜಿ.ಮಧ್ವರಾಯರು ಮತ್ತು ಅವರ ತಂಡ ನಗು ಮೊಗದಿಂದ ಸತ್ಯಾಗ್ರಹ ಮಾಡಿದುದು ದಾಖಲೆಯಾಯಿತು. ಆಗಸ್ಟ್ ೧೬ ರ ಹಿಂದು ಪತ್ರಿಕೆಯಲ್ಲಿ ಸುದ್ದಿಯಾಯಿತು.



**ಹೆಂಬೆರಾಳದಲ್ಲಿ ಧ್ವಜ:**

ಪ್ರಖ್ಯಾತ ಕವಿ ಶಾಂತರಸು ಹೇಳುವಂತೆ ಅನೇಕ ಹಳ್ಳಿಗಳಲ್ಲಿ ರಾಷ್ಟ್ರಧ್ವಜವೇರಿಸಿದ ಘಟನೆಗಳು ದಾಖಲೆಯಾಗಿಲ್ಲ. ಇದಕ್ಕೆ ಸಾಕ್ಷಿಯಾಗಿ ಅವರ ಊರಿನ ಘಟನೆಯನ್ನು ಹೇಳುವರು. ರಾಯಚೂರಿನ ಪಶ್ಚಿಮಕ್ಕೆ ૩೦ ಕಿ.ಮೀ. ದೂರದಲ್ಲಿ ಹೆಂಬೆರಾಳು ಗ್ರಾಮ. ನಾಟಕ, ಬಯಲಾಟ, ತಾಳಮದ್ದಳೆ, ತತ್ವಪದಗಳಿಗೆ ಹೆಂಬೆರಾಳು ಸುತ್ತಮುತ್ತಲಿನ ಹಳ್ಳಿಗಳ ಪ್ರಸಿದ್ಧ ಸಾಂಸ್ಕೃತಿಕ ಕೇಂದ್ರ. ಕೆ.ಸೂಗಣ್ಣ ಎಂಬ ಶ್ರೀಮಂತ ಕರ್ಮವೀರ ಮತ್ತು ಸಂಯುಕ್ತ ಕರ್ನಾಟಕ ಪತ್ರಿಕೆ ತರಿಸುತ್ತಿದ್ದ. ಆಗಿನ ಕಾಲಕ್ಕೆ ಈ ಪತ್ರಿಕೆ ತರಿಸುವವರನ್ನು ಓದುವವರನ್ನು ಸಂಶಯ ದೃಷ್ಟಿಯಿಂದ ಆಡಳಿತವು ನೋಡುತ್ತಿತ್ತು. ಆದರೂ ದಿಟ್ಟ ಸೂಗಣ್ಣ, ರಂಗಣ್ಣ ಮತ್ತು ಶಾಂತರಸ ಕೂಡಿ ಸೂಗಣ್ಣನ ಮನೆಯ ಮೇಲೆ ಧ್ವಜವೇರಿಸಿದ್ದಾರೆ. (ಶಾಂತರಸ ಲೇಖನ ೧೯೯೭ ಪ್ರಜಾವಾಣಿಯಿಂದ ಆಗಸ್ಟ್ ೧೫) ಶಾಂತರಸರು ಈ ಕಾರಣಕ್ಕಾಗಿ ಬೂಟುಗಾಲಿನ ಒದೆ ತಿಂದರು. ಒಂದು ದಿನ ಜೈಲು ವಾಸ ಅನುಭವಿಸಿದರು. ಅವರ ಹೆಡ್ಮಾಸ್ಟರ್ ಷಾಲಿ ಸಾಹೇಬರು ಅವರು ಒಳ್ಳೆಯ ಮಾಸ್ತರರೆಂದು ಹೇಳಿ ಬಿಡಿಸಿಕೊಂಡು ಬಂದರು.

**ತಿಮ್ಮಾಪುರ ಪೇಟೆಯ ಗುಡಿಸಲುಗಳಿಗೆ ಬೆಂಕಿ:**

೧೯೪೭ ಆಗಸ್ಟ್ ೨೬ ರಂದು ರಜಾಕಾರ ಗುಂಪು ಕಾಂಗ್ರೆಸ್ ವಿರೋಧಿ ಘೋಷಣೆ ಕೂಗುತ್ತ ನಿಜಾಮನು ಚಂದ್ರ–ಸೂರ್ಯರಷ್ಟೆ ಸತ್ಯ, ಅವರು ದೇವ ದೂತರು, ಸೈತಾನಿಗಳನ್ನು ಓಡಿಸಲು ಬಂದಿದ್ದಾರೆ ಎಂದು ನಿಜಾಮನ ಉದ್ಘೋಷ ಹಾಕುತ್ತ ರಾಯಚೂರು ನಗರದ ಬೀದಿ ಬೀದಿಗಳಲ್ಲಿ ಕೂಗಿ ಮೆರವಣಿಗೆ ತೆಗೆದರು. ಇದರ ಉದ್ದೇಶವು ನಿಜಾಮನ ವಿರುದ್ಧ ಯಾರು ದನಿ ಎತ್ತಬಾರದೆಂದು ತಾಕೀತು ಮಾಡುವುದು ಆಗಿತ್ತು.

ಅದೆ ದಿನ ಮುಸಲ್ಮಾನರಿಗೂ ತಿಮ್ಮಾಪುರ ಪೇಟೆಯ ಜನರಿಗೂ ಇದೆ ಕಾರಣಕ್ಕಾಗಿ ಸಣ್ಣಪುಟ್ಟ ಜಗಳವಾಯಿತು. ಆಗ ರಜಾಕಾರರು ರಾತ್ರೋ ರಾತ್ರಿ ಬೆಂಕಿಯಿಟ್ಟರು. ೬೦ ಗುಡಿಸಲುಗಳು ಭಸ್ಮವಾದವು. ನಗರದಲ್ಲಿ ಭಾರಿ ಪ್ರಕ್ಷುಬ್ದ ಪರಿಸ್ಥಿತಿ ಉಂಟಾಯಿತು. ಈ ಸಂದರ್ಭದಲ್ಲಿ ಬೆಂಕಿಯಿಟ್ಟವರನ್ನು ಬಿಟ್ಟು ಇದನ್ನು ಪ್ರತಿರೋಧಿಸಿದ ಗಾಣಧಾಳ ನಾರಾಯಣಪ್ಪ, ಮುನ್ನೂರು ಗಂಗನಗಾರ ನಾಗಣ್ಣ ತಿಮ್ಮಾಪುರ ಪೇಟೆಯ ದಾಸಪ್ಪ, ಪೂಜಾರ ಹನುಮಂತಪ್ಪ, ತಿಮ್ಮಾಪುರಪೇಟೆ,

ದಸ್ತಗಿರಿ, ಜಿ.ಮುದ್ದುರಾವ ವಕೀಲ, ಡಿ.ಮಾಣಿಕರಾವ, ಮುನ್ನೂರು ತಪ್ಪಡಿ ಭೀಮಯ್ಯ, ತಿಮ್ಮಯ್ಯ ಗುಲ್ದಾಸ ಇವರನ್ನು ಬಂಧಿಸಲು ಪೋಲಿಸರು ಬಂದರು. ಈ ಗದ್ದಲದಲ್ಲಿ ಗಾಣಧಾಳ ನಾರಾಯಣಪ್ಪ ಹಾಗೂ ಮುನ್ನೂರು ನಾಗಣ್ಣ ತಪ್ಪಿಸಿಕೊಂಡು ಊರುಬಿಟ್ಟು ಓಡಿದರು. ತಮ್ಮ ವೈಯಕ್ತಿಕ ಕಾರಣಕ್ಕಾಗಿ ಹಾಗೂ ಸಂಘಟನೆಯ ಉದ್ದೇಶಕ್ಕಾಗಿ ಜೈಲು ಸೇರದೆ ಬಿಟ್ಟರು ಎಂದು ರಾ.ಗು.ಜೋಷಿಯವರು 'ನೆನಪಿನ ಪುಟ' ಪುಸ್ತಕದಲ್ಲಿ ಹಾಗೂ ಮುನ್ನೂರು ನಾಗಣ್ಣನವರ ಸಂದರ್ಶನದಲ್ಲಿ ದಾಖಲಿಸಿದೆ. ಮುಂದೆ ೧–೨ ದಿನದಲ್ಲಿ ಭಾರಿ ಶ್ರೀಮಂತರಾಗಿದ್ದ ಗುಲ್ದಾಸ್ ತಿಮ್ಮಯ್ಯನವರನ್ನು ವಿಚಾರಣೆ ಹಂತದಲ್ಲಿಯೇ ಬಂಧನದಿಂದ ಮುಕ್ತಮಾಡಿದರು.

## ಧ್ವಜ ದಿನಾಚರಣೆ – ವಿದ್ಯಾರ್ಥಿಗಳ ಬಂಧನ:

ಕಾಂಗ್ರೆಸ್ ನೀಡಿದ ಕರೆಯಂತೆ ೨ನೇ ಅಕ್ಟೋಬರ್ ೧೯೪೭ ರಂದು ವಿದ್ಯಾರ್ಥಿಗಳೆಲ್ಲ ಧ್ವಜ ದಿನಾಚರಣೆಯನ್ನು ಕೈಗೊಳ್ಳಲು ಗುಪ್ತವಾಗಿ ಸಂದೇಶ ನೀಡಿ, ರೈಲ್ವೆ ಸ್ಟೇಷನ್ ಹತ್ತಿರದಿಂದ ಬೆಳಿಗ್ಗೆ ೧೧–೩೦ ಕ್ಕೆ ಈಗಿನ ನಗರಸಭೆಯ ಮಾರ್ಗವಾಗಿ ಸದಾಶಿವರಾಜ ಪುರೋಹಿತ ಅವರ ನಾಯಕತ್ವದಲ್ಲಿ ೩೨ ವಿದ್ಯಾರ್ಥಿಗಳ ಗುಂಪೊಂದು ತ್ರಿರಂಗ ಧ್ವಜ ಹಿಡಿದು ಮೆರವಣಿಗೆಯೊಂದಿಗೆ ವಂದೇಮಾತರಂ ಹಾಡು ಹಾಡುತ್ತಾ ಹೊರಟಿತು.

### ಈ ಸತ್ಯಾಗ್ರಹದಲ್ಲಿ ಭಾಗವಹಿಸಿದವರು:

೧)ಸದಾಶಿವ ರಾಜಪುರೋಹಿತ(ನಾಯಕರು), ೨)ರಾಮರಾವ್, ೩)ವಿರುಪಾಕ್ಷಪ್ಪ, ೪)ಜಗನ್ನಾಥ್‌ರಾವ್, ೫) ಯಲಗುರ್ದಾಚಾರ, ೬) ಪಿ.ಸೂಗಣ್ಣ, ೭) ವೀರನಗೌಡ, ೮) ಇಲ್ಲೂರು ಜಯರಾಮಪ್ಪ ಗುಪ್ತ, ೯) ಆರ್.ಬಸವಣ್ಣ ಗುಪ್ತ ತಂದೆ ಜಂಬಣ್ಣ ಗುಪ್ತ, ೧೦) ಇಲ್ಲೂರು ನರಸಿಂಗಪ್ಪ ಗುಪ್ತ.ಬಿ, ೧೧) ಜೆ.ಶ್ರೀನಿವಾಸರಾವ್ ತಂದೆ ಗೋವಿಂದರಾವ್, ೧೨) ಅಡವಿರಾವ್ ತಂದೆ ಕಿಷನ್‌ರಾವ್, ೧೩) ಹರದಾರ ಬಾಬುರಾವ್, ೧೪) ಕಾಶಿರಾವ್ ಪಾಟೀಲ್ (ಕಾಶಿ ವಿಶ್ವನಾಥ), ೧೫) ಕಿಷನ್‌ರಾವ್ ತಂದೆ ಗುರಾಚಾರಿ, ೧೬) ಪಂಪಣ್ಣ ತಂದೆ ನಾಗಣ್ಣ, ೧೭) ಬಸನಗೌಡ ತಂದೆ ಬಸಪ್ಪ, ೧೮) ಜಗನ್ನಾಥರಾವ್ ತಂದೆ ನರಸಿಂಗರಾವ್, ೧೯) ನಾರಾಯಣರಾವ್ ತಂದೆ ವೆಂಕೋಬಾಚಾರಿ, ೨೦) ನಾಗಣ್ಣ ತಂದೆ ಶೇಷಯ್ಯ, ೨೧) ವೀರಭದ್ರಪ್ಪ ತಂದೆ ಬಸವಪ್ಪ, ೨೨) ಹನುಂತರಾವ್ ತಂದೆ ಮಾಣಿಕರಾವ್, ೨೩) ಗುರಾಚಾರಿ ತಂದೆ ಭೀಮಾಚಾರಿ, ೨೪) ಶ್ರೀನಿವಾಸ ತಂದೆ ಭೀಮಾಚಾರ, ೨೫) ಎಂ.ಪಂಪಣ್ಣ ತಂದೆ ಚನ್ನಪ್ಪ, ೨೬) ಅಣ್ಣಾರಾವ್ ತಂದೆ ಮದ್ದುರಾವ್, ೨೭) ಕೆ.ಪಮರಪ್ಪ ತಂದೆ ದೊಡ್ಡ ಬಸಪ್ಪ, ೨೮) ಆದಿ ರಾಜಶೇಖರ ತಂದೆ ಬಸಣ್ಣ ೨೯) ಎಂ.ಪರ್ವತರೆಡ್ಡಿ ತಂದೆ ಬಸಣ್ಣ, ೩೦) ರಂಗಾರಾವ್ ತಂದೆ ರಾಮರಾವ್ ಇವರ ಜೊತೆಗೆ ಅನೇಕ ವಿದ್ಯಾರ್ಥಿಗಳಿದ್ದರು.



ಇವರು ಈಗಿನ ರೈಲ್ವೆ ಸ್ಟೇಷನ್ ಹತ್ತಿರದಿಂದ ಹೊರಟು ನಗರಸಭೆಯ ಗಾರ್ಡನ್ ಮುಖಾಂತರ ಮನವಿ ಅರ್ಪಿಸಲು ಸಾತಕಚೇರಿಗೆ ಹೊರಟಿದ್ದರು. ಇವರನ್ನು ಸಾತಕಚೇರಿಯ ಹತ್ತಿರ ತಡೆದು ಸದರ ಬಜಾರ ಪೋಲೀಸ್ ಸ್ಟೇಷನ್ನಿಗೆ ಒಯ್ದು ಅಲ್ಲಿಂದ ಕಾರಾಗೃಹಕ್ಕೆ ತಂದರು. ಶಾಲಾ ವಿದ್ಯಾರ್ಥಿಗಳಾಗಿದ್ದರಿಂದ ಮಾಫೀನಾಮ ಬರೆದುಕೊಟ್ಟರೆ ಬಿಡುವುದಾಗಿ ಆಸೆ ತೋರಿಸಿದರು. ಈ ತರುಣ ಸ್ವಾತಂತ್ರ್ಯ ಯೋಧರು ಅದನ್ನು ನಿರಾಕರಿಸಿದರು. ಸ್ವತಃ ನ್ಯಾಯಾಧೀಶರೆ ಬಂದು ಇವರಿಗೆ ಬುದ್ಧಿ ಹೇಳಿ ಕ್ಷಮಾ ಪತ್ರಕ್ಕಾಗಿ ವಿನಂತಿಸಿದರು. ಆದರೆ ಇವರು ಸಾರಾಸಗಟಾಗಿ ನಿರಾಕರಿಸಿದರು. ಇದರಲ್ಲಿ ಮಲ್ಲಣ್ಣ ಹಾಗೂ ಕೃಷ್ಣಮೂರ್ತಿ ಎಂಬುವವರನ್ನು ಬಿಟ್ಟು ಮೇಲ್ಕಾಣಿಸಿದ ೩೦ ಜನರಿಗೆ ೧೫ ದಿನಗಳ ಪೋಲಿಸ್ ಕಸ್ಟಡಿ ಮುಗಿದ ಮೇಲೆ ಒಂದು ವಾರ ಶಿಕ್ಷೆಯಾಯಿತು. ಆರ್ಯಭವನದ ಮಾಲಿಕ ಮಾಧವ ಅಯ್ಯರ ಇವರಿಗೆ ಊಟದ ವ್ಯವಸ್ಥೆ ಮಾಡಿ ಹರಸಿದ. ಸದಾಶಿವ ರಾಜಪುರೋಹಿತರ ಹೇಳಿಕೆಯಂತೆ ಮುನ್ನೂರು ಗಂಗನಗಾರ ನಾಗಣ್ಣನವರು ಜೈಲಿನಲ್ಲಿ ಊಟದ ವ್ಯವಸ್ಥೆಯನ್ನು ಮಾಡಿದ್ದರೆಂದು ತಿಳಿದು ಬರುತ್ತದೆ.

## ಸತ್ಯಾಗ್ರಹ ಮಾಡಿ ಜೈಲಿಗೆ ಹೋದವರು: ಲಿಂಗಸೂಗೂರು ಸಿಂಧನೂರುಗಳ ಹೋರಾಟ:

ಲಿಂಗಸೂಗೂರಿನಲ್ಲಿ ಶಂಕರಪ್ಪ ಸದಾಶಿವಪ್ಪ ಘೂಲಭಾವಿ, ಬಸಲಿಂಗಯ್ಯ ಹಿರೇಮಠ ಮತ್ತು ಮುದಗಲ್ಲಿನ ರಾಮಜೀ ನಾಯಕ ಸೆರೆಮನೆಗೆ ಹೋದರು. ಸೋಮನಾಥರೆಡ್ಡಿ ಎನ್ನುವವರು ಗಜೇಂದ್ರಗಡ ಶಿಬಿರ ಸೇರಿ ಅನೇಕ ಭೂಗತ ಚಟುವಟಿಕೆಯಲ್ಲಿ ಪಾಲ್ಗೊಂಡರು. ಸಿಂಧನೂರಿನಲ್ಲಿ ಕನಕಗಿರಿರಾಮರಾವ್, ಗುಡಿಹಾಳ್ ಕಿಷನರಾವ್ ಸತ್ಯಾಗ್ರಹ ಮಾಡಿ ಬಂಧಿಸಲ್ಪಟ್ಟರು.

# ಅಧ್ಯಾಯ–೪

**ಆಜಾದ ಹೈದರಬಾದ್ ಕನಸು ನನಸು ಮಾಡಲು ನಿಜಾಮನ ಹುನ್ನಾರಗಳು:**

ನಿಜಾಮನು ದಕ್ಷಿಣದಲ್ಲೊಂದು ಪಾಕಿಸ್ತಾನ ನಿರ್ಮಿಸಲು ಮುಸ್ಲಿಂ ರಾಜ್ಯ ಕಟ್ಟಲು ತೆಗೆದುಕೊಂಡ ಕ್ರಮಗಳನ್ನು ಸಂಕ್ಷಿಪ್ತವಾಗಿ ನೋಡೋಣ.

**ಸ್ವತಂತ್ರ ಹೈದರಾಬಾದ ರಾಜ್ಯಕ್ಕಾಗಿ ಪೂರ್ವಬಾವಿ ಯೋಜನೆ:**

ಸ್ವತಂತ್ರ ಹೈದರಾಬಾದಿಗಾಗಿ ನಿಜಾಮನು ಅನೇಕ ಪೂರ್ವಭಾವಿ ಯೋಜನೆಗಳನ್ನು ಹಾಕಿಕೊಂಡನು.

೧. ಪಾಕಿಸ್ತಾನಕ್ಕೆ ೨೦ ಸಾವಿರ ಪೌಂಡು ಸಹಾಯಧನವಾಗಿ ನೀಡಿ ನೈತಿಕ ಬೆಂಬಲ್ ಹಾಗೂ ಕಷ್ಟ ಕಾಲದಲ್ಲಿ ಸಹಾಯ ಅಪೇಕ್ಷಿಸಿದನು.

೨. ಗೋವಾ ಖರೀದಿಸಿ ತನ್ನ ರಾಜ್ಯಕ್ಕೆ ಬಂದರು. ಸಮುದ್ರಮಾರ್ಗ ಹುಡುಕಿಕೊಂಡು, ವ್ಯಾಪಾರ ಕುದುರಿಸಲು ಪೋರ್ಚುಗೀಸ್‌ರೊಡನೆ ಮಾತುಕತೆ ನಡೆಸಿದರು.

೩. ಇಂಗ್ಲೆಂಡಿನ ಪ್ರಭಾವಿ ಮಾಜಿ ಪ್ರಧಾನಿ ಚರ್ಚಿಲ್‌ರ ಮುಖಾಂತರ ಹೈದ್ರಾಬಾದ್ ಸ್ವಾತಂತ್ರ್ಯಕ್ಕೆ ಬೆಂಬಲ ಕೋರಿದನು.

೪. ಹೈದ್ರಾಬಾದ್ ಸಿಕಂದ್ರಾಬಾದಗಳಲ್ಲಿ ಶಸ್ತ್ರಾಸ್ತ್ರ ಕಾರ್ಖಾನೆ ಪ್ರಾರಂಭಿಸಿದನು.

೫. ಕಾಟನ ಸಿಡ್ನೆ ಎಂಬ ಏಜೆಂಟಿನಿಂದ ಯುರೋಪ್‌ನಿಂದ ಶಸ್ತ್ರಾಸ್ತ್ರ ಆಮದು ಪ್ರಾರಂಭಿಸಿದರು.

೬. ಸೈನ್ಯ ಶಕ್ತಿ ಹೆಚ್ಚಿಸಲು ಸೈನ್ಯ ತಯಾರಿ ನಡೆಸಿದನು.



೭. ಯಥಾಸ್ಥಿತಿ ಒಪ್ಪಂದ ಗಟ್ಟಿಗೊಳಿಸಲು ಸರ್ ಮಾರ್ಕ್ ಎಂಬ ಇಂಗ್ಲಿಷ್ ಅಧಿಕಾರಿಯನ್ನು ತನ್ನ ಅಡ್ವೈಜರಿ ಕಮಿಟಿ ಸದಸ್ಯನನ್ನಾಗಿ ಮಾಡಿಕೊಂಡು ಮೌಂಟ್ ಬ್ಯಾಟನನ ಮೇಲೆ ಪ್ರಭಾವ ಬೀರಲು ಯತ್ನಿಸಿದನು.

೮. ಸ್ವಾತಂತ್ರ್ಯ ಹೋರಾಟಗಾರರನ್ನು ಮಟ್ಟ ಹಾಕಲು ರಜಾಕಾರರೆಂಬ ಅರೆಸೈನಿಕ ಪಡೆಗಳನ್ನು ಹೈದ್ರಾಬಾದ್ ರಾಜ್ಯದಾದ್ಯಂತ ಕಳುಹಿಸಿದನು. ಇದರ ಪರಿಣಾಮವಾಗಿ ಹಿಂಸೆ, ಲೂಟಿ, ಅತ್ಯಾಚಾರಗಳು ಅವ್ಯಾಹತವಾಗಿ ನಡೆದವು.

೯. ಘೋಷಣೆಗಳು: ಇಸ್ಲಾಂ ಖತರೇಮೇ ಹೈ ಹಾಗೂ ಆಜಾದ ಹೈದರಾಬಾದ.

೧೦. ರಜಾಕಾರರಿಗಾಗಿ ಲೂಟೋ ಬಾಟೋ ಕಾಟೋ. ಸಂದೇಶ ನೀಡಲಾಯಿತು.

**ರಜಾಕಾರರ ಸಮವಸ್ತ್ರ :**

ರಜಾಕಾರರ ಉಡುಪು: ಕೆಂಪು ಬಣ್ಣದ ಕಪ್ಪು ಗೊಂಡೆಯ ಉದ್ದನೆಯ ಫ್ರಜ್ ಟೊಪ್ಪಿಗೆ, ಉದ್ದನೆಯ ಕುರ್ತಾ ಮತ್ತು ಚುಡಿದಾರ ಧರಿಸುತಿದ್ದರು. ಕಾಸಿಂ ರಜವಿ ಇತ್ತೆಹಾರ ಪಕ್ಷದ ಅಧ್ಯಕ್ಷನಾದರೂ ಎಲ್ಲವೂ ಅವನೇಯೆನ್ನುವಂತಿತ್ತು. ಅವನ ಉಡುಪು ಸೈನ್ಯಾಧಿಕಾರಿಯ ಖಾಕಿ ಬಣ್ಣದ ಕೋಟು–ಪ್ಯಾಂಟು. ಇವನು ಧರ್ಮಾಂಧ, ದಕ್ಷಿಣ ಪಾಕಿಸ್ತಾನ ನಿರ್ಮಾಣ ಅವನ ಕನಸು. ನವಾಬ ಇವನ ಕೈಗೊಂಬೆ.

ರಜಾಕಾರರ ಹಾಗೂ ಸೈನಿಕರ ಉಡುಪಿನಲ್ಲಿ ವ್ಯತ್ಯಾಸವೇ ಇರಲಿಲ್ಲ. ಕೇವಲ ಮೆಡಲ್ಲುಗಳು ಮಾತ್ರ ಇರಲಿಲ್ಲ. ಇವರೆಲ್ಲ ಧರ್ಮಾಂಧರು. ಹಿಂದು ಹೆಣ್ಣುಮಕ್ಕಳ ಮೇಲೆ ಅತ್ಯಾಚಾರ, ದರೋಡೆ, ಲೂಟಿ, ಕೊಲೆ ಇವು ಸಾಮಾನ್ಯವಾಗಿದ್ದವು. ಇವರ ಹಾವಳಿ ವಿಪರೀತವಾಗಿತ್ತು. ಆದ ಕಾರಣ ೧೯೪೭–೪೮ ರ ಅವಧಿಯನ್ನು ಹೈದರಾಬಾದ್–ಕರ್ನಾಟಕ ಜಿಲ್ಲೆಗಳಲ್ಲಿ ರಜಾಕಾರರ ಹಾವಳಿ ಎಂದೆ ಹೆಸರು ಜನರು ಇವರಿಗೆ ಭಯಬಿದ್ದು ಮುಂಬೈ ಹಾಗೂ ಮದ್ರಾಸ್ ಪ್ರಾಂತದ ಗಡಿಗಳಿಗೆ ಓಡಿಹೋದರು. ನಾನು ಈ ಪುಸ್ತಕದ ಲೇಖಕ. ಕಿನ್ನಾಳ ತಾ॥ ಕೊಪ್ಪಳದಿಂದ ಮದ್ರಾಸ್ ಪ್ರಾಂತ್ಯದ ಬಳ್ಳಾರಿ ಜಿಲ್ಲೆಯ ಕೊಟ್ಟೂರಿಗೆ

ಓಡಿ ಹೋದರು. ವಯಸ್ಸಾದವರು ಮನೆಯಲ್ಲಿ ಇರುತ್ತಿದ್ದರು. ಮನೆಯ ಮೇಲೆ ಬಿಂಚಿಕಲ್ಲುಗಳನ್ನು ಹಾಕಿ ರಜಾಕಾರರು ಜೀಪು ಬರುತ್ತಿದ್ದರೆ ಕಲ್ಲು ಬೀಸಿ ಕಾಪಾಡಿ ಕೊಳ್ಳುತ್ತಿದ್ದರು. ಇಂತಹ ದುರ್ಭರ ಪರಿಸ್ಥಿತಿ ಇತ್ತು.

**ಗೌಡ–ಕುಲಕರ್ಣಿಯವರ ರಾಜೀನಾಮೆ:**

ಇಷ್ಟೇ ಶಕ್ತಿಯುತವಾಗಿ ರಾಯಚೂರು ತಾಲ್ಲೂಕಿನ ಗಾಣದಾಳ ನಾರಾಯಣಪ್ಪ, ಕಸಬೆ ಪಾಂಡುರಂಗರಾವ್, ಭೀಮಸೇನರಾವ್, ಗುಂಜಳ್ಳಿಯವರು ಮಟಮಾರಿ ಗ್ರಾಮದ ಅಮರಣ್ಣ ಹಾಗೂ ಅವರ ಎಂಟು ಜನ ಸ್ನೇಹಿತರು ಈ ಭಾಗದ ಗ್ರಾಮಗಳಿಗೆ ಅಡ್ಡಾಡಿ ಲೇವಿ ನೀಡಬಾರದು, ಹಪ್ತೆ ಕೊಡಬಾರದು, ಹೆಂಡದ ಗಿಡಗಳನ್ನು ಕಡಿಯಬೇಕೆಂದು ಜನರು ನಿಜಾಂನ ವಿರುದ್ಧ ಬಂಡೇಳಬೇಕೆಂದು ಪ್ರಚೋದಿಸುತ್ತಿದ್ದರು. ಆಗ ಹಳ್ಳಿ ಹಳ್ಳಿಗೆ ಹೋಗಿ ಊರಿನ ಗೌಡ–ಕುಲಕರ್ಣಿ ಮತ್ತು ವಾಲೇಕಾರರು ಸಹ ಜನರಲ್ಲಿ ಧೈರ್ಯ ತುಂಬಿ ಹೋರಾಡಲು ಅಣಿ ಗೊಳಿಸುತ್ತಿದ್ದರು. ಈ ಪ್ರಕ್ರಿಯೆ ಎಲ್ಲ ತಾಲ್ಲೂಕುಗಳಲ್ಲಿ ವ್ಯಾಪಿಸಿತು.

**ಗುಡಿಶಿಬಿರಗಳ ಸ್ಥಾಪನೆ:**

ಸ್ವಾತಂತ್ರ್ಯ ಹೋರಾಟಗಾರರು ಜನರ ರಕ್ಷಣೆಗೆ ಕಾಂಗ್ರೆಸಿನ ಸಹಾಯ ಪಡೆದು ಗಡಿ ಪ್ರದೇಶದಲ್ಲಿ ಶಿಬಿರಗಳನ್ನು ಕಟ್ಟಿಕೊಂಡು ರಜಾಕಾರರನ್ನು ಹಣಿಯಲು, ಸರ್ಕಾರಕ್ಕೆ ಅಸಹಕಾರ ತೋರಲು ಜನರ ರಕ್ಷಣೆಗಾಗಿ ನಿಂತರು.

ಸೆಪ್ಟೆಂಬರ್ ೨೪, ೧೯೪೭ ರಂದು ಗದಗದಲ್ಲಿ ಬಹಳ ದೊಡ್ಡ ಸಭೆ ಸೇರಿತು. ಭಾರತದ ಹಾಗೂ ಹೈದರಾಬಾದ್–ಕನಾಟಕದ ಸ್ವಾತಂತ್ರ್ಯ ಯೋಧರು ನಾಯಕರು ಹೋಗಿದ್ದರು. ಸುಮಾರು ನಾಲ್ಕು ಸಾವಿರ ಜನರು ಗಾನಯೋಗಿ ಪಂಚಾಕ್ಷರಿ ಗವಾಯಿಗಳ ಆಶ್ರಮದ ಬಯಲಿನಲ್ಲಿ ಸಭೆ ಸೇರಿದ್ದರು. ಎಸ್. ನಿಜಲಿಂಗಪ್ಪ, ಬಿ.ಜಿ.ಖೇರ (ಮುಂಬೈ ಪ್ರಾಂತದ ಮುಖ್ಯಮಂತ್ರಿ) ಅಂಬಲಿ ಚೆನ್ನಬಸಪ್ಪ, ಹಳ್ಳಿಕೇರಿ ಗುದ್ಲೆಪ್ಪ ಮತ್ತು ನಮ್ಮ ನಾಯಕರು ಸಿಂಧನೂರಿನ ನಾರಾಯಣರಾವ್ ಕಾನಿಹಾಳ ಜಯತೀರ್ಥ ರಾಜ ಪುರೋಹಿತ, ಹಕೀಕತ್ ರಾವ್ ಮೊದಲಾದವರು ಬಂದಿದ್ದರು.

ಬಹಳ ಮುಖ್ಯವಾದ ಚರ್ಚೆ, ಅಹಿಂಸೆಯಿಂದ, ಸತ್ಯಾಗ್ರಹದಿಂದ ನಮ್ಮನ್ನು



ರಕ್ಷಿಸಿಕೊಳ್ಳಲು ಆಗುವುದಿಲ್ಲ. ಅದಕ್ಕಾಗಿ ಯೋಧರಾಗಿ ಕೂಟ ಯುದ್ಧ ಮಾಡಿ ರಜಾಕಾರರನ್ನು ಮಣಿಸಬೇಕು. ನಮ್ಮ ಪ್ರಾಣವನ್ನು ನಾವು ಲೆಕ್ಕಿಸುವುದಿಲ್ಲ. ಹಿಂಸಾಪೂರಿತರಾದ ಅವರನ್ನು ನಾವು ಆಯುಧದಿಂದಲೇ ಎಚ್ಚರಿಸ ಬೇಕಾಗುತ್ತದೆ ಎಂದು ಉದ್ವೇಗ ಪೂರಿತರಾಗಿ ಜಯತೀರ್ಥ ರಾಜಪುರೋಹಿತ ತರುಣನು ಮಾತನಾಡಿದನು.

ಹಕೀಕತ್‌ರಾಯರು ರಜಾಕಾರರು ನಡೆಸಿದ ಅತ್ಯಾಚಾರ, ಅನಾಚಾರ ಪಟ್ಟಿಯನ್ನು ನೀಡಿ ದರೋಡೆ, ಕೊಲೆ ಬಗ್ಗೆ ಸುದೀರ್ಘ ವರದಿ ಒಪ್ಪಿಸಿದರು. ಇದೆಲ್ಲ ಚರ್ಚೆಯಾದ ಮೇಲೆ ಕಾಂಗ್ರೆಸ್ ಮುಂದಾಳುಗಳಾದ ಎಸ್.ನಿಜಲಿಂಗಪ್ಪ ಮುಂಬೈ ಮುಖ್ಯಮಂತ್ರಿ ಬಿ.ಜಿ.ಖೇರರು ಶಸ್ತ್ರ ಹಿಡಿಯಬಹುದು, ಆದರೆ ಭಾರತ ಸರ್ಕಾರ ನಡುವೆ ಬರುವುದಿಲ್ಲ. ಅದು ನಮ್ಮ ಒಪ್ಪಂದಕ್ಕೆ, ನೀತಿಗೆ ಅಡ್ಡ ಬರುತ್ತದೆ ಎಂದು ಹೇಳಿದರು. ಆಗ ಎಲ್ಲರೂ ಸೇರಿ ಭೂಗತ ಚಟುವಟಿಕೆ ಮಾಡಲು ಒಪ್ಪಿದರು. ಶಸ್ತ್ರಾಸ್ತ್ರಗಳನ್ನು ಭಾರತ ಸರ್ಕಾರ ನೇರವಾಗಿ ಅವುಗಳನ್ನು ಕೊಡುವುದು ಆಗುವುದಿಲ್ಲ. ಅದು ನಮ್ಮ ನೀತಿಗೆ ವಿರೋಧ. ಅದನ್ನು ಸಂಪಾದಿಸಲು ವ್ಯವಸ್ಥೆ ಮಾಡೋಣ ಎಂದು ಸುದೀರ್ಘ ಚರ್ಚೆ ಮಾಡಿ ಭೂಗತ ಹೋರಾಟಕ್ಕೆ ಮುಂಬೈ ಪ್ರಾಂತ ಹಾಗೂ ಮದ್ರಾಸ್ ಪ್ರಾಂತ್ಯಗಳ ಗಡಿಯಲ್ಲಿ ಶಿಬಿರಗಳನ್ನು ಸ್ಥಾಪಿಸಲು ಹೇಳಿದರು. ಈ ಹಿಂಸಾಪೂರ್ಣ ಹೋರಾಟಕ್ಕೆ ಸ್ವಾಮಿ ರಮಾನಂದ ತೀರ್ಥರು, ಎಸ್.ನಿಜಲಿಂಗಪ್ಪನವರು ದೆಹಲಿಗೆ ಹೋಗಿ ಕಾಂಗ್ರೆಸ್ ಅಪ್ಪಣೆಯನ್ನು ಹಾಗೂ ಸರ್ದಾರ ವಲ್ಲಭಭಾಯಿ ಪಟೇಲ್ ಗೃಹಮಂತ್ರಿಯ ಅಪ್ಪಣೆ ಪಡೆದು ಬಂದರು. ಅವರು ಮುಂಬೈ ಪ್ರಾಂತ್ಯದ ಮುಖ್ಯಮಂತ್ರಿ ಬಿ.ಜಿ.ಖೇರ ಹಾಗೂ ಮದ್ರಾಸ್ ಪ್ರಾಂತದ ಮುಖ್ಯಮಂತ್ರಿ ರಾಮಸ್ವಾಮಿಗೆ ಆದೇಶಿಸಿ ಗಡಿ ಕಾಯಲು ಸೈನ್ಯ ಹಾಗೂ ಪೊಲೀಸರನ್ನು ಕಳುಹಿಸಲು ಕೇಳಿದರು. ಅವರಿಗೆ ಸೂಕ್ತ ಸಹಾಯ ಮಾಡಬೇಕು. ಆದರೆ ನೀವೆ ಒಳ ನುಗ್ಗಬೇಡಿ ಎಂದು ಆದೇಶಿಸಿದರು.

ಆಗ ಈಗಿನ ವಿಭಜಿತ ರಾಯಚೂರು ಜಿಲ್ಲೆಯಲ್ಲಿ ತುಂಗಭದ್ರಾ ಶಿಬಿರ ಉಪಶಿಬಿರ ಮಂತ್ರಾಲಯ ಹಾಗೂ ಚಳ್ಳಕೂಡ್ಲೂರು ಶಿಬಿರ ಸ್ಥಾಪನೆ ಮಾಡಲು ನಿರ್ಧರಿಸಲಾಯಿತು. ಹೀಗೆ ಮೂರು ಶಿಬಿರಗಳು ಸ್ಥಾಪನೆಯಾದವು.

**ತುಂಗಭದ್ರಾ ಶಿಬಿರಾಧಿಪತಿ :** ಶ್ರೀ ಸಂಗಮ ಹುಚ್ಚಾಚಾರ

**ಮಂತ್ರಾಲಯ ಉಪಶಿಬಿರ :** ಕಸ್ಬೆ ಪಾಂಡುರಂಗರಾವ್

**ಚಳ್ಳೆ ಕೂಡ್ಲೂರು ಶಿಬಿರ:** ಬೆಟ್ಟದೂರು ಶಂಕರಗೌರರನ್ನು ನೇಮಕ ಮಾಡಲಾಯಿತು.

ಈ ಶಿಬಿರಗಳ ವ್ಯವಸ್ಥೆಗಾಗಿ ದಾನಿಗಳನ್ನು ಮಠ ಮಾನ್ಯಗಳನ್ನು ಅವಲಂಬಿಸುವಂತೆ ಹೇಳಿದರು. ಈ ಎಲ್ಲಾ ಶಿಬಿರಗಳ ಜವಾಬ್ದಾರಿಯನ್ನು ಶಸ್ತ್ರಾಸ್ತ್ರ ಸರಬರಾಜು ಇವರನ್ನು ಅವಲಂಬಿಸಿತ್ತು. ಮಂತ್ರಾಲಯ ಮಠದ ಸ್ವಾಮಿಗಳು ಸ್ವಾತಂತ್ರ್ಯ ಹೋರಾಟಗಾರರಿಗೆ ವಾಸಿಸಲು ಸ್ಥಳ ಹಾಗೂ ಊಟದ ಏರ್ಪಾಟು ಮಾಡಿದರು. ಸ್ವಾಮಿಗಳು ಬೆಳಿಗ್ಗೆ ೫ ಗಂಟೆಗೆ ಎಬ್ಬಿಸಿ ಮುಂದಿನ ಸಿದ್ಧತೆಗೆ ಸಹಾಯ ಮಾಡಿದ್ದು ಉಂಟು ಎಂಬುದು ರಾಜಪುರೋಹಿತರಿಂದ ತಿಳಿದು ಬಂದಿದೆ.

ಈ ಅವಿಭಕ್ತ ಜಿಲ್ಲೆಯ ಗಡಿ ಶಿಬಿರಗಳ ಜವಾಬ್ದಾರಿಯನ್ನು ಜನಾರ್ಧನರಾವ್ ದೇಸಾಯಿ, ಆರ್.ವಿ.ಭಿಡಪ್, ಕೋಳೂರು ಮಲ್ಲಪ್ಪ, ಜಿ.ಕೆ. ಪ್ರಾಣೇಶಾಚಾರ್ಯ, ಜಯತೀರ್ಥ, ರಾಜಪುರೋಹಿತ ಮೊದಲಾದವರು ಹೊಂದಿದ್ದರು.

ಈ ಗಡಿ ಶಿಬಿರಗಳು ೧೯೪೭ ಅಕ್ಟೋಬರ್‌ನಲ್ಲಿ ಅಸ್ತಿತ್ವಕ್ಕೆ ಬಂದವು. ೧೯೪೮ ಸೆಪ್ಟೆಂಬರ್ ಕೊನೆಯವರೆಗೂ ಅಸ್ತಿತ್ವದಲ್ಲಿದ್ದವು. ಹಲವಾರು ಹೋರಾಟಗಾರರು ಹೋರಾಟಗಳನ್ನು ಪ್ರಾಣವನ್ನು ಲೆಕ್ಕಿಸದೆ ರಜಾಕಾರರ ರಾಕ್ಷಸಿ ದೌರ್ಜನ್ಯಗಳನ್ನು ತಡೆಹಿಡಿದು ಹಿಂದುಗಳ ಪ್ರಾಣ ಹಾಗೂ ಆಸ್ತಿ ರಕ್ಷಿಸುವ ಕೆಲಸ ಮಾಡಿದವು.

❑

# ಅಧ್ಯಾಯ–೫

**ಚಳ್ಳೆ ಕೂಡ್ಲೂರು ಮೊದಲಾದ ಶಿಬಿರಗಳ ಭೂಗತ ಹೋರಾಟಗಳು: ಚಳ್ಳೆಕೂಡ್ಲೂರು, ತುಂಗಭದ್ರಾ, ಮಂತ್ರಾಲಯ:**

ಅಸಹಕಾರ ಆಂದೋಲನದಡಿಯಲ್ಲಿ ಶಿಬಿರಗಳನ್ನು ಸ್ಥಾಪಿಸಿದ ಮೇಲೆ ಭೂಗತ ಚಟುವಟಿಕೆಗಳನ್ನು ಕೈಕೊಳ್ಳುವ ಯೋಜನೆ ಮದ್ದುಗುಂಡುಗಳ ಸಂಗ್ರಹ, ಪ್ರಾಣವನ್ನು ಪಣಕ್ಕಿಟ್ಟುಕೊಂಡು ಹೋರಾಡುವ ಛಲದಂಕ ಮಲ್ಲರ ಹುಡುಕಾಟ, ಊಟ, ವಸತಿಗಾಗಿ ವ್ಯವಸ್ಥೆ ಗುಪ್ತಚಾರರನ್ನು ಹೊಂದುವುದು ಇತ್ಯಾದಿ. ಇದರ ಜೊತೆಗೆ ಗದಗ ಕಚೇರಿಯ ಆದೇಶಗಳನ್ನು ಪಾಲಿಸುವುದು, ಒಂದು ಶಿಬಿರದೊಂದಿಗೆ ಇತರ ಶಿಬಿರಗಳ ಸಂಪರ್ಕ ಸಂಬಂಧವಿಟ್ಟು ಕೊಳ್ಳುವುದು, ಒಬ್ಬರ ಕರೆಗೆ ಇನ್ನೊಬ್ಬರು ಸಹಕರಿಸುವುದು ಮುಖ್ಯ ಕಾರ್ಯಗಳಾಗಿದ್ದವು.

ಚಳ್ಳೆಕೂಡ್ಲೂರು, ತುಂಗಭದ್ರ, ಮಂತ್ರಾಲಯ, ಆದವಾನಿ ಶಿಬಿರಗಳಲ್ಲಿ ಪರಸ್ಪರ ಸಹಕಾರಗಳಿದ್ದವು. ಈ ಶಿಬಿರಗಳ ಘಟನೆಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ವಿಂಗಡಿಸುವುದು ಹಾಗೂ ವ್ಯಕ್ತಿಗಳನ್ನು ಬೇರೆ ಬೇರೆಯಾಗಿ ಗುರುತಿಸುವುದು ಕಠಿಣ ಕೆಲಸ. ಸಾಮಾನ್ಯವಾಗಿ ಒಂದು ಶಿಬಿರದ ವ್ಯಕ್ತಿಗಳು ಇನ್ನೊಂದು ಶಿಬಿರಕ್ಕೆ ಹೋಗಿ ಆ ನಾಯಕನ ಸಹಕಾರದೊಂದಿಗೆ ಕೆಲಸ ಮಾಡಿದುದು ಕಂಡು ಬರುತ್ತದೆ. ಇವರೆಲ್ಲರ ಗುಂಪು ೧೫೦ ಕ್ಕಿಂತ ಹೆಚ್ಚಿರಲಿಲ್ಲ. ಹಳ್ಳಿಗಳಿಗೆ ಹೋದಾಗ ಊಟದ ಹಾಗೂ ವಸತಿ ಸಮಸ್ಯೆ, ಗೌಪ್ಯ ಕಾಯ್ದುಕೊಂಡು ಕ್ರಿಯಾಶೀಲರಾಗುವುದು ಕಷ್ಟವಾಗಿತ್ತು. ಬಂಧುಗಳ, ಬೀಗರ, ಸ್ನೇಹಿತರ ಮನೆಯಲ್ಲಿ ಆಶ್ರಯ ಪಡೆದೋ, ಅವಿತುಕೊಂಡೋ ಇರುವ ಪರಿಸ್ಥಿತಿ, ಜನರ ಪ್ರೀತಿ ಅನುಕಂಪ ದಯೆಗಳು ಇವರಿಗೆ ನೈತಿಕ ಸ್ಥೈರ್ಯ ನೀಡಿದ್ದವು. ಇವರೇ ಎಷ್ಟೋ ಸಲ ಪೋಲಿಸರಿಂದ ಬಚಾವು ಮಾಡಿ ಸುದ್ದಿ ನೀಡುತ್ತಿದ್ದರು. ಜನರ

ಸಹಾಯ, ಸಹಕಾರ ದೊರೆತರೂ ವಿರೋಧಿಗಳಿಂದ ಪ್ರಾಣಾಪಾಯದ ಆತಂಕ ಯಾವಾಗಲೂ ಇರುತ್ತಿತ್ತು.

ಈ ಮೂರು ಶಿಬಿರದವರು ಮೂರು ಗುಂಪುಗಳಾಗಿ ರಚಿಸಿ ಕೊಂಡು ಜನ ಜಾಗೃತಿ ಪ್ರಚಾರ ಕೈಕೊಂಡರು.

**ಮೊದಲನೆಯ ಗುಂಪು:** ರಜಾಕಾರರ ಹಾವಳಿ ಮಿತಿ ಮೀರುತ್ತಲೆ ಗಾಣಧಾಳ ನಾರಾಯಣಪ್ಪ, ಪಾಂಡುರಂಗರಾವ್, ಸಂಗಮ ಹುಚ್ಚಾಚಾರ, ಭೀಮಸೇನರಾವ್ ಪಟವಾರಿ ಅಮರಣ್ಣ, ಹಂಪಣ್ಣ, ಎ.ಚಂದ್ರಯ್ಯ, ಎಂ.ನಾಗಪ್ಪ, ಪಿ.ವೀರಣ್ಣ, ಜಯರಾಮಪ್ಪ ಮೊದಲಾದವರು. ಮರ್ಚೆಟಹಾಳ, ಉಡಮಗಲ್–ಖಾನಪುರು, ನಾಗಲಾಪುರ, ಮಟಮಾರಿ, ಈರಾಪುರ, ಬಿಚ್ಚಾಲಿ, ಗಿಲ್ಲೆಸೂಗೂರು, ಗಾಣಧಾಳ, ಗುಂಜಳ್ಳಿ, ಯರಗೇರ, ಲಿಂಗನಖಾನದೊಡ್ಡಿ, ಉಮ್ರಾಳದೊಡ್ಡಿ, ಇಡಪನೂರು, ಐಜಾಪುರ, ರಾಜಲಬಂಡಾ, ಮೊದಲಾದ ಊರುಗಳಿಗೆ ಹೋಗಿ, ಸಮಾನ ಅಭಿಪ್ರಾಯದವರನ್ನು ಕಂಡು ಗುಪ್ತ ಸಭೆ ಸೇರಿ ಊರಲ್ಲಿ ಲೇವಿ, ಹಪ್ತೆ ಕೊಡಬಾರದೆಂದು, ರಜಾಕಾರರು ಬಂದರೆ ತಮಗೆ ತಿಳಿಸಬೇಕೆಂದು, ಯಾರು ಭಯ ಪಡಬಾರದೆಂದು ತಿಳಿಸಿ ಜನರಲ್ಲಿ ನೈತಿಕ ಧೈರ್ಯ ಮೂಡಿಸಿದರು.

**ಎರಡನೆ ಗುಂಪು:** ಗಂಗನಗಾರ ನಾಗಣ್ಣ, ಗಾಣಧಾಳ ನಾರಾಯಣಪ್ಪ, ಗುಡಿಹಾಳ ಹನುಮಂತರಾಯರು, ಕೊದ್ದೊಡ್ಡಿ ನರಸಪ್ಪ, ಬಾಯಿದೊಡ್ಡಿ ನರಸಪ್ಪ, ದಸ್ತಗಿರಿ ಮೊದಲಾದವರು ಬಾಯಿದೊಡ್ಡಿ ಕೊರ್ತುಕುಂದ, ಸರ್ಜಾಪುರ, ಚಂದ್ರಬಂಡಾ, ಯಾಪಲದಿನ್ನಿ, ಡೊಂಗರಾಂಪುರದವರೆಗೆ ಹೋಗಿ ಹಪ್ತೆ ಕೊಡಬಾರದು, ಲೇವಿ ನೀಡಬಾರದು, ಸೇಂದಿ ಇಳಿಸಬಾರದು, ಹೆಂಡದಂಗಡಿ ಮುಚ್ಚಿಸಬೇಕು, ಖಾದಿ ಧರಿಸಬೇಕೆಂದು ಮೊದಲಾದ ವಿಚಾರಗಳನ್ನು ಹೇಳಿ ಜನರಲ್ಲಿ ಜಾಗೃತಿ ಉಂಟು ಮಾಡಿದರು. ಅವರಿಂದ ಶಿಬಿರಕ್ಕೆ ಆಹಾರ ಧಾನ್ಯ ಪಡೆದ ಬಗ್ಗೆಯೂ ತಿಳಿದು ಬಂದಿದೆ.

**ಮೂರನೆಯ ಗುಂಪು:** ಬೆಟ್ಟದೂರು ಶಂಕರಗೌಡ, ಮಟಮಾರಿ ಎಂ.ನಾಗಪ್ಪ, ಆಯನೂರು ನರಸಣ್ಣ, ಡಿ.ಪಂಪಣ್ಣ, ನೆರವಿ, ಪರ್ವತರೆಡ್ಡಿ, ಮಟಮಾರಿ ಶರಬಣ್ಣ, ಗೌರಣ್ಣ ಮೊದಲಾದ ೨೫ ಜನ ಸೇರಿ ಪಾದಚಾರಿಗಳಾಗಿ ಪ್ರವಾಸ ಮಾಡಿ ವಿನೋಬಾಜಿಯ ಗ್ರಾಮ ಸುತ್ತುವಿಕೆಯ ಕಾರ್ಯಕ್ರಮದಂತೆ ಸುಮಾರು ೩೬ ಮೈಲು ಪ್ರವಾಸ ಮಾಡಿ ವೀರಾಪುರ, ಕಂಬಳನ್ನೆತ್ತಿ, ಕುರ್ಡಿ, ಗೋರ್ಕಲ್, ಮರ್ಚೆಡ, ಮಾನವಿ ತಾಲ್ಲೂಕಿನ ಸುಂಕೇಶ್ವರ, ರಾಜಲಬಂಡಾ, ರಾಜೊಳ್ಳಿ, ಅರೋಲಿ, ಸಿಂಧನೂರು, ತಾಲ್ಲೂಕಿನ ಹೆಡಗಿನಾಳ, ಆಯನೂರು, ಮ್ಯಾಳೂರು ಮೊದಲಾದ ಕಡೆಗಳಲ್ಲಿ ಹೀಗೆ ಅನೇಕ ಊರು ಸುತ್ತುವರೆದು ವೀರಾಪುರದಿಂದ ಅರೋಲಿಯವರೆಗೆ ಪಾದಯಾತ್ರೆಗೈದು, ಹೊಳೆ ದಾಟಿ ಚಳ್ಳೆಕೂಡ್ಲೂರು ಶಿಬಿರಕ್ಕೆ ಸೇರಿದುದು. ಇದು ಗಾಂಧೀಜಿಯವರ ಉಪ್ಪಿನ ಸತ್ಯಾಗ್ರಹದ ದಂಡಿಯಾತ್ರೆಯ ಮಾದರಿಯಲ್ಲಿತ್ತು. ಜನರು ಊರಲ್ಲಿ ಅವರನ್ನು ಬೀಳ್ಕೊಡುತ್ತಿದ್ದುದು ಅತ್ಯಂತ ಹೃದಯ ಸ್ಪರ್ಶಿಯಾಗಿತ್ತು. ಯುದ್ಧಕ್ಕೆ ಹೋಗುವ ಯೋಧರನ್ನು ಬೀಳ್ಕೊಡುವಂತೆ ಬೀಳ್ಕೊಡುತ್ತಿದ್ದರು. ಎಲ್ಲವೂ ಮೌನದ ಮೆರವಣಿಗೆಯಲ್ಲಿ ಲೀನವಾಗಿರುತ್ತಿತ್ತು.



**ಚಳ್ಳೆಕೂಡ್ಲೂರು ಶಿಬಿರ:**

ಚಳ್ಳೆಕೂಡ್ಲೂರು ಶಿಬಿರವು ತುಂಗಭದ್ರ ನದಿಯನ್ನು ದಾಟಿ ಮದ್ರಾಸ್ ಪ್ರಾಂತದ ಬಳ್ಳಾರಿ ಜಿಲ್ಲೆಯಲ್ಲಿ ನದಿ ದಂಡೆಯ ಮೇಲಿರುವ ಚಿಕ್ಕ ಊರು. ಇದು ಕೇವಲ ಹೈದರಾಬಾದ್ ಪ್ರಾಂತ್ಯ ಗಡಿಗೆ ಅಂದರೆ ರಾಯಚೂರು ಜಿಲ್ಲೆಯ ಹಳ್ಳಿ ಗಡಿಗಳಿಗೆ ೨ ರಿಂದ ೯ ಕಿ.ಮೀ. ವರೆಗೆ ದೂರ ಇತ್ತು. ಚಳ್ಳೆಕೂಡ್ಲೂರು ಮತ್ತು ಆಯನೂರಿಗೆ ತುಂಗಭದ್ರಾ ನದಿ ಅಷ್ಟೇ ಮಧ್ಯೆ ಇತ್ತ ಹೈದರಾಬಾದ ಪ್ರಾಂತ ಅತ್ತ ಮದ್ರಾಸ್ ಪ್ರಾಂತ್ಯ ಹೀಗೆ ನದಿ ಗುಂಟ ಹಳ್ಳಿಗಳು ಇದ್ದವು. ಊರಿನ ಹೋಟೆಲ್ ಬಸಮ್ಮನ ಮೇಲ್ಮಹಡಿ ಮನೆಯಲ್ಲಿ ಶಿಬಿರದವರು ವಾಸವಾಗಿದ್ದರು. ಜನರೋ ನಿಜಾಮನ ವಿರುದ್ಧವಿದ್ದು ಶಿಬಿರದವರಿಗೆ ಸಹಾಯ ಮಾಡುತ್ತಿದ್ದರು. ಈ ಚಳ್ಳೆಕೂಡ್ಲೂರು ಶಿಬಿರದಲ್ಲಿ ಸುಮಾರು ೨೦–೨೫ ಜನ ಯಾವಾಗಲೂ ಇರುತ್ತಿದ್ದರು. ಇವರಿಗೆ ಊಟ, ವಸತಿ ಅಲ್ಲದೆ ಸರ್ಕಾರದ ವಿರುದ್ಧ ಕಾರ್ಯಚರಣೆ ಕೈಗೊಳ್ಳಲು ಮದ್ದು, ಗುಂಡು, ಕೈಬಾಂಬು, ಪಿಸ್ತೂಲುಗನ್, ಪೆಟ್ರೋಲ್‌ಬಾಂಬು ಮೊದಲಾದ ಅಸ್ತ್ರಗಳು ಬೇಕಾಗಿದ್ದವು. ಕೆಲವೊಂದು ಅಸ್ತ್ರಗಳನ್ನು ಗದಗ ಪ್ರಾದೇಶಿಕ ಶಿಬಿರಗಳಿಂದ, ಸೋಲಾಪುರದಿಂದ ತರಬೇಕಾಗಿತ್ತು, ಇಲ್ಲವೆ ಪೊಲೀಸ್ ಠಾಣೆಯ ಮೇಲೆ ದಾಳಿ ಮಾಡಿ ಸಂಪಾದಿಸಿ ಕೊಳ್ಳಬೇಕಾಗಿತ್ತು.

ಇವರ ಮುಖ್ಯ ಕೆಲಸ ಹಪ್ತೆ, ಲೇವಿ, ವಸೂಲು ಮಾಡದಂತೆ, ನಿಜಾಮನ ಸೈನ್ಯ, ರಜಾಕಾರರು ಹಾಗೂ ಅಧಿಕಾರಿಗಳಿಂದ ಹಿಂಸೆ, ಅತ್ಯಾಚಾರ,

ಅನ್ಯಾಯವಾಗದಂತೆ ತಡೆಯುವುದಾಗಿತ್ತು. ಅದಕ್ಕಾಗಿ ಅವರು ಹಳ್ಳಿಗೆ ಬಂದಾಗ ಅವರ ಮೇಲೇರಿ ಹೋಗುತ್ತಿದ್ದರು. ಅವರನ್ನು ಊರಿನಿಂದ ಓಡಿಸಿ, ಅವರಲ್ಲಿದ್ದ ಶಸ್ತ್ರಾಸ್ತ್ರ ಲೂಟಿ ಮತ್ತು ಲೇವಿ ಧಾನ್ಯಗಳ ಲೂಟಿ ಮಾಡುತ್ತಿದ್ದರು. ಕರೋಡಗಿರಿನಾಕಾ ನಾಶ, ಪೊಲೀಸ್ ಅಧಿಕಾರಿಗಳನ್ನು ಓಡಿಸಿ ಅಲ್ಲಿಯ ಹಣ ಹಾಗು ಶಸ್ತ್ರಾಸ್ತ್ರ ದರೋಡೆ ಮಾಡುತ್ತಿದ್ದರು. ಇಂತಹ ಕಾರ್ಯಕ್ರಮಗಳನ್ನು ತುಂಗಭದ್ರಾ ಶಿಬಿರವು ಮೊದಲು ಪ್ರಾರಂಭಿಸಿತು.

ಆದರೆ ಉಗ್ರರೂಪ ತಳೆದದ್ದು ಚಳ್ಳೆಕೂಡ್ಲೂರು ಶಿಬಿರದಿಂದ ಮಾತ್ರ. ಇದಕ್ಕೆ ಭೌಗೋಲಿಕ ಕಾರಣವಾಗಿ ನಿಜಾಮನ ಸೈನ್ಯ ಅಥವಾ ಪೊಲೀಸರಿಂದ ತಪ್ಪಿಸಿಕೊಳ್ಳಲು ಅನುಕೂಲವಾಗಿತ್ತು. ತುಂಗಭದ್ರಾ ನದಿ ದಾಟಿದರೆ ಮದ್ರಾಸ್ ಪ್ರಾಂತ್ಯದ ಬಳ್ಳಾರಿ ಜಿಲ್ಲೆ. ಅದು ನಿಜಾಮನ ಗಡಿಯಾಗಿರಲಿಲ್ಲ. ಅದು ನಿಜಾಂ ಗಡಿಯಿಂದ ತುಂಗಭದ್ರಾ ನದಿ ದಾಟಿದರೆ ೨ ರಿಂದ ೯ ಕಿ.ಮೀ ಒಳಗೆ ಇರುವುದು. ಇದು ಭಾರತದ ಪ್ರಾಂತ್ಯವಾಗಿದ್ದು ಸದಾ ಸನ್ನದ್ಧವಾಗಿರುವ ಸೈನಿಕರು ಹೋಮ್‌ಗಾರ್ಡ್ಸ್‌ಗಳು ಇರುತ್ತಿದ್ದರು.

ಹೆಡಗಿನಾಳ, ಆಯನೂರು, ಮ್ಯಾಳೂರು ಮೊದಲಾದ ಗಡಿ ಪ್ರದೇಶದಲ್ಲಿ ಬೆಟ್ಟದೂರು ಶಂಕರಗೌಡ, ನೆರವಿ ಪಂಪಣ್ಣ ಹಾಗೂ ಮಟಮಾರಿ ನಾಗಪ್ಪ, ಆಯನೂರಿನ ನರಸಪ್ಪ ಮೊದಲಾದವರ ಸಂಬಂಧಿಕರ ಮನೆ ಇದ್ದು. ಇವರೆಲ್ಲರನ್ನು ರಕ್ಷಿಸಲು, ಕಾಪಾಡಲು, ಭೂಗತವಾಗಲು ಅನುಕೂಲ ಜಾಗದ ಮನೆಗಳಿದ್ದವು. ಇಲ್ಲಿ ಇವರಿಗೆ ಭಯ ಕಡಿಮೆ.

ಮೂರನೆಯದಾಗಿ ನದಿ ದಂಡೆಗುಂಟ ನಿಜಾಮ ಗಡಿಯಲ್ಲಿ ಕರೋಡಗಿರಿ ನಾಕಾಗಳು ಇದ್ದವು. ದಾಳಿ ಮಾಡಿ ಗಡಿ ದಾಟಲು ಅನುಕೂಲವಾಗಿತ್ತು. ಅಲ್ಲದೆ ಅಲ್ಲಿ ಉಳಿದುಕೊಳ್ಳಲು ಸುರಕ್ಷಿತವಾದ ಬಸಮ್ಮನ ಮೇಲ್ಮಹಡಿ ಮನೆ ಅದರ ಜೊತೆ ಊಟ ನಾಷ್ಟಕ್ಕೆ ಅನುಕೂಲವಾಗಿತ್ತು. ಮುಖ್ಯವಾಗಿ ರಕ್ಷಣೆ ದೊರಕುತ್ತಿತ್ತು.

**ಚಳ್ಳೆಕೂಡ್ಲೂರು ಶಿಬಿರದ ಸಾಹಸಗಳು ಹಾಗೂ ಹೋರಾಟಗಳು:**

**ತುಂಗಭದ್ರಾ ಪೊಲೀಸ್ ಚೌಕಿಯ ಮೇಲೆ ದಾಳಿ:**

ನಿಜಾಮ ಪೊಲೀಸ್‌ರು ಗಡಿ ಸೇತುವೆಯಿಂದ ತುಂಗಭದ್ರಾ



ಸೇತುವೆಯನ್ನು ಹಗಲು–ರಾತ್ರಿ ಕಾಯುತ್ತಿದ್ದರು. ಅಲ್ಲೊಂದು ಪೊಲೀಸ್ ಚೌಕಿ ಇತ್ತು ತುಂಗಭದ್ರಾ ಶಿಬಿರದವರ ಭೂಗತ ಚಟುವಟಿಕೆಗಳು ಅವರ ಗಮನಕ್ಕೆ ಆಗಲೇ ಬಂದಿದ್ದವು. ಅವರನ್ನು ಗಡಿಯಲ್ಲಿಯೇ ಹಿಡಿದು ಮಟ್ಟ ಹಾಕುವ ಪ್ರಯತ್ನದಲ್ಲಿದ್ದರು. ಆದರೆ ಸ್ವಾತಂತ್ರ್ಯ ಯೋಧರ ಯೋಚನೆಯೇ ಬೇರೆ, ಪೊಲೀಸ್ ಚೌಕಿಯ ಮೇಲೆ ಆಕ್ರಮಣ ಮಾಡಿ ಬಂದೂಕು ಮದ್ದು ಗುಂಡು ವಶಪಡಿಸಿ ಕೊಳ್ಳುವ ಹವಣಿಕೆ ಅವರಲ್ಲಿತ್ತು, ಅದು ೧೯೪೮ ಜೂನ್ ತಿಂಗಳು ಭಾರಿ ಮಳೆ: ನದಿ ತುಂಬಿ ಹರಿಯುತ್ತಿತ್ತು. ಆಗಿನ ಸ್ವಾತಂತ್ರ್ಯ ಯೋಧರ ನಾಯಕ ಗಾಣದಾಳ ನಾರಾಯಣಪ್ಪ ತುಂಗಭದ್ರಾ ಶಿಬಿರದ ಮಹತ್ತರ ವ್ಯಕ್ತಿ, ಅವರ ಹಿರಿತನದಲ್ಲಿ ಶಸ್ತ್ರಾಸ್ತ್ರ ಲೂಟಿಗಾಗಿ ರಾತ್ರಿ ಸಮಯದಲ್ಲಿ ಬೆಟ್ಟದೂರು ಶಂಕರಗೌಡ, ಹುಲುಗುಂಚಿ ವೀರನಗೌಡ, ಎಂ.ನಾಗಪ್ಪ, ಚಂದ್ರಯ್ಯ, ಶರಬಣ್ಣ ಗೌರಣ್ಣ ಡಿ. ಪಂಪಣ್ಣ ನೆರವಿ, ಮೊದಲಾದವರು ಹೊರಟರು, ಸುತ್ತಲೂ ಅಡವಿ, ಕತ್ತಲು. ಕರಿಮೋಡ. ಒಬ್ಬರ ಮುಖ ಇನ್ನೊಬ್ಬರಿಗೆ ಕಾಣುತ್ತಿಲ್ಲ. ಅರ್ಧಮರ್ಧ ತೆಗೆದಿದ್ದ ಪೊಲೀಸ್ ಚೌಕಿಯ ಸಮೀಪ ಹೊರಟರು. ಯಾರದೋ ಅಜಾಗರೂಕತೆಯಿಂದ ಸಪ್ಪಳವಾಯಿತು. ಪೊಲೀಸರಿಗೆ ಎಚ್ಚರವಾಯಿತು, ದಡ ಬಡಿಸಿ ಎದ್ದು ಕೌನ ಹೈ? ಕೌನ ಹೈ ಎಂದು ಆಕ್ರೋಶ ಮಾಡುತ್ತ ಬಂದೂಕು ತಗೆದು ಕೊಂಡು ಕಂಡ ಕಂಡ ಕಡೆ ಗುಂಡು ಹಾರಿಸ ಹತ್ತಿದ್ದರು.

ಆಗ ಗಾಬರಿಯಿಂದ ಎಚ್ಚೆತ್ತ ಸ್ವಾತಂತ್ರ್ಯ ಯೋಧರು ಪರಿಸ್ಥಿತಿಯ ಗಂಭೀರತೆ ಅರಿತು ಓಟ ಕಿತ್ತಿದರು. ಟಾರ್ಚ್ ಬೆಳಕು ಬೀಳುವದರೊಳಗಾಗಿ ಜೀವ ಉಳಿಸಿಕೊಳ್ಳಲು ತುಂಬಿದ ನದಿಗೆ ಹಾರಿದರು. ನದಿಗೆ ಹಾರಿದವರಿಗೆಲ್ಲ ಈಜು ಬರುತ್ತಿರಲಿಲ್ಲ. ಯಾರಿಗೂ ಯಾರು ಕಾಣುತ್ತಿಲ್ಲ. ಈಜಲು ಪ್ರಾರಂಭಿಸಿದ್ದರು. ಈ ಮಧ್ಯೆ ಹುಲಗಂಜಿ ಈರಣ್ಣಗೌಡನಿಗೆ ಈಜು ಬರುತ್ತಿರಲಿಲ್ಲ. ಆದರೂ ಪ್ರಾಣ ಭಯದಿಂದ ನದಿಗೆ ಜಿಗಿದಿದ್ದ, ಹಾಗೋ ಹೀಗೂ ಜೀವ ಉಳಿಸಿ ಕೊಳ್ಳಲು ಪ್ರವಾಹದ ಹೊಡೆತಕ್ಕೆ ಹರಿದು ನಡುಗಡ್ಡೆ ತಲುಪಿದ್ದ, ಅಲ್ಲಿ ಕಂಟಿ ಹಿಡಿದು ಬೆಳತನಕ ಭಯದ ನೆರಳಲ್ಲಿ ನಡುಗುತ್ತ ಕುಳಿತಿದ್ದ. ಮರುದಿನ ಈ ವಿಷಯ ತಿಳಿದು ಬೆಳಿಗ್ಗೆ ಅವರ ಸ್ನೇಹಿತರು ಅವರನ್ನು ಹುಡುಕಿ ಕರೆದುಕೊಂಡು ಬಂದುದು ಒಂದು ಸಾಹಸದ ಗಾಥೆ.

**ಹೆಡಗಿನಾಳದಲ್ಲಿ ತಹಶೀಲ್ದಾರ ಡೇರೆಗೆ ಬೆಂಕಿ:**

ಹೆಡಗಿನಾಳ ಸಿಂಧನೂರು ತಾಲೂಕಿನ ಗಡಿ ಹಳ್ಳಿ. ಆ ಊರಿಗೆ ಕಂದಾಯ ವಸೂಲಿಗೆ ತಹಶೀಲ್ದಾರ ಬಂದಿದ್ದರು. ಅವನ ಹೆಸರು ಮದನಸಿಂಗ ಮಾಹೇಲ್. ಸಿಂಧನೂರು ತಾಲ್ಲೂಕಿನ ಒಬ್ಬ ಕ್ರೂರ ಅಧಿಕಾರಿ, ಲೇವಿ ಹಪ್ತ ವಸೂಲಿಯ ನೆಪದಲ್ಲಿ ಜನರಿಗೆ ವಿಪರೀತವಾಗಿ ಕಾಡುತ್ತಿದ್ದನು. ಹಪ್ತ ಕೊಡದವರಿಗೆ ಕಾಲಿಗೆ ಕೊರಡು ಹಾಕುವುದು, ಬೆನ್ನಿಗೆ ಬಂಡೆ ಹೇರಿ ಹಣ ವಸೂಲಿ ಮಾಡುತ್ತಿದ್ದನು. ಬರಗಾಲದಿಂದ ಬೆಂದಿದ್ದ ರೈತರು ರೋಸಿ ಹೋಗಿದ್ದರು. ಈ ಕ್ರೂರ ಶಿಕ್ಷೆ ಬೇರೆ. ಈ ತಹಶೀಲ್ದಾರ ಭೋಗ ಜೀವನಕ್ಕೆ ಕುಪ್ರಸಿದ್ಧನಾಗಿದ್ದನು. ಈ ತಹಶೀಲ್ದಾರನು ತುಂಗಭದ್ರಾ ದಂಡೆಯ ಮೇಲಿದ್ದ ಹೆಡಗಿನಾಳ ಗ್ರಾಮಕ್ಕೆ ಟೆಂಟು ಹಾಕಿ ಹಪ್ತ ವಸೂಲಿಗಾಗಿ ಕ್ಯಾಂಪು ಮಾಡಿದ್ದನು.

ಚಳ್ಳೆಕೂಡ್ಲೂರು ಶಿಬಿರದವರಿಗೆ ಈ ಎಲ್ಲ ವಿಷಯವನ್ನು ತಿಳಿಸಿ ಅವನಿಂದ ಪಾರು ಮಾಡಲು ಜನರು ಕೇಳಿಕೊಂಡರು. ಆಗ ಸ್ವಾತಂತ್ರ್ಯ ಯೋಧರಾದ ಎಮ್. ನಾಗಪ್ಪ, ಎ.ವೀರಣ್ಣ, ವಿ.ಚಂದ್ರಯ್ಯ, ಆಯನೂರು ನರಸಪ್ಪ, ಶ್ರೀರಾಮುಲು ಶರಬಯ್ಯ ಮೊದಲಾದ ಜನರು ತುಂಗಭದ್ರೆಯಿಂದ ಸಾಯಂಕಾಲ ಹೊರಟು ಊರ ಹೊರಗಿನ ಪೊದೆಯಲ್ಲಿ ಅಡಗಿ ಕುಳಿತರು. ಕತ್ತಲು ಕವಿಯುವವರೆಗೆ ಸುಮ್ಮನಿದ್ದು ತೆವಳಿಕೊಂಡು ಸಮೀಪ ಹೋಗಿ ಶಿಬಿರದವರಿಗೆ ಈ ಎಲ್ಲ ವಿಷಯವನ್ನು ತಿಳಿಸಿ ಅವನಿಂದ ಪಾರು ಮಾಡಲು ಜನರು ಕೇಳಿ ಕೊಂಡರು. ಕತ್ತಲು ಕವಿಯುವವರೆಗೆ ಸುಮ್ಮನಿದ್ದು ತೆವಳಿಕೊಂಡು ಹೋಗಿ ಒಬ್ಬರು ಡೇರೆಗೆ ಪೆಟ್ರೋಲ್ ಬಾಂಬು ಒಗೆದರು. ಅದು ಭಾರಿ ಸದ್ದು ಮಾಡಿ ಬೆಂಕಿ ಸುರಿಯಿತು. ಆಗ ಉಳಿದವರು ಹೊಳೆ ದಂಡೆಗೆ ಮಲಗಿ ಗುಂಡು ಹಾರಿಸಿದರು. ಜನ ಚೆಲ್ಲಾಪಿಲ್ಲಿಯಾದರು. ತಹಶೀಲ್ದಾರನು ಬೆದರಿದನು. ರಾತೋರಾತ್ರಿ ಡೇರೆ ಕಿತ್ತಿ ಹೊರಟನು ಆಯನೂರು ನರಸಪ್ಪ, ಎಂ. ನಾಗಪ್ಪ, ಪಿ. ವೀರಣ್ಣ ಇವರು ಬಂದ ಗ್ರಾಮಸ್ಥರೊಂದಿಗೆ ಆಯನೂರಿಗೆ ಓಡಿದರು. ಉಳಿದವರು ನದಿ ದಾಟಿ ಬಂದು ಸಂತೋಷವನ್ನಾಚರಿಸಿದರು. ಜನರ ಕಷ್ಟ ಪರಿಹರಿಸಿದ ತೃಪ್ತಿ ಇವರಿಗೆ ಜಯಮಾಲೆ ಹಾಕಿತ್ತು.

**ಎಡಿವಾಳ ಕರೋಡಗಿರಿ ನಾಕಾಕ್ಕೆ ಬೆಂಕಿ:**

ಮಾನ್ವಿ ತಾಲೂಕಿನ ಎಡಿವಾಳ ಗ್ರಾಮದಲ್ಲಿ ಕರೋಡಗಿರಿ ನಾಕಾ ಇತ್ತು, ಅದು ಸುಂಕದಕಟ್ಟೆ, ಅದನ್ನು ಲೂಟಿ ಮಾಡಲು ಆಯನೂರು ನರಸಪ್ಪ, ಎ.ಚಂದ್ರಯ್ಯ, ಪಿ. ವೀರಣ್ಣ, ಎಂ. ನಾಗಪ್ಪ ಇನ್ನಿತರರು ಕೂಡಿ ರಾತೋರಾತ್ರಿ ಆಕ್ರಮಣ ಮಾಡಿದರು. ಚಿಮಣಿ ಎಣ್ಣೆ ಹಾಕಿ, ಬೆಂಕಿ ಹಚ್ಚಿದರು. ಕಸ್ಟಮ್ ಅಧಿಕಾರಿ ಕಂಬಿ ಕಿತ್ತ ಅಲ್ಲಿದ್ದ ಪೋಲಿಸರು ಬಾಂಬು ಬಿತ್ತೆಂದು ಓಡಿದರು. ಆಗ ಅಲ್ಲಿದ್ದ ಹಣ, ಕೈ ಬಾಂಬು, ಮದ್ದುಗುಂಡು, ಶಸ್ತ್ರಾಸ್ತ್ರ ಕಾಗದ ಪತ್ರ ಲೂಟಿ ಮಾಡಿ ತುಂಗಭದ್ರ ಶಿಬಿರಕ್ಕೆ ಕೊಡಲಾಯಿತು. ಕಾಗದ ಪತ್ರಗಳಿಗೆ ಬೆಂಕಿ ಹಚ್ಚಲಾಯಿತು. ಈ ಘಟನೆಯು ೧೯೪೮ರ ನಾಗರ ಅಮವಾಸ್ಯೆಯಂದು ನಡೆಯಿತು. ಸಾಮಾನ್ಯ ಲೆಕ್ಕದಂತೆ ಜುಲೈ ಕೊನೆ ಅಥವಾ ಅಗಸ್ಟ್ ಮೊದಲನೆಯ ವಾರದಲ್ಲಿ ಘಟಿಸಿದ್ದಾಗಿದೆ. ಈ ಹೋರಾಟದ ಫಲವಾಗಿ ಆತ್ಮವಿಶ್ವಾಸ ಮೂಡಿತು. ಶಿಬಿರದ ಖರ್ಚಿಗಾಗಿ ಹಣ ಹಾಗೂ ಪೊಲೀಸ್ ಮತ್ತು ರಜಾಕಾರರೊಂದಿಗೆ ಹೋರಾಟ ಮಾಡಲು ಶಸ್ತ್ರಾಸ್ತ್ರಗಳು ದೊರಕಿದ್ದವು. ಇದು ಮಹತ್ತರ ವಿಜಯ.

**ಸದರಬಜಾರ ಪೊಲೀಸ್ ಠಾಣೆಗೆ ಬಾಂಬು ಹಾಕುವ ಪ್ರಯತ್ನ:**

೧೯೪೮ರ ಜೂನ್ ತಿಂಗಳು ಸದರ್‌ಬಜಾರ್ ಪೊಲೀಸ್ ಠಾಣೆಗೆ ಬಾಂಬು ಇಟ್ಟು ಅದನ್ನು ಸ್ಫೋಟಿಸಲು ಯುವ ನಾಯಕರು ಆದ ಪಂಪಣ್ಣ ನೆರವಿ, ಆಲ್ಕೋಡ ಅಮರೇಶ, ಎ. ಚಂದ್ರಯ್ಯ, ಯೋಚಿಸಿದರು. ಇದೊಂದು ಭಾರಿ ಮೈನಡುಗುವ ಆಲೋಚನೆ. ಇದರ ಭಯಂಕರ ಪರಿಣಾಮ ನೆನೆದು ಗೆಳೆಯರ ಮುಂದೆ ಯೋಚನೆ ಹೊರಗೆಡವಲಿಲ್ಲ. ಸಾಯಂಕಾಲದವರೆಗೂ ಕಾಯ್ದು ಅಲ್ಲಿಗೆ ಹೋದರು. ಅಲ್ಲಿಗೆ ಹೋದಾಗ ಪೂರ್ಣ ನಿರಾಸೆ ಕಾದಿತ್ತು ಆಗ ಪೊಲೀಸ್ ಠಾಣೆಯ ಮಗ್ಗಲು ಒಂದು ಹೋಟೆಲ್ ಇತ್ತು ಜನವೋ ಜನ, ಅದರ ಸಂಖ್ಯೆ ಕಡಿಮೆಯಾಗುವವರೆಗೆ ಕಾಯ್ದು, ಹೊರಗಡೆ ಕಪ್ಪು ಬಸಿ ತೊಳೆಯಲು ಪ್ರಾರಂಭಿಸಿದರು. ಅದರ ಮಗ್ಗಲು ಟಾಂಗಾ ಸ್ಟಾಂಡ್ ಅದನ್ನು ಬಳಸಿಕೊಂಡು ಮಸೀದೆಯ ಸಮೀಪ ಪೊಲೀಸ್ ಠಾಣೆಯ ಮಗ್ಗಲು ಖಾಲಿಯಿದ್ದ ಜಾಗದಲ್ಲಿ ಮೂತ್ರಕ್ಕೆ ಕೂತಂತೆ ಕೂತು, ಟೈಂಬಾಂಬು ಇಟ್ಟು, ಬಹಳ ಉದ್ದವಾಗಿದ್ದ ಬತ್ತಿಗೆ ಅಲ್ಕೋಡ ಅಮರೇಶ್ ಸಿಗರೇಟಿನಿಂದ ಅದಕ್ಕೆ ಬೆಂಕಿ ಇಟ್ಟ. ಬೆಂಕಿ ಕಾಣಬಾರದೆಂದು ಅದಕ್ಕೆ ಕಲ್ಲು ಮುಚ್ಚಿ ಇಟ್ಟು ಲಗುಬಗನೆ ಮಸೀದೆ ಹಿಂದಿನಿಂದ ಬಂದು ಟಾಂಗಾ ಹಿಡಿದು ಈ ಮೂವರು ಸ್ಟೇಶನಿಗೆ ಹೊರಟರು. ಆಗ ಸ್ಟೇಶನ್ ಹತ್ತಿರವಿದ್ದ ಕರೋಡಗಿರಿ ನಾಕಾ ಮುಟ್ಟುವದರೊಳಗಾಗಿ ಮಸೀದಿಗೆ ಯಾರೋ ಬಾಂಬು ಇಟ್ಟಿದ್ದರು. ಅದನ್ನು

ನಂದಿಸಲಾಯಿತು ಎಂಬ ಸುದ್ದಿಯನ್ನು ಜನ ಗುಜು ಗುಜು ಆಗಿ ಮಾತನಾಡುತ್ತಿದ್ದರು. ಅದು ಏನೆಂದು ತಿಳಿಯಲು ಟಾಂಗಾವಾಲಾ ಗುಂಪಿನ ಹತ್ತಿರ ಹೋಗಿ ಕೇಳಿಕೊಂಡು ಬಂದು ಹೇಳಿದ. ಇವರಿಗೆ ಬಾಂಬಿನ ಬತ್ತಿಗೆ ಬೆಂಕಿ ಇಟ್ಟು ಬಂದದ್ದು ಗೊತ್ತು ಇವರು ಮುಚ್ಚಿದ ಕಲ್ಲು ದಾಟಿ ಬತ್ತಿ ಸುರುಸುರು ಸುಡುತ್ತಿರುವಾಗ ಜನ ಏನೆಂದು ನೋಡಿ ಬಾಂಬು ಎಂದು ಹೆದರಿ ೪–೬ ಕೊಡ ನೀರು ಸುರಿದು ಪೊಲೀಸರನ್ನು ಕರೆದು ತೋರಿಸಿದರು. ಪೊಲೀಸರು ಎಚ್ಚೆತ್ತು ಬಾಂಬ್ ಇಟ್ಟವರಿಗಾಗಿ ಶೋಧನೆಗೆ ಹೊರಟರು. ಆದರೆ ಇವರು ಮಸೀದಿಗೆ ಬಾಂಬು ಇಟ್ಟಿರಲಿಲ್ಲ. ಪೊಲೀಸ್ ಠಾಣೆಗೆ ಇಟ್ಟಿದ್ದರು. ಆದಾಗ್ಯೂ ಜನ ಇವತ್ತಿನವರೆಗೂ ಮಸೀದಿಗೆ ಇಟ್ಟಿದ್ದು ಎಂದು ಹೇಳುತ್ತಾರೆ. ಆದರೆ ನಮ್ಮ ಉದ್ದೇಶ ಅದು ಇರಲಿಲ್ಲ. ಯಾವುದೇ ಧರ್ಮ ಕೆಟ್ಟದ್ದಲ್ಲ. ನಿಜವಾದ ಧರ್ಮ ಭೇದ ತಂದೊಡ್ಡುವುದಿಲ್ಲ. ತತ್ವ ಬೇರೆಯಾದರೂ ಗುರಿ ಒಂದೇ ಎಂಬ ಈ ಕಲ್ಪನೆ ನನಗೆ ಶಾಲೆಯಲ್ಲಿಯೇ ಸಿಕ್ಕಿತ್ತು. ಅದರೆ ಸತ್ಯ ಹೊರ ಬರಲೆ ಇಲ್ಲ ಎಂದು ಡಿ. ಪಂಪಣ್ಣ ಇವತ್ತಿಗೂ ಹೇಳುತ್ತಾರೆ.

ಅಲ್ಲಿಯೇ ಇವರು ಟಾಂಗ ಇಳಿದು ಡಿ.ಪಂಪಣ್ಣನವರು ಅಮರೇಶ **"**ಈಗ ನಾವು ಕಣ್ಮರೆಯಾಗಬೇಕು. ನಿಮ್ಮ ಹಾದಿ ನೀವು ಹುಡುಕಿಕೊಳ್ಳಿ. ನನ್ನ ಹಾದಿ ನಾನು ನೋಡಿಕೊಳ್ಳುತ್ತೇನೆ**"** ಎಂದು ಗಾಬರಿಯಿಂದ ಒಬ್ಬರನ್ನೊಬ್ಬರು ಬೀಳ್ಕೊಂಡರು. ಅಮರೇಶ ಮತ್ತು ಚಂದ್ರಯ್ಯ ಸ್ಟೇಷನ್ನಿನಲ್ಲಿ ಮರೆಯಾದರು. ಪಂಪಣ್ಣನವರು ಅಲ್ಲಿ ಇಲ್ಲಿ ಅಡಗಿ ಪಬ್ಲಿಕ್ ಗಾರ್ಡನ್ ಸಮೀಪವಿದ್ದ ಈಗಿನ ಎ.ಬಿ.ಪಾಟೀಲರ ಮನೆಗೆ ಬಂದರು. ಇವರು ಅವನ ಆಪ್ತಸ್ನೇಹಿತ, ಅಮರಪ್ಪ ಪಾಟೀಲರು ಆಗಿನ ಹೈದ್ರಾಬಾದ್ ಪ್ರಾಂತ್ಯದಲ್ಲಿ ಅವರಿಗೆ ಬಹಳ ಗೌರವವಿತ್ತು ಪೊಲೀಸರು, ಅಧಿಕಾರಿಗಳು ಅವರನ್ನು ಭಯ ಭಕ್ತಿಯಿಂದ ಕಾಣುತ್ತಿದ್ದರು. ಅವರ ಮಗನನ್ನು ಮೆಲ್ಲಗೆ ಎಬ್ಬಿಸಿ ನನ್ನ ಹಿಂದೆ ಬಾ ಅರ್ಜಂಟ್ ಕೆಲಸವಿದೆ. ಆದರೆ ಏಕೆ ಏನು ಎಂದು ಕೇಳಬೇಡ ನಡೆ ಸ್ಟೇಷನ್ನಿಗೆ ಎಂದು ಇಬ್ಬರು ಕೂಡಿ ಹೊರಟರು. ತುಂಗಭದ್ರ ಕಡೆಗೆ ಹೋಗುವ ಗಾಡಿ ಲೇಟಾಗಿತ್ತು ಇಬ್ಬರು ಮೌನವಾಗಿ ಅಲ್ಲಿ ಇಲ್ಲಿ ಕುಳಿತು ಕಾಲಹರಣ ಮಾಡಿದರು. ಪೊಲೀಸರೋ ಸ್ಟೇಷನ್ ತುಂಬ ಸೇರಿದ್ದರು. ಬಾಂಬು ಇಟ್ಟವನಿಗಾಗಿ ಹುಡುಕುತ್ತಿದ್ದರು. ಕೊನೆಗೆ ಬೆಳಗಿನ ಜಾವ ರೈಲು ಬಂದಿತು. ಇವರು ಕೊನೆಯ ಡಬ್ಬಿಯ ಹತ್ತಿರವಿದ್ದರು. ಗಾಡಿ ಸಿಳ್ಳು ಹೊಡೆದು ಹೊರಟಿತು. ಆಗ ಪಂಪಣ್ಣ ತನ್ನ ಸ್ನೇಹಿತನಿಗೆ ಹೇಳದೆ



ಕೇಳದೆ ಓಡುತ್ತಿದ್ದ ರೈಲನ್ನು ಹತ್ತಿ ಪೊಲೀಸರಿಂದ ಪಾರಾಗಿ ತುಂಗಭದ್ರೆಯಲ್ಲಿ ಇಳಿದಾಗ ಅಮರೇಶ ಆಲ್ಕೋಡ್, ಚಂದ್ರಯ್ಯ ಸಹಿತ ಪಾರಾಗಿ ಬಂದಿದ್ದರು. ನಿಟ್ಟುಸಿರು ಬಿಟ್ಟರು. ನಂತರ ಊರಿಗೆ ಬಂದ ಮೇಲೆ ಸದರಬಜಾರ ಠಾಣೆಗೆ ಬಾಂಬು ಇಟ್ಟವರು ನಾವು ಎಂದು ತಾಯಿಗೆ ಸತ್ಯ ವಿಷಯ ಹೇಳಿದಾಗ ಅವರ ತಾಯಿ ಗೌರಮ್ಮ ಈ ಸಣ್ಣ ಕೆಲಸಕ್ಕೆ ನೀನೇಕೆ ಹೋಗಬೇಕಾಗಿತ್ತು? ನನಗೆ ಹೇಳಿದ್ದರೆ ಆರಾಮ ಇಟ್ಟು ಬರುತ್ತಿದ್ದೆ. ಅದು ಫೇಲು ಆಗುತ್ತಿರಲಿಲ್ಲ. ನೀನು ಒಬ್ಬನೇ ಮಗ. ಇಂತ ಕೆಲಸ ಮಾಡಬಾರದು' ಎಂದು ಹೇಳಿದ್ದನ್ನು ನೆನಪಿಸಿಕೊಂಡು ತಾಯಿಯ ಬಗೆಗೆ ಅಭಿಮಾನ ಪಡುತ್ತಾರೆ.

## ಮ್ಯಾಳೂರು ಘಟನೆ – ತಪ್ಪಿಸಿಕೊಂಡ ಸ್ವಾತಂತ್ರ್ಯ ಯೋಧರು:

ವ್ಯಾಳೂರು ತುಂಗಭದ್ರ ನದಿ ದಂಡೆಯಲ್ಲಿರುವ ಗ್ರಾಮ, ಶ್ರೀರಾಮಲಿಂಗೇಶ್ವರ ದೇವಸ್ಥಾನ. ಸುತ್ತಲೂ ನದಿಯಿಂದ ಆವರಿಸಿದೆ. ಸ್ವಾತಂತ್ರ್ಯ ಹೋರಾಟಗಾರರಾದ ಪಿ. ವೀರಣ್ಣ ಎಂ.ನಾಗಪ್ಪ, ಬಸವರಾಜ ಮೊದಲಾದವರು ಅಲ್ಲಿ ವಾಸ್ತವ್ಯ ಹೂಡಿದ್ದರು. ಈ ಸುದ್ದಿ ಮಾನ್ವಿ ಪೊಲೀಸ್ ಠಾಣೆಗೆ ತಲುಪಿ, ಇವರನ್ನು ಬಂಧಿಸಲು ಅನೇಕ ಪೊಲೀಸರು ಬಂದರು. ಅವರು ಮ್ಯಾಳೂರಿಗೆ ಬರುತ್ತಲೆ ಜನರು ಅವರನ್ನು ಎಚ್ಚರಿಸಿದರು. ಇವರು ಪೆಟ್ರೋಲ್ ಬಾಂಬು, ಕೈಬಾಂಬು, ಅವರತ್ತ ಎಸೆದರು. ಅವರು ಸಹ ಗುಂಡು ಹಾರಿಸಿದರು. ಅದರಿಂದ ತಪ್ಪಿಸಿಕೊಂಡು ಓಡಿ ಹೋದರು.

## ಗಾಣಧಾಳ ಕರೋಡಗಿರಿನಾಕಕ್ಕೆ ಬಾಂಬು:

ಕ್ರಿ.ಶ. ೧೯೪೮ ಜನವರಿ ೨೯ ರಂದು ಗಾಣಧಾಳ ನಾರಾಯಣಪ್ಪ ಮತ್ತು ಎ. ಚಂದ್ರಯ್ಯ ಕೂಡಿ ಗಾಣದಾಳ ಕರೋಡಗಿರಿನಾಕಾವನ್ನು ಬಾಂಬ್ ಎಸೆದು ಸುಟ್ಟರು. ಪೊಲೀಸರು, ಕಂದಾಯ ಅಧಿಕಾರಿಗಳು ಅಲ್ಲಿಂದ ಕಾಲುಕಿತ್ತರು. ಈ ಸ್ವಾತಂತ್ರ್ಯ ಹೋರಾಟಗಾರರು ಹಳ್ಳ ದಾಟಿ ನದಿಗೆ ಬಿದ್ದು ತುಂಗಭದ್ರಾ ಕ್ಯಾಂಪಿಗೆ ಸೇರಿದರು.

## ರಾಯಚೂರು ಪಂಪ್‌ಹೌಸಿಗೆ ದಾಳಿ: ಜೈಲು ಶಿಕ್ಷೆ:

೧೯೪೮ ಫೆಬ್ರವರಿ ತಿಂಗಳಲ್ಲಿ ಶ್ರೀ ಎಂ. ನಾಗಪ್ಪನವರ ನೇತೃತ್ವದಲ್ಲಿ ಸುಮಾರು ೧೦ ಜನ ತುಂಗಭದ್ರಾ ಶಿಬಿರದಿಂದ ಹೊರಟು ತುಂಗಭದ್ರಾ ನದಿ

ದಾಟಿ ರಾಯಚೂರು ರೇಲ್ವೆ ಸ್ಟೇಷನ್ ಹತ್ತಿರ ಇರುವ ಪಂಪಹೌಸಿಗೆ ದಾಳಿ ಮಾಡುವ ಉದ್ದೇಶದಿಂದ ಹೊರಟರು. ಪಂಪಹೌಸ ಕಾವಲಿಗೆ ಇದ್ದ ಪೊಲೀಸರ ಮೇಲೆ ದಾಳಿ ಮಾಡಿ ಅವರ ಶಸ್ತ್ರಾಸ್ತ್ರಗಳನ್ನು ಕಸಿಯುವುದು ಇವರ ಗುರಿಯಾಗಿತ್ತು. ಆದರೆ ಪಂಪಹೌಸ ಸಮೀಪಿಸುತ್ತಲೇ, ಪೊಲೀಸರು ಎಚ್ಚರವಾಗಿ ಇವರ ಮೇಲೆಯೇ ದಾಳಿ ಮಾಡಿದರು. ಅದನ್ನು ತಪ್ಪಿಸಿಕೊಳ್ಳಲು ಮಟಮಾರಿ ರಸ್ತೆ ಹಿಡಿದು ಓಡಿದರು. ಪೊಲೀಸರು ಬೆನ್ನು ಬಿಡದೆ ಇವರನ್ನು ಮಟಮಾರಿ ಸ್ಟೇಷನ್ನಿನಲ್ಲಿ ಹಿಡಿದರು. ತುಂಗಭದ್ರ ನದಿ ದಾಟಿ ಹೋಗುವ ಇವರ ಪ್ರಯತ್ನ ಕೈಗೂಡಲಿಲ್ಲ, ಎಂ.ನಾಗಪ್ಪ, ಬಸವರಾಜಸ್ವಾಮಿ ವಟಗಲ್, ಪಿ.ವೀರಣ್ಣ, ಈಶ್ವರರಾಜ ಈ ಜನರ ಬಂಧನವಾಯಿತು. ಉಳಿದವರು ಅಲ್ಲಿಂದ ತಪ್ಪಿಸಿಕೊಂಡು ಓಡಿ ಹೋದರು. ಬಂಧಿಸಿದವರನ್ನು ರಾಯಚೂರ ತಾಲೂಕಿನ ಯರಗೇರ ಸ್ಟೇಷನ್‌ನಲ್ಲಿ ೧೭ ದಿನ ಇಟ್ಟರು. ಅಲ್ಲಿಯ ಸಬ್‌ಇನ್ಸಪೆಕ್ಟರ್ ಮಾಫಿನಾಮ ಬರೆದು ಕೊಡಲು ಸೂಚಿಸಿದರು. ಇವರು ಒಪ್ಪಲಿಲ್ಲ. ಅವನು ನೀವಿನ್ನೂ ಹುಡುಗರು ಎಂದು ಪರಿಪರಿಯಾಗಿ ಹೇಳಿದನು. ಉಪಯೋಗವಾಗಲಿಲ್ಲ. ಕೊನೆಗೆ ಕೈಕೋಳ ಹಾಕಿ ರಾಯಚೂರಿಗೆ ತಂದರು. ಜನರು ಇವರನ್ನು ಗಾಬರಿಯಿಂದ ನೋಡಿದರು. ಅಲ್ಲಿಂದ ರಾಯಚೂರು ಮುನ್ಸಿಫ್‌ಕೋರ್ಟಿಗೆ ಹಾಜರ ಪಡಿಸಿದರು. ಮುನ್ಸಿಫ್‌ಕೋರ್ಟಿನಲ್ಲಿ ವಿಚಾರಣೆ ನಡೆದು ೪೫ ದಿನ ಜ್ಯೂಡಿಸಿಯಲ್ ಕಸ್ಟಡಿಯಲ್ಲಿ ಇಡಲಾಯಿತು. ನಾಲ್ಕು ತಿಂಗಳ ಕಠಿಣ ಶಿಕ್ಷೆ ವಿಧಿಸಿದರು. ರಾಯಚೂರು ಜೈಲಿನಿಂದ ಗುಲ್ಬರ್ಗ ಸೆಂಟ್ರಲ್ ಜೈಲಿಗೆ ಇವರನ್ನು ವರ್ಗಾಯಿಸಲಾಯಿತು. ಒಟ್ಟು ೬ ತಿಂಗಳ ಜೈಲುವಾಸ ಅನುಭವಿಸಿದರು. ಕೇಸನ ಸಿ.ಸಿ.ನಂ ೯–೩– ೧೩೫೭, ಜೂನ್ ೩೦ ಕ್ಕೆ ಹೊರ ಬಂದರು. ಅಲ್ಲಿ ರಜಾಕಾರರು ಜೇಲಿಗೆ ದಾಳಿ ಮಾಡಿ ಅನೇಕರನ್ನು ಥಳಿಸಿ ಒಬ್ಬರನ್ನು ಕೊಂದರು.

**ಮಾನ್ವಿ ಪೋಸ್ಟ ಆಫೀಸಿಗೆ ಬೆಂಕಿಯಿಡುವ ಯತ್ನ: ಪೊಲೀಸರಿಂದ ತಪ್ಪಿಸಿ ಕೊಂಡುದುದು:**

೧೯೪೮ ಎಪ್ರಿಲ್‌ದಲ್ಲಿ ಚಳ್ಳಕೂಡ್ಲೂರು ಶಿಬಿರಾಧಿಪತಿ ಬೆಟ್ಟದೂರು ಶಂಕರಗೌಡ ಹಾಗೂ ಅಮರೇಶ ಆಲ್ಕೋಡ ಅವರು ಮಾನವಿ ಪಟ್ಟಣದ ಪೋಸ್ಟ್ ಆಫೀಸಿಗೆ ಬಾಂಬ ಇಡಬೇಕೆಂದು ಚಳ್ಳಕೂಡ್ಲೂರಿನಿಂದ ಹೊರಟರು. ಮುಷ್ಟೂರಿಗೆ ಬರುವ ಹೊತ್ತಿಗೆ ಭಾರಿ ಅಣೆಕಲ್ಲಿನ ಮಳೆ ಸುರಿಯಿತು. ಹೆಗಲ ಮೇಲೆ ಇದ್ದ ಟಾವೆಲ್ ಹೊತ್ತುಕೊಂಡು ಆಶ್ರಯ ಹುಡುಕಿಕೊಂಡು ಓಡುತ್ತಿರುವಾಗ



ದೊಡ್ಡ ಜಂಬಿಗಿಡ ಇವರ ಮೇಲೆ ಬಿತ್ತು. ಬೊಡ್ಡೆಯ ಕೆಳಗೆ ಸಿಕ್ಕಿಬಿದ್ದರು. ಮೇಲೆ ಆಣೆಕಲ್ಲಿನ ಮಳೆ ಇನ್ನೇನು ಸಾವು ಹೀಗೆ ಆಗಬಹುದು ಎಂದು ಇಬ್ಬರೂ ಊಹಿಸಿರಲಿಲ್ಲ. ಬದುಕಬೇಕೆಂಬ ಬಲವಾದ ಆಸೆಯಿಂದ ಆ ಜಂಬಿಗಿಡದ ಬೊಡ್ಡೆಯನ್ನು ಹಾಗೂ ಹೀಗೂ ಸರಿಸಿ ರಕ್ತಸಿಕ್ತವಾಗಿ ಹೊರಗೆ ಬಂದಿದ್ದರು. ಬಟ್ಟೆಯಲ್ಲಾ ಹರಿದಿದ್ದವು. ಮುಷ್ಟೂರಿಗೆ ಹೋದರು. ಅಲ್ಲಿಯ ಜನರು ಇವರನ್ನು ನೋಡಿ ಕಕ್ಕುಲಾತಿಯಿಂದ ಕುಳ್ಳಿನ ಬೆಂಕಿ ಹಾಕಿ ಮಠದಲ್ಲಿ ಬೆಳಗಿನ ತನಕ ಕೂಡಿಸಿದರು. ಚಳಿ ಮಳೆಯಿಂದ ಸೆಟೆದುಹೋಗಿದ್ದ ಕೈ ಕಾಲುಗಳಿಗೆ ಜೀವ ಬಂದಿತ್ತು. ಮಠದಲ್ಲಿ ರಾತ್ರಿ ಊಟ ಹಾಕಿದರು. ಬೆಳಿಗ್ಗೆ ಚಿಕ್ಕ ಕೊಟ್ನೆಕಲ್‌ಗೆ ತಮ್ಮ ಬಾಂಬಿನ ಗಂಟಿನೊಂದಿಗೆ ಹೋದರು. ಅಲ್ಲಿ ಬೀಗರಾದ ಪರನಗೌಡರ ಮನೆಗೆ ಹೋಗಿ, ಮಳೆಗೆ ಸಿಕ್ಕ ವಿಷಯ ತಿಳಿಸಿ ಊಟ ಮಾಡಿ ಸಾಯಂಕಾಲ ಮಾನವಿಗೆ ಹೊರಟರು. ಮಾನವಿಗೆ ಬರುತ್ತಲೆ ಭೀಮಸೇನರಾವ್ ವಕೀಲರ ಮನೆಯಲ್ಲಿ ಕೆಲಸ ಮಾಡುತ್ತಿದ್ದ ಮುಸ್ಲಿಂ ಆಳು ಶಂಕರಗೌಡನನ್ನು ಗುರುತು ಹಿಡಿದು, ಕಾಂಗ್ರೆಸ್ಸಿಗ ಶಂಕರಗೌಡ ಬಂದಿದ್ದನ್ನು ಪೊಲೀಸರಿಗೆ ತಿಳಿಸಿದನು. ಪೊಲೀಸರು ಇವರನ್ನು ಹುಡುಕಲು ಪ್ರಾರಂಭಿಸಿದರು. ಅಷ್ಟರಲ್ಲಿ ಇವರು ಕಂಬಾಳಿಮಠಕ್ಕೆ ಹೋಗಿ ಅಲ್ಲಿ ಹೊರಗಿದ್ದ ಬಂಡೆಯ ಮೇಲೆ ಅಪರಿಚಿತರಂತೆ ಕುಳಿತು ಪೂರ್ಣ ಕತ್ತಲಾದ ಮೇಲೆ ಈಗಿನ ಪ್ರೇಮ ಟಾಕೀಜ ಆಗ ಟೂರಿಂಗ್ ಟಾಕೀಜ, ಅಲ್ಲಿ ಸಿನೆಮಾ ನೋಡಲು ಹಳ್ಳಿ ಜನ ಬಂದು ಹೊರಗೆ ಕೂಡುತ್ತಿದ್ದರು. ಇವರು ಅವರ ಮಧ್ಯೆ ಸೇರಿ ಕೂತರು. ಅಲ್ಲಿ ಸಬ್‌ಇನ್ಸಪೆಕ್ಟರ್ ಬಂದು ಹುಡುಕ ಹತ್ತಿದಾಗ ಇವರ ಗುರುತು ಸಿಕ್ಕದೆ ವಾಪಸ್ ಹೋದನು. ೨–೩ ತಾಸು ಸಿನೆಮಾ ನೋಡಿ ಮತ್ತೆ ಕಂಬಳಿ ಮಠಕ್ಕೆ ಬಂದು ಬಂಡೆಯ ಮೇಲೆ ಮಲಗಿದರು. ಬೆಳಿಗ್ಗೆ ೪ ಗಂಟೆಗೆ ಎದ್ದು ಪೋಸ್ಟ್ ಆಫೀಸಿಗೆ ಹೊರಟು ಟಾರ್ಚ ಬೆಳಕಿನಲ್ಲಿ ಟೈಂ ಬಾಂಬ ಇಟ್ಟರು. ಯಾವಾಗ ಟಾರ್ಚ ಹಾಕಿದರೋ ಪೊಲೀಸರು ಅನುಮಾನಗೊಂಡು ಪೋಸ್ಟ ಆಫೀಸ್‌ಗೆ ಬಂದರು. ಅಷ್ಟೊತ್ತಿಗೆ ಈ ಯೋಧರು ಹೊರಬಿದ್ದು ಹೊರಟಿದ್ದರು. ಜನರು ಬಾಂಬಿಗೆ ಒಂದು ಡ್ರಮ್ ನೀರು ಹಾಕಿ ಆರಿಸಿದರಂತೆ. ಪೊಲೀಸರು ಬೆನ್ನಟ್ಟಿದಾಗ ಈ ಯೋಧರು ಅಡ್ಡ ದಾರಿ ಬಿದ್ದು ತಪ್ಪಿಸಿ ಕೊಂಡರು.

**ರಜಾಕಾರರ ಗುಡಿಸಲಿಗೆ ಬೆಂಕಿ ಹಚ್ಚುವ ಯತ್ನ:**

ಚೀಕಲಪರ್ವಿಗೆ ರಜಾಕಾರರು ಬಂದಾಗ ಅಲ್ಲಿ ಸೊಪ್ಪೆ ಗುಡಿಸಲು

ಹಾಕಿ ಕೊಂಡು ವಾಸಿಸುತ್ತಿದ್ದರು. ಹೋರಾಟಗಾರರು ಆ ಸೊಪ್ಪೆ ಗುಡಿಸಲಿಗೆ ಬೆಂಕಿ ಹಚ್ಚಿ ಅವರನ್ನು ಅಲ್ಲಿಂದ ಓಡಿಸುವ ಉದ್ದೇಶವಿತ್ತು. ಸ್ವಾತಂತ್ರ ಹೋರಾಟಗಾರರರಾದ ಶಂಕರಗೌಡ ಬೆಟ್ಟದೂರು ಹಾಗೂ ಅಲ್ಕೋಡ ಅಮರೇಶ ಸಾಯಂಕಾಲ ಚೀಕಲಪರ್ವಿಗೆ ಬಂದರು. ಅಲ್ಲಿ ಮಾರಮ್ಮ ಜಾತ್ರೆ ಭರ್ಜರಿಯಾಗಿ ನಡೆಯುತ್ತಿತ್ತು. ಇವರನ್ನು ನೋಡುತ್ತಲೆ ಗೌಡ ಕರೆಯಿಸಿ ಯಾರು ನೀವು? ಏಕೆ ಬಂದಿರುವಿರಿ? ಎಂದು ಕೇಳಿದಾಗ ನಾವು ನೀರಮಾನ್ವಿ ಹಂಪನಗೌಡರ ಮಕ್ಕಳು ನಮ್ಮ ಆಳು ಮನುಷ್ಯ ೩ ದಿನದಿಂದ ಕುದುರೆ ಹುಡುಕಲು ಹೋಗಿದ್ದಾನೆ ಅವನು ಬಂದಿಲ್ಲ. ಅದಕ್ಕಾಗಿ ನಾವೆ ಹುಡುಕಲು ಹೊರಟಿದ್ದೇವೆ ಎಂದರು. ಆಗ ಗೌಡನು ನೀವು ಇಲ್ಲಿ ಜಾತ್ರೆ ನೋಡಿಕೊಂಡು ಬೆಳಿಗ್ಗೆ ಹೋಗಿರುವಿರಂತೆ ಎಂದಾಗ ನಮಗೆ ಕೋಣ ಕೊಯ್ಯುವುದನ್ನು ನೋಡಿ ಮೂರ್ಛೆ ಬರುತ್ತದೆ ಎಂದಾಗ ಇವರನ್ನು ಮಠಕ್ಕೆ ಕರೆದೊಯ್ದರು. ಇವರ ಹಸಿಬಿಯಲ್ಲಿ ಕೈ ಬಾಂಬು ಇದ್ದವು. ಚಾಕಚಕ್ಯತೆಯಿಂದ ಮಠದ ಬಚ್ಚಲು ಮನೆಯಲ್ಲಿ ಇಟ್ಟು ಊಟ ಮಾಡಿ ಬರುವಾಗ ಎಚ್ಚರಿಕೆಯಿಂದ ಹೊರ ತಂದರು. ಪೊಲೀಸರೆ ಇವರ ಕಾವಲಿಗೆ ಇದ್ದರು. ಆದ ಕಾರಣ ಗುಡಿಸಲಿಗೆ ಬಾಂಬು ಹಾಕುವುದು, ಬೆಂಕಿ ಹಚ್ಚುವುದು ಸಾಧ್ಯವಾಗಲಿಲ್ಲ. ಕುದುರೆ ಹುಡುಕುವ ನೆಪದಿಂದ ಅಲ್ಲಿಂದ ಪಾರಾದದು ಸಾಹಸದ ಮಾತೆ ಸೈ.

**ಮಾನವಿ ಪೊಲೀಸ್ ಪರೇಡಿಗೆ ಬಾಂಬು:**

ಪ್ರತಿ ದಿನ ಮಾನವಿಯಲ್ಲಿ ಸಾಯಂಕಾಲ ೪ ಗಂಟೆಗೆ ಪೊಲೀಸ್ ಪರೇಡ್ ನಡೆಯುತ್ತಿತ್ತು. ಅದರಲ್ಲಿ ಸೈನ್ಯ ಪೊಲೀಸ್ ಮತ್ತು ರಜಾಕಾರರು ಇರುತ್ತಿದ್ದರು. ಅದಕ್ಕೆ ಟೈಮ್ ಬಾಂಬು ಹಾಕಿ ಅನೇಕರನ್ನು ಕೊಲ್ಲುವ ಬಯಕೆ ಚಳ್ಳೆ ಕೂಡ್ಲೂರಿನ ಶಿಬಿರಾಧಿಪತಿ ಶಂಕರಗೌಡರಿಗೆ, ಅದಕ್ಕಾಗಿ ಚಳ್ಳೆಕೊಡ್ಲೂರಿನಿಂದ ನಡೆದು ಹಾಲ್ವಿ, ಹಾಲ್ವಿಯಿಂದ ಕೋಸಗಿ, ಕೋಸಗಿಯಿಂದ ಮಟಮಾರಿ, ಅಲ್ಲಿಂದ ಜೂಕೂರಿಗೆ ಹೊರಟರು, ಮಲ್ಲನಗೌಡ ಜೂಕೂರ ಇವರ ಸಂಬಂಧಿ ಅವರ ಮನೆಗೆ ಹೋದಾಗ ಊಟಕ್ಕಾಗಿ ಇವರನ್ನು ಎಬ್ಬಿಸಿದರು. ಆಗ ಅವರು ತಮ್ಮ ಹಸಿಬಿ ಅಂದರೆ ಚೀಲದಲ್ಲಿ ಕೈ ಬಾಂಬು, ಪೆಟ್ರೋಲ್ ಬಾಂಬು, ಗ್ರೆನೈಡ್, ಗ್ಯಾಸ ಬಾಟಲು ಎಲ್ಲವನ್ನು ಕಟ್ಟಿ ಇಟ್ಟಿದರು. ಆಕಸ್ಮಿಕವಾಗಿ ಅದನ್ನು ನೋಡಿದ ಗೌಡರು ಭಯ ಬಿದ್ದರು. ಹಗಲು ಹೋಗುವುದು ಬೇಡ ಎಂದರು.



ರಾತ್ರಿ ೧೨ ಗಂಟೆಗೆ ಎಬ್ಬಿಸುತ್ತೇವೆ, ಗೋರ್ಕಲ್ ದಾರಿ ಹಿಡಿದು ತಮ್ಮ ಕುದುರೆ ಮೇಲೆ ಊರಿಗೆ ಹೋಗಲು ಸೂಚಿಸಿದರು. ರಾತ್ರಿ ೧೨ ಗಂಟೆಗೆ ಎದ್ದು ಕುದುರೆ ಹತ್ತಿ ತಮ್ಮ ಹಸಿಬಿಯನ್ನು ಜೀನಿಗೆ ಹೊಂದಿಸಿ ಇಟ್ಟು ನಡೆದರು. ಭಾರಿ ನಡಿಗೆಯ ಕುದುರೆ, ಅದರ ನಡಿಗೆಗೆ ಮನ ಸೋತರು, ಅದು ಗೋರ್ಕಲ್ ಮೇಲೆ ಅಡ್ಡ ದಾರಿ ಹಿಡಿದು ರಜಾಕಾರರನ್ನು ತಪ್ಪಿಸಿ ಹೋಗುವುದನ್ನು ಬಿಟ್ಟು ಕುದುರೆ ರಾಜಲಬಂಡ ಮುಖ್ಯ ರಸ್ತೆಗೆ ಹೊರಟಿತು. ರಸ್ತೆಯ ಬದಿಯಲ್ಲಿ ಟೆಂಟ ಹಾಕಿದ್ದ ಪೋಲಿಸರು ಯಾರು ನೀನು? ಎಂದು ಕೇಳಿದಾಗ ತಾನು ವೈರಿಯಲ್ಲವೆಂದು ಅರ್ಜೆಂಟ್ ಕೆಲಸದ ಮೇಲೆ ಊರಿಗೆ ಹೊರಟಿರುವೆನೆಂದು ಹೇಳಿದರು. ಬಂದೂಕು ದಾರಿ ಪೋಲಿಸರು ಅವನನ್ನು ಕುದುರೆಯಿಂದ ಇಳಿಸಿಕೊಂಡು ವಿಚಾರಣೆ ಮಾಡ ಹತ್ತಿದರು. ತಾನು ದೇವದುರ್ಗ ತಾಲ್ಲೂಕಿನ ಗುಂಡಗರ್ತಿ ಚೆನ್ನಬಸಪ್ಪನ ಮಗನೆಂದು ಲೀಲಾಜಾಲವಾಗಿ ಸುಳ್ಳು ಹೇಳಿದನು. ಇಷ್ಟೊತ್ತಿನಲ್ಲಿ ಏಕೆ ಬಂದ್ರಿ? ಎಂಬ ಪ್ರಶ್ನೆಗೆ ನಾನು ಹಂಪೆಯ ಜಾತ್ರೆಗೆ ಹೋಗಿದ್ದೆ. ಅಲ್ಲಿ ನನ್ನ ತಂಗಿಗೆ ಆರಾಮವಿಲ್ಲವೆಂದು ತಿಳಿಯಿತು. ಆಗ ಜೂಕೂರಿನ ಬೀಗರ ಮನೆಗೆ ಬಂದೆ ಅಲ್ಲಿ ನಮ್ಮ ತಂಗಿಗೆ ಜ್ವರ ಹೆಚ್ಚಾಗಿ ಸತ್ತು ಹೋದಳು. ಆದ ಕಾರಣ ಈ ಸತ್ತ ಸುದ್ದಿ ಮುಟ್ಟಿಸಲು ಮಾನ್ವಿಯ ಕಂಬಾಳಿ ಮಠಕ್ಕೆ ಹೊರಟಿರುವೆನು ಎಂದು ಧೈನ್ಯವಾಗಿ ತೊದಲಿಸದೆ ಅನುಮಾನಸ್ಪದವಿಲ್ಲದಂತೆ ಉತ್ತರಿಸಿದನು.

ಅವರು ಇವರ ಜೇಬು ತಲಾಷ ಮಾಡಿದ್ದರೆ ಹ್ಯಾಂಡ ಗ್ರೈನೈಡೆಗಳು ಸಿಕ್ಕುತ್ತಿದ್ದವು. ಕುದುರೆ ಜೀನಿನ ಮೇಲೆ ಟೈಂಬಾಂಬಿನ ಗಂಟು ಇತ್ತು. ಸ್ವಲ್ಪ ಪರೀಕ್ಷೆ ಮಾಡಿದ್ದರೆ ಇವರ ಬಂಧನ ನಿಶ್ಚಿತವಾಗಿತ್ತು. ಆದರೂ ಧೈರ್ಯ ಬಿಡದೆ ಬಂಧನವಾಗುವ ಪ್ರಸಂಗ ಬಂದರೆ ಹ್ಯಾಂಡ ಗ್ರೈನೈಡ್ ಸಿಡಿಸಿ ಅವರನ್ನು ಬಲಿ ತೆಗೆದುಕೊಂಡು ತಾವು ಸಾಯಲು ಸಿದ್ಧವಾಗಿದ್ದರು. ಪೋಲಿಸರಲ್ಲಿ ಇಬ್ಬರಿಗೆ ಇವರ ಬಗೆಗೆ ಕರುಣೆ ಬಂತು. ಇನ್ನೊಬ್ಬನು ಇವರನ್ನು ಸಂಶಯದಿಂದಲೇ ನೋಡುತ್ತಿದ್ದನು. ಅವನು ಕಾಂಗ್ರೆಸ್ಸಿನವರು ಹಿಂಗ ಪಾರಾಗಿ ಹೋಗುತ್ತಾರೆ, ರಾತ್ರಿ ಬಂದವರನ್ನು ಬಿಡಲಾಗದು ಎಂದಾಗ ನಾನು ಬೇಕಾದರೆ ಒಂದು ರಾತ್ರಿ ಇಲ್ಲಿ ಮಲಗುವೆ, ಅನಿವಾರ್ಯ ಪ್ರಸಂಗ. ತಂಗಿ ಸತ್ತ ಸುದ್ದಿ ತಿಳಿಸಲು ಹೊರಟಿರುವೆ ನಿಮ್ಮ ತಂಗಿ ಅಥವಾ ಅಕ್ಕ ಸತ್ತಿದ್ದರೆ ನೀವೇನು ಮಾಡುತಿದ್ದಿರಿ? ಎಂದು ಧೈರ್ಯದಿಂದ ಪ್ರಶ್ನೆ ಕೇಳಿ ಕರುಳು ಕರಗುವಂತೆ ದೈನ್ಯದಿಂದ ಅಳುತ್ತ ಸುಳ್ಳಿನ ಕಥೆ ಹೇಳಿದರು. ಆಗ ಇಬ್ಬರು ಸತ್ಯ ಹೇಳುತ್ತಾರೆ. ಹೋಗಲಿ ಬಿಡು ಎಂದು

ಕರುಣೆ ತೋರಿದರು. ಇವರ ನಾಟಕ ಫಲಿಸಿತ್ತು. ಕುದುರೆ ಹತ್ತಿಸಿದರು. ಹತ್ತುವಾಗ ಕುದುರೆ ಮೇಲೆ ಇಟ್ಟಿದ್ದ ಬಾಂಬಿನ ಹಸಿಬಿಯ ಮೇಲೆ ತಮ್ಮ ಹ್ಯಾಟು ಇಟ್ಟು ಟಾರ್ಚಿನ ಬೆಳಕಿನಿಂದ ಅದನ್ನು ಪಾರು ಮಾಡಿದರು. ಕುದುರೆ ಮೇಲೆ ಕುಳಿತಾಗ ಸಹಿ ಮಾಡಲು ಪೆನ್ನು ಕೇಳಿದರಂತೆ. ಅದು ಆಗಿನ ಕಾಲದ ಪ್ರಸಿದ್ಧ ಪಾರ್ಕರ ಪೆನ್ನು, ಬಂಗಾರದ ನಿಬ್ಬು ಅದಕ್ಕೆ ಅದರ ಬೆಲೆ ೯೮ ರೂ. ಹೋದರೆ ಹೋಗಲಿ ಜೀವ ಉಳಿದರೆ ಸಾಕೆಂದು ಅವರಿಗೆ ಕೊಟ್ಟರು. ಪೋಲಿಸರು ಹಿಂದಿರುಗಿ ಬರುವಾಗ ಇದನ್ನು ಇಸಿದು ಕೊಂಡು ಹೋಗಿ ಎಂದು ಹೇಳಿದರು. ಇವರು ಜೀವ ಉಳಿಯಿತೆಂದು ಕುದುರೆ ಓಡಿಸಿ ಬದುಕಿದರು. ಈ ಕುದುರೆ ಅವರ ಜೀವವನ್ನು ಕಾಪಾಡಿತ್ತು. ಇವರು ಪೊಲೀಸರೊಂದಿಗೆ ಮಾತನಾಡುವಾಗ ಅದು ಅತ್ತಿತ್ತ ಹೆಜ್ಜೆ ಹಾಕುತ್ತ ಪೊಲೀಸ್ ಕಣ್ಣಗಾವಲಿನಿಂದ ಶಸ್ತ್ರಾಸ್ತ್ರದ ಗಂಟನ್ನು ಕಣ್ಣಿಗೆ ಬೀಳದಂತೆ ಕಾಪಾಡಿತ್ತು. ಈ ಪ್ರಸಂಗ ಅವರಿಗೆ ಮರು ಜೀವ ನೀಡಿತ್ತು. ಬೆಳಿಗ್ಗೆ ಬೆಟ್ಟದೂರಿಗೆ ಹೋದರು. ಪಾರಾಗಿ ಬಂದು ಘಟನೆ ತಿಳಿಸಿದರು. ಮನೆಯವರು ದಂಗಾದರು. ಬೆಳಗಾಗುತ್ತಲೆ ಪೋಲಿಸರಿಗೆ ಸಂಶಯ ಬಂದು ಇವರನ್ನು ಹುಡುಕುತ್ತಿರುವ ಸುದ್ದಿ ಬಂತು. ಇವರ ಮನೆಯಿಂದ ಹೊರಟು ನದಿದಾಟಿ ಚಳ್ಳಕೂಡ್ಲೂರಿಗೆ ಹೋದರು. ಈ ಪ್ರಕರಣದ ಗುರಿಯಾದ ಮಾನವಿ ಪೊಲೀಸ ಪರೇಡಿಗೆ ಹಾಕ ಬೇಕಾಗಿದ್ದ ಬಾಂಬಿನ ಗುರಿ ಎಲ್ಲ ಕಡೆ ಕೊಂಡಿ ಕಳಚಿ ಅಸಫಲವಾಯಿತು.

## ಚಿಕ್ಕ ಬಳ್ಳಾರಿಯಲ್ಲಿ ನಡೆದ ಘಟನೆ:

ಚಳ್ಳಕೂಡ್ಲೂರು ಕ್ಯಾಂಪಿನವರು ರಾತ್ರಿ ಹೊತ್ತು ಕೈ ಬಾಂಬು ಗ್ರೈನೈಡ್ ಪೆಟ್ರೋಲ್ ಬಾಂಬು ಸಹಿತ ಬೆಟ್ಟದೂರು ಶಂಕರಗೌಡ, ಹಿರಿತನದಲ್ಲಿ ಪಂಪಣ್ಣ ಪರ್ವತರೆಡ್ಡಿ, ನರಸಪ್ಪ ಆಯನೂರು, ವೀರನಗೌಡ ಹುಲುಗುಂಚಿ ಚಿಕ್ಕಬಳ್ಳಾರಿ ಮುಖಾಂತರ ಒಳಬಳ್ಳಾರಿಗೆ ಹೊರಟಿದ್ದರು. ಇವರನ್ನು ಚಿಕ್ಕ ಬಳ್ಳಾರಿಯಲ್ಲಿ ಹೆಣ್ಣು ಮಕ್ಕಳು ನೋಡಿದರು. ರಜಾಕಾರ ಇರಬಹುದೆಂದು ಊರಗೌಡನಿಗೆ ಸುದ್ದಿ ಮುಟ್ಟಿಸಿದರು. ಊರ ಜನರೆಲ್ಲ ಸೇರಿ ಕಲ್ಲು ಬೀಸ ಹತ್ತಿದ್ದರು. ಅದರಿಂದ ತಪ್ಪಿಸಿಕೊಳ್ಳಲು ಈ ಜನರು ಅಲ್ಲಿದ್ದ ಗೋಡೆಗೆ ಹತ್ತಿ ನಿಂತು ಕೊಂಡರು. ನಾವು ರಜಾಕಾರರಲ್ಲ ಎಂದು ಕೂಗಿ ಹೇಳಿದರು. ಯಾರಿಗೂ ಕೇಳಲಿಲ್ಲ ಕೊನೆಗೆ ಅವರಲ್ಲಿಂದ ಒಬ್ಬರು ಧೈರ್ಯ ಮಾಡಿ ಜನರಿಂದ ತಪ್ಪಿಸಿಕೊಂಡು ಚಳ್ಳಕೂಡ್ಲೂರು ಕ್ಯಾಂಪಿನವರು ಎಂದು ತಿಳಿಸಿದಾಗ ಗೌಡರ ಸಹಾಯದಿಂದ



ಜೀವಂತವಾಗಿ ಮರಳಿ ಬಂದರು. ಒಳ ಬಳ್ಳಾರಿಗೆ ಹೋಗುವ ಕಾರ್ಯಕ್ರಮ ನಿಂತಿತು.

## ಆಯನೂರಿನಿಂದ ಕಂದಾಯ ಅಧಿಕಾರಿಯನ್ನು ಓಡಿಸಿದ್ದು:

ಚಳ್ಳಕೂಡ್ಲೂರು ಆಯನೂರು ಮಧ್ಯೆ ನದಿ. ಬೇಸಿಗೆಯಲ್ಲಿ ಕಾಲು ಹೊಳೆಯಾಗುತ್ತಿತ್ತು. ಆಯನೂರು ಗ್ರಾಮಕ್ಕೆ ಕಂದಾಯ ಅಧಿಕಾರಿಗಳು ಬಂದು ಟೆಂಟು ಹಾಕಿ ಕಂದಾಯ ವಸೂಲಿಯನ್ನು ಅತ್ಯಂತ ಕ್ರೂರ ರೀತಿಯಿಂದ ಮಾಡುತ್ತಿದ್ದರು. ಬರ ಬಿದ್ದಿತ್ತು ಜನರು ಕಷ್ಟದಲ್ಲಿದ್ದರು. ಜಯತೀರ್ಥ ರಾಜಪುರೋಹಿತರು ಚಳ್ಳಕೂಡ್ಲೂರಿಗೆ ಬಂದಿದ್ದರು, ಶಂಕರಗೌಡರ ಹಿರಿತನದಲ್ಲಿ ಪಂಪಣ್ಣ ನೆರವಿ, ಪರ್ವತರೆಡ್ಡಿ, ವೀರನಗೌಡ ಹುಲಗುಂಚಿ, ನರಸಪ್ಪ ಆಯನೂರು, ಅಮರೇಶ್ ಆಲ್ಕೋಡ್ ಮೊದಲಾದವರು ನದಿ ದಾಟಿ ಅಲ್ಲಿಗೆ ಹೋದರು, ಕಂದಾಯ ಅಧಿಕಾರಿಗಳಿಗೆ ಯಾವುದೆ ಕಾರಣಕ್ಕೂ ಜನರಿಗೆ ತ್ರಾಸು ಕೊಡಬಾರದು. ಮಾಲ್ಗುಜಾರಿ ವಸೂಲು ಮಾಡಬಾರದು. ಊರು ಬಿಟ್ಟು ಹೋಗಬೇಕು ಎಂದು ತಾಕೀತು ಮಾಡುತ್ತಿರುವಾಗಲೆ ಪರ್ವತರೆಡ್ಡಿ ಗೊಬ್ಬರ ಬಂಡಿ ಹಿಂದೆ ಹೋಗಿ ಟೆಂಟಿನ ಸಮೀಪ ಬಾಂಬು ಇಟ್ಟು ಓಡಿ ಬಂದನು. ಆತ ವಾಪಸು ನದಿ ದಂಡೆಗೆ ಬರುತ್ತಲೆ ಬಾಂಬು ಸಿಡಿಯಿತು. ಆಗ ಇವರೂ ಪೆಟ್ರೋಲ್ ಬಾಂಬು ಒಗೆದರು. ಬಾರಿ ಸದ್ದು ಮಾಡುವ ತೋಪು ಹಾಕಿದರು. ಇದನ್ನೆಲ್ಲಾ ನೋಡಿ ಪೊಲೀಸರು ಓಡಿ ಹೋದರು, ಕಂದಾಯ ಅಧಿಕಾರಿಗಳು ಕಂಬಿ ಕಿತ್ತರು.

## ಮದ್ಲಾಪುರ ಕರೋಡಗಿರ ನಾಕಾಕ್ಕೆ ಬೆಂಕಿ:

ಮಾನವಿ ತಾಲೂಕು ಮದ್ಲಾಪುರ ಅಲ್ಲಿ ಕರೋಡಗಿರಿ ಕಚೇರಿ ಇತ್ತು, ಅಲ್ಲಿ ಪೊಲೀಸರು ಮತ್ತು ಕಸ್ಟಂ ಅಧಿಕಾರಿಗಳು ಇರುತ್ತಿದ್ದರು. ಅಲ್ಲಿ ಸಂಗ್ರಹಿಸಿದ ದುಡ್ಡು ಹಾಗೂ ಶಸ್ತ್ರಾಸ್ತ್ರಗಳ ಲೂಟಿಗಾಗಿ ಬೆಟ್ಟದೂರು ಶಂಕರಗೌಡರು, ಅಲ್ಕೋಡ ಅಮರೇಶ, ಪರ್ವತರೆಡ್ಡಿ, ಡಿ.ಪಂಪಣ್ಣ, ಎಚ್.ವೀರನಗೌಡ, ಶ್ರೀ ರಾಮಲು ಕೂಡಿ ಹೊರಟರು. ಅವರಲ್ಲಿ ಪೆಟ್ರೋಲ್ ಬಾಂಬುಗಳು ಹ್ಯಾಂಡ್ ಗ್ರೈನೆಡ್ ಹಾಗೂ ಕೈಬಾಂಬುಗಳು ಇದ್ದವು. ಇವರು ಅಪರಿಚಿತರಂತೆ ಅಲ್ಲಿಗೆ ಮಾತನಾಡುತ್ತ ಹೋಗಿ ದೂರದಿಂದ ಪೆಟ್ರೋಲ್ ಬಾಂಬ ಒಗೆದರು. ಅನೀರೀಕ್ಷಿತ ಈ ದಾಳಿಯಿಂದ ಅಧಿಕಾರಿಗಳು ಗಾಬರಿಯಾಗಿ ಓಡಿದರು. ಕಾಯುತ್ತಿದ್ದ

ಪೋಲಿಸರು ಪ್ರತಿರೋಧ ಮಾಡದೆ ಕಂಬಿ ಕಿತ್ತರು. ಕಚೇರಿಗೆ ಬೆಂಕಿ ಬಿತ್ತು ಎಲ್ಲವೂ ಸುಟ್ಟು ಹೋಯಿತು. ವಿಜಯ ದುಂದುಭಿ ಮೊಳಗಿಸುತ್ತ ಚೆಳ್ಳೆಕೂಡ್ಲೂರಿಗೆ ರಾತ್ರೋ ರಾತ್ರಿ ಜಿಗಿದರು.

## ಕಮ್ಯುನಿಷ್ಟ ಉಗ್ರರೆಂದು ಭಾರತ ಸರ್ಕಾರದಿಂದ ಬಂಧನ:

ಸಿಂಧನೂರು ತಾಲ್ಲೂಕಿನಲ್ಲಿ ಗಡಿ ಹಳ್ಳಿಯಲ್ಲಿ ರಾಜಾಪುರ ಗ್ರಾಮ. ಅಲ್ಲಿ ಕರೋಡಗಿರಿ ನಾಕಾ ಇತ್ತು. ಕರೋಡಗಿರಿ ಎಂದರೆ ಈಗಿನ ಆಕ್ಟ್ರಾಯ್ ಕಚೇರಿಗೆ ಸಮೀಪದ ಪದ. ನದಿ ದಾಟಿ ಭಾರತದ ಭಾಗದಿಂದ ಬರುವ ಅವರಿಗೆ ಕರ ಹಾಕಿ ವಸೂಲಿ ಮಾಡುತ್ತಿದ್ದರು. ಕಳ್ಳ ಮಾಲನ್ನು ವಶಪಡಿಸಿಕೊಳ್ಳುವ ಕೇಂದ್ರ, ಅದು ಕಸ್ಟಂ ಪಾಯಿಂಟ್ ಎಂದು ಹೆಸರಾಗಿತ್ತು. ಅದರ ಕಾವಲಿಗೆ ಪೊಲೀಸರು ಬೇರೆ. ಅವರಲ್ಲಿಯ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಂಡು ಶಿಬಿರದ ಮುಂದಿನ ಕಾರ್ಯಚರಣೆಗೆ ಅನುಕೂಲವೆಂದು ತಿಳಿದು ರಾಜಾಪುರ ಕರೋಡಗಿರಿ ನಾಕಾ ಸ್ಫೋಟಿಸಲು ಯೋಜನೆ ಹಾಕಿದರು. ಅದಕ್ಕಾಗಿ ಕೈಬಾಂಬು, ಪಟ್ರೋಲು ಬಾಂಬು, ಹ್ಯಾಂಡ್ ಗ್ರೈನೆಡ್, ಶಬ್ದ ಮಾಡುವ ತೋಪು ತ್ರಿನಾಟ್ತ್ರಿ ಗನ್ನು, ಮದ್ದು ಗುಂಡು ಹೊತ್ತುಕೊಂಡು ಬೆಟ್ಟದೂರು ಶಂಕರಗೌಡ ನೇತೃತ್ವದಲ್ಲಿ ಎಂ.ನಾಗಪ್ಪ, ಡಿ.ಪಂಪಣ್ಣ ಹಂಪಣ್ಣ (ನಾಗಪ್ಪನವರ ಅಣ್ಣ ಅಮರಣ್ಣ, ಗೌರಣ್ಣ ಪರ್ವತರೆಡ್ಡಿ ಅಕ್ಕಸಾಲಿಗ ಚಂದ್ರಯ್ಯ ಮೊದಲಾದವರು ವ್ಯವಸ್ಥಿತ ಯೋಜನೆ ರೂಪಿಸಿಕೊಂಡು ರಾಜಾಪುರದ ಮಾರ್ಗಹಿಡಿದರು.

ಚೆಳ್ಳೆಕೂಡ್ಲೂರುನಿಂದ ನಡೆದು ಮದ್ರಾಸ ಪ್ರಾಂತದ ಎಮ್ಮಿಗನೂರು ತಾಲ್ಲೂಕಿನ ನಾಗಲದಿನ್ನಿಗೆ ಬಂದರು ಹೊತ್ತು ಮುಳುಗಿತ್ತು. ನಾಗಲದಿನ್ನಿ ತುಂಗಭದ್ರಾ ದಂಡೆಯ ಮೇಲಿನ ಸಣ್ಣ ಗಡಿ ಗ್ರಾಮ, ಆದರೂ ಭಾರತ ಸರ್ಕಾರ ಒಂದು ಲಾರಿ ಇಟ್ಟು ಅದರಲ್ಲಿ ೨೦–೩೦ ಪೊಲೀಸರು ಸ್ಟೇನ್‌ಗನ್, ೩೦೩ ರೈಫಲ್ ಹಾಗೂ ಒಬ್ಬ ಪೋಲಿಸ್ ಇನ್ಸ್‌ಪೆಕ್ಟರ್ ಇವರನ್ನೊಳಗೊಂಡ ಪೊಲೀಸ್ ಠಾಣೆಯಿತ್ತು. ನಿಜಾಮನ ಸೈನ್ಯದಿಂದ ಮತ್ತು ದೀನದಾರ್ ಚೆನ್ನಬಸವೇಶ್ವರ ಗುಂಪಿನಿಂದಾಗಲಿ ರಜಾಕಾರರಿಂದಾಗಲಿ ದಾಳಿಯಾದರೆ ತಡೆಯಲೆಂದು ತನ್ನ ಜನರ ರಕ್ಷಣೆಗಾಗಿ ಪೊಲೀಸ್ ಠಾಣೆ ಕಮ್ ಸೈನಿಕ ಠಾಣೆ ನಿರ್ಮಿಸಿದ್ದರು. ಹೀಗೆ ಗಡಿಗುಂಟ ಸಾಮಾನ್ಯವಾಗಿತ್ತು.

ಭಾರತ ಸರ್ಕಾರ ನಿಜಾಮನನ್ನು ತನ್ನ ಅಂಕೆಗೆ ತೆಗೆದು ಕೊಳ್ಳಲು



ಆರ್ಥಿಕ ದಿಗ್ಬಂಧನ ಹೇರಿತ್ತು. ರಾಯಚೂರು ಜಿಲ್ಲೆಯ ನೇಕಾರರಿಗೆ ನೂಲೆ ಇರಲಿಲ್ಲ. ಅದು ಒಕ್ಕೂಟ ಭಾರತದಿಂದಲೆ ಬರಬೇಕಾಗಿತ್ತು ವ್ಯಾಪಾರಸ್ಥರು ಹಣದ ಆಸೆಗಾಗಿ ಕಳ್ಳತನದಿಂದ ನೂಲು ಸಾಗಿಸುವುದನ್ನು ಇವರು ನೋಡಿದರು. ಆಗ ಇವರ ಯೋಜನೆಯಲ್ಲಿ ಹೊಸ ಹೊಳಪುಗಳು ಹುಟ್ಟಿಕೊಂಡವು. ಒಂದು ಗುಂಪು ನದಿಯ ಮೂಲಕ ಸಾಗಿಸುತ್ತಿದ್ದ ನೂಲನ್ನು ತಡೆ ಹಿಡಿಯಬೇಕು, ಆಮೇಲೆ ಯರಗೇರಾ ಪೊಲೀಸ್ ಠಾಣೆಯ ಮೇಲೆ ಏರಿ ಹೋಗಬೇಕೆಂದು ವಿಚಾರ ಮಾಡಿದರು. ಇನ್ನೊಂದು ಗುಂಪು ರಾಜಪುರಕ್ಕೆ ದಾಳಿ ಮಾಡ ಬೇಕಾಗಿತ್ತು. ಹರಗೋಲಿನವರಲ್ಲಿ ವಿಚಾರಣೆ ಮಾಡಿ ನದಿ ಆ ಕಡೆ ರಾತ್ರಿ ೧೨ ಗಂಟೆಗೆ ಸಾಗಿಸಲು ಕೇಳಿದಷ್ಟು ದುಡ್ಡು ಕೊಡುವ ಕರಾರಿನ ಮೇಲೆ ಮುಗಿಸಿದರು. ಇನ್ನೇನು ಊಟ ಮಾಡಿ ಕಾರ್ಯಚರಣೆ ಪ್ರಾರಂಭಿಸಬೇಕು ಎನ್ನುವಷ್ಟರಲ್ಲಿ ಭಾರಿ ಮಳೆ ಸುರಿಯಿತು. ಅದು ರಭಸವಾಗಿತ್ತು ಒಬ್ಬರ ಮುಖ ಇನ್ನೊಬ್ಬರಿಗೆ ಕಾಣಿಸದಷ್ಟು ಕಪ್ಪು ಮೋಡ ಆವರಿಸಿತ್ತು ಗುಡುಗು, ಸಿಡಿಲು, ತುಂಬಿದ ಮಳೆ, ಹೇಗೋ ಸಹಿಸಿಕೊಂಡು ಹೋದರೆ ಊರೊಳಗೆ ಕಾಲರಾ ಬಂದಿತ್ತು. ಜನ ಊರು ಬಿಟ್ಟಿದ್ದರು. ತಿನ್ನಲು ಏನೂ ಇರಲಿಲ್ಲ. ಒಂದು ಕಿರಾಣಿ ಅಂಗಡಿ ತೆಗೆಯಿಸಿ ಅಕ್ಕಿ ಬೇಳೆ ತೆಗೆದುಕೊಂಡು ಇನ್ನೇನು ಅಡಿಗೆ ಮಾಡಬೇಕು ಎನ್ನುವಷ್ಟರಲ್ಲಿ ಒಬ್ಬ ಮನುಷ್ಯ ಬಂದು ನಮ್ಮ ಕಷ್ಟ ಕೇಳಿ ತಾನೂ ಕಾಂಗ್ರೆಸ್ ಕಾರ್ಯಕರ್ತ ಎಂದು ಹೇಳಿ ಕೊಂಡು ಸಹಾಯ ಮಾಡುವನೆಂದು ಅಡಿಗೆ ಮಾಡಿಸಲು ಒಂದು ಮನೆಗೆ ಕರೆದೊಯ್ದು ಇವರ ಆಹಾರ ಧಾನ್ಯ ಕೊಟ್ಟರು. ಅಡಿಗೆ ಮಾಡಿದರು. ಅಲ್ಲಿಯೇ ಊಟ ಮಾಡ ಬೇಕೆನ್ನುವಷ್ಟರಲ್ಲಿ ಮಳೆಗಾಲದ ರೆಕ್ಕೆ ಹುಳುಗಳು ಬಂದವು. ಅಡಿಗೆ ಸಾರಿನಲ್ಲಿ ಬಿದ್ದವು. ತಿಳಿದಷ್ಟು ಊಟ ಮಾಡಿ ಅದನ್ನು ಅಲ್ಲಿಯೇ ಬಿಟ್ಟು ಪಡಸಾಲೆಯಲ್ಲಿ ಮಲಗಿದರು. ಅವರ ಮದ್ದು ಗುಂಡಿನ ಶಸ್ತ್ರಾಸ್ತ್ರಗಳ ಹಸಿಬಿ(ಚೀಲ) ಡಿ.ಪಂಪಣ್ಣ ನೆರವಿಯ ತಲೆದಿಂಬಿಗೆ ಇಟ್ಟು ಮಲಗಿದರು. ಕೆಲಕ್ಷಣಗಳಲ್ಲಿಯೇ ಭಾರತದ ಸೈನ್ಯ ಇವರನ್ನು ಸುತ್ತುವರೆದಿತ್ತು, ಎಲ್ಲರ ತಲೆಗಳಿಗೆ ಗುಂಡಿಟ್ಟು ಅತ್ತ ಇತ್ತ ಚಲಿಸಬೇಡಿ. ಏನಾದರೂ ಪ್ರಯತ್ನ ಮಾಡಿದರೆ ಎಲ್ಲರೂ ಜೀವ ಕಳೆದುಕೊಳ್ಳುತ್ತೀರಿ ಎಂದು ಎಚ್ಚರಿಕೆ ಕೊಟ್ಟರಂತೆ. ಈ ಬಲೆಗೆ ಬಿದ್ದಿದ್ದು ಆ ಕಾಂಗ್ರೆಸ್ ಕಾರ್ಯಕರ್ತನೆಂದು ಹೇಳಿಕೊಂಡವನಿಂದ. ಅವನು ಪೊಲೀಸ್ ಸಿ.ಆಯ್.ಡಿ ಆಗಿದ್ದನು.

ಇವರು ಸ್ವಾತಂತ್ರ ಯೋಧರೆಂದು ಹೇಳಿದಾಗಲೂ ನಂಬದೆ ಇವರ

ಕಿವಿಗಳು ಆಲಿಯಲ್ಲಿ ತೂತು ಇದೆಯೋ ಇಲ್ಲೋ ಎಂದು ಪರೀಕ್ಷಿಸಿದಾಗ ಎಲ್ಲರ ಕಿವಿಗಳ ಆಲಿಯಲ್ಲಿ ತೂತುಗಳು ಇದ್ದವು. ಇವರು ಚನ್ನಬಸವೇಶ್ವರ ದೀನ್‌ದಾರ್ ಸಂಘದವರಾಗಲಿ, ರಜಾಕಾರರಾಗಲಿ ಅಲ್ಲವೆಂದು ತೀರ್ಮಾನಿಸಿದರು. ಇವರ ಹಸಿಬಿ ತೆರೆದಾಗ ಭಾರಿ ಶಸ್ತ್ರಗಳನ್ನು ಕಂಡು ಇವರನ್ನು ಉಗ್ರ ಕಮುನಿಷ್ಟರೆಂದು ಭಾವಿಸಿದರು. ಇಲ್ಲಿಗೆ ಸಮೀಪದ ರಾಮಪುರದಲ್ಲಿ ಕಮ್ಯುನಿಷ್ಟರ ಕ್ಯಾಂಪ್ ಇತ್ತು ಈ ಸ್ವಾತಂತ್ರ್ಯ ಯೋಧರೂ ಸಹ ಅಲ್ಲಿಯೇ ಅನೇಕ ಸಲ ಊಟ ಮಾಡಿದ್ದರು. ಇದೇ ಸಂದರ್ಭದಲ್ಲಿ ಚಾಗಿ ಗ್ರಾಮದಲ್ಲಿ ದೀನ್ ದಾರ್ ಸಿದ್ದೀಕಿ ಸಂಘದವರು ಗದ್ದಲ ಮಾಡಿದ್ದರು. ಆದ ಕಾರಣ ಇವರನ್ನು ಸುತ್ತುವರೆದು ಒಬ್ಬೊಬ್ಬರನ್ನು ನಿಲ್ಲಿಸಿ ಚೆಕ್ ಮಾಡಿ ಎಲ್ಲವನ್ನು ಕಸಿದು ಕೊಂಡು ಪೊಲೀಸ್ ಕಸ್ಟಡಿಗೆ ಕೊಡಲಾಯಿತು. ಇವರ ಮಾತುಗಳನ್ನು ಕೇಳದ ಪೊಲೀಸರು ಇವರನ್ನು ಚಳ್ಳೆಕೂಡ್ಲೂರಿಗೆ ಕರೆದುಕೊಂಡು ಆ ಶಿಬಿರದ ಮನೆಗೆ ಹೋದರು. ಅಲ್ಲಿ ಅವರು ಇಟ್ಟಿದ್ದ ಅಸ್ತ್ರ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಂಡರು. ಈ ಸುದ್ದಿ ಗದಗ ಕಾಂಗ್ರೆಸ್ ಆಫೀಸಿಗೆ ತಲುಪಿತು. ಕಾಂಗ್ರೆಸ್ ಮುಖಂಡ ಜಿ.ಕೆ.ಪ್ರಾಣೇಶಾಚಾರ್ಯ ಅವರು ಮದ್ರಾಸ್ ಪ್ರಾಂತದ ಮುಖ್ಯಮಂತ್ರಿ ಓಮನಡೋಗ ರಾಮಸ್ವಾಮಿಯವರಿಗೆ ಚೆಳ್ಳೆಕೂಡ್ಲೂರು ಶಿಬಿರದವರ ಸತ್ಯಕಥೆ ತಿಳಿಸಿ ಅವರು ಕಮ್ಯುನಿಷ್ಟರಲ್ಲವೆಂದು ಮನಗಾಣಿಸಿದರು. ಅವರು ಬಿಡುಗಡೆಯ ಬಗ್ಗೆ ಭರವಸೆ ಪಡೆದರು.

ಎಮ್ಮಿಗನೂರು ಪೋಲಿಸ್ ಠಾಣೆಗೆ ಆದವಾನಿಯ ಗಲಗಲಿ ಎಂಬುವರು ಭೇಟಿಯಾಗಿ ಇವರಿಗೆ ಸಾಂತ್ವನ ಹೇಳಿದರು. ಎಮ್ಮಿಗನೂರಲ್ಲಿ ಧಾರವಾಡದ ಮಿಂಚಿನಬಳ್ಳಿ ಪ್ರಕಾಶನದ ಸಾಹಿತಿ ಬುರ್ಲಿ ಬಿಂದು ಮಾಧವ ಅವರ ಪತ್ನಿ ಇವರಿಗೆ ಊಟ ತಂದು ಕೊಟ್ಟು ಉಪಚರಿಸುತ್ತಿದ್ದರು. ಆ ತಾಯಿ ಇವರಿಗೆ ಧೈರ್ಯ ತುಂಬಿ ಬಿಡುಗಡೆ ಭರವಸೆಯ ನೈತಿಕ ಸ್ಥೈರ್ಯ ತುಂಬಿದಳು. ಆ ಸಂದರ್ಭದಲ್ಲಿ ಜವಾಹರಲಾಲರು ಪ್ರಧಾನಿಯಾದ ಮೇಲೆ ದೇಶ ಸ್ವತಂತ್ರವಾದ ಮೇಲೆ ಮೊಟ್ಟ ಮೊದಲನೆಯ ಸಲ ಮದ್ರಾಸ ಭೇಟಿಯ ಕಾರ್ಯಕ್ರಮವಿತ್ತು. ಎಲ್ಲ ಪೊಲೀಸರು ಹಾಗೂ ಅಧಿಕಾರಿಗಳು ಅವರ ಸ್ವಾಗತ ಹಾಗೂ ರಕ್ಷಣೆಯ ವಿಷಯದಲ್ಲಿ ಮಗ್ನರಾಗಿದ್ದರು. ಆದುದರಿಂದ ಇವರ ಬಿಡುಗಡೆ ೧೦–೧೫ ದಿನ ಮುಂದೆ ಹೋಯಿತು. ಜುಲೈ ಕೊನೆಗೆ ಬಿಡುಗಡೆಯಾದ ಕೂಡಲೇ ಇವರು ಆದವಾನಿಗೆ ಹೋಗಿ ಆರ್ಥಿಕ ದಿಗ್ಬಂಧನ ಯಶಸ್ಸುಗೊಳಿಸುವುದರಲ್ಲಿ ಕಾರ್ಯ ನಿರ್ವಹಿಸಿದರು.

## ಅಧ್ಯಾಯ–೬

# ಭಾರತ ಸರ್ಕಾರದ ಕ್ರಮಗಳು: ನಿಜಾಮ ಸರ್ಕಾರದ ಆಡಳಿತಕ್ಕೆ ಬೇಸತ್ತು ಅದಕ್ಕೆ ಬುದ್ಧಿಕಲಿಸಲು ಹೇರಿದ ಮೊದಲನೆಯ ಕ್ರಮವೇ ಆರ್ಥಿಕ ದಿಗ್ಬಂಧನ

### ಮೊದಲನೆಯ ಕ್ರಮ:

ಭಾರತ ಸರ್ಕಾರವು ಜೂನ್ ೧೬, ೧೯೪೮ ರಂದು ಹೈದ್ರಾಬಾದ ಪ್ರಾಂತಕ್ಕೆ ಬುದ್ದಿ ಕಲಿಸಲು ಆರ್ಥಿಕ ದಿಗ್ಬಂಧನ ಹೇರಿದ್ದರು. ಇದರಿಂದ ಭಾರತದ ನಾಣ್ಯಗಳು (ಕಲ್ದಾರ ಎಂಬ ಹೆಸರು) ಅಲ್ಲಿಗೆ ಹೋಗದಂತೆ ನಿರ್ಬಂಧಗಳನ್ನು ಹಾಕಲಾಗಿತ್ತು. ಇದರಿಂದ ಆರ್ಥಿಕ ಸ್ಥಿತಿ ಹದಗೆಟ್ಟಿತು. ಬಟ್ಟೆ, ಚಿಮಣಿ ಎಣ್ಣೆ, ಅಕ್ಕಿ, ಸಕ್ಕರೆ, ಉಪ್ಪು, ಕಡ್ಡಿಪೆಟ್ಟಿಗೆ, ನೂಲು ಮೊದಲಾದ ಮುಖ್ಯ ಪದಾರ್ಥಗಳನ್ನು ರಫ್ತು ಮಾಡುವುದನ್ನು ಭಾರತ ಸರ್ಕಾರ ನಿಲ್ಲಿಸಿತು. ಇಡೀ ಹೈದ್ರಾಬಾದ ಪ್ರಾಂತದಲ್ಲಿ ಇವುಗಳ ಕೊರತೆಯಾಗಿ ಸರ್ಕಾರ ದಿಕ್ಕುಗೆಟ್ಟಿತ್ತು. ಕಳ್ಳ ವ್ಯಾಪಾರವನ್ನು ತಡೆಯಲು ಅಲ್ಲಲ್ಲಿ ಕಸ್ಟಂ ಅಧಿಕಾರಿಗಳನ್ನು ಭಾರತ ಸರ್ಕಾರ ನೇಮಿಸಿದುದರಿಂದ ವ್ಯಾಪಾರವೇ ಹದಗಟ್ಟಿತ್ತು. ಇದರಿಂದ ಹೈದ್ರಾಬಾದ ಪ್ರಾಂತಕ್ಕೆ ಜನರು ಹಿಡಿ ಶಾಪವನ್ನು ಹಾಕುವಂತಾಯಿತು. ಸೈನ್ಯಕ್ಕೂ ಇದರ ಬಿಸಿ ತಟ್ಟಿತ್ತು. ಆಗ ಸ್ವಾತಂತ್ರ್ಯ ಯೋಧರು ಹೈದ್ರಾಬಾದ್ ಪ್ರಾಂತಕ್ಕೆ ಹೋಗುವ ರೈಲು ಚೆಕ್ ಮಾಡಿ ಕಳ್ಳ ಸಾಗಣೆ ಮಾಡುತ್ತಿದ್ದ ಕಡ್ಡಿ ಪೊಟ್ಟಣ, ನಾಣ್ಯ, ಉಪ್ಪು, ನೂಲು, ಆಹಾರ ಧಾನ್ಯಗಳನ್ನು ಅಲ್ಲಿಯೇ ಇಳಿಸಿಕೊಂಡು ಭಾರತ ಸರ್ಕಾರಕ್ಕೆ ಕೈಜೋಡಿಸಿ ಹೈದ್ರಾಬಾದ್ ನಿಜಾಮನು ಪರಿತಪಿಸುವಂತೆ ಮಾಡಿದರು.

ಈ ಕಾರ್ಯದಲ್ಲಿ ಆದವಾನಿ, ತುಂಗಭದ್ರಾ ಶಿಬಿರದವರು ಸ್ಟೇಶನದಲ್ಲಿ

ರೈಲು ಹತ್ತಿ ರಾಯಚೂರಿಗೆ ಹೋಗುವ ಪ್ರತಿ ಡಬ್ಬಿವನ್ನು ಚೆಕ್ ಮಾಡಿ ಭಾರತ ಸರ್ಕಾರದ ಆರ್ಥಿಕ ದಿಗ್ಬಂಧನೆಗೆ ಸಹಕರಿಸಿದರು. ಇವರಲ್ಲಿ ಪ್ರಮುಖರಾದವರು ಗೌರಣ್ಣ ಹಂಪಣ್ಣ ಎಂ.ನಾಗಪ್ಪ, ಪರ್ವತರೆಡ್ಡಿ, ಶರಬಯ್ಯ, ಚಂದ್ರಯ್ಯ, ಬಸಣ್ಣ, ರಾಜಪುರೋಹಿತ, ಡಿ.ಪಂಪಣ್ಣ ರುದ್ರಯ್ಯ, ಮಾಸ್ತರ ಶರಬಣ್ಣ ಮೊದಲಾದ ಅನೇಕರು ಇದ್ದರು. ಸೋಲಾಪುರದ ಹುಟ್ಗಿ ಸ್ಟೇಶನದಲ್ಲಿ ಸಹಿತ ಅನೇಕ ರಾಯಚೂರಿನ ಆರ್ಯ ಸಮಾಜದವರು ಈ ಕೆಲಸ ಮಾಡಿದ್ದು ಬಹಳ ಪ್ರಮುಖವಾದ ಘಟನೆಯಾಗಿದೆ.

## ಎರಡನೆಯ ಕ್ರಮ:

ಯಥಾಸ್ಥಿತಿಒಪ್ಪಂದದ ನಂತರ ಹೈದ್ರಾಬಾದ ಸಂಸ್ಥಾನದಲ್ಲಿ ಶಾಂತಿ ನೆಲಸಬಹುದೆಂದು ಊಹಿಸಿದ್ದ ವಿಚಾರಗಳು ತಲೆಕೆಳಗಾದವು. ಭಾರತಸರ್ಕಾರ ಯಥಾಸ್ಥಿತಿ ಒಪ್ಪಂದದನ್ವಯ ಕೆ.ಎಂ.ಮುನಷಿಯವರನ್ನು ಭಾರತದ "ದಿ ಏಜೆಂಟ್ ಜನರಲ್' ಎಂದು ಹೈದ್ರಾಬಾದ್‌ಕ್ಕೆ ಕಳುಹಿಸಿದುದೇ ರಜಾಕಾರರ ದೃಷ್ಟಿಯಲ್ಲಿ ನಿಜಾಮನ ಕಲ್ಪನೆಯಲ್ಲಿ ಬಹಳ ದೊಡ್ಡ ಗೆಲುವಾಗಿತ್ತು. ಹೇಗಾದರೂ ಮಾಡಿ ವಿಶ್ವದ ಒತ್ತಡ ತಂದು, ಗೋವಾ ಖರೀದಿಸಿ ಕರಾವಳಿ ಹೊಂದಿ, ಪಾಕಿಸ್ಥಾನದ ಸಹಾಯದೊಂದಿಗೆ ಸ್ವತಂತ್ರ ಸಾರ್ವಭೌಮತ್ವದ ಕನಸು ಕಾಣ ಹತ್ತಿದರು. ಅದಕ್ಕಾಗಿ ಶಸ್ತ್ರಾಸ್ತ್ರ ಖರೀದಿ ಮಾಡ ಹತ್ತಿದರು. ಈ ಪರಿಣಾಮವಾಗಿ ರಜಾಕಾರರ ಕ್ರೂರ ಚಟುವಟಿಕೆಗಳು ಮಿತಿ ಮೀರಿದವು.

ಭಾರತ ಸರ್ಕಾರವು ಪ್ರಪ್ರಥಮವಾಗಿ ಭಾರತೀಯ ಹಳ್ಳಿಗಳ ಮೇಲೆ ದಾಳಿ ಮಾಡುತ್ತಿದ್ದ ಗಡಿಯಲ್ಲಿದ್ದ ನಿಜಾಂ ಸೈನ್ಯ ಹಾಗೂ ರಜಾಕಾರರನ್ನು ಹತ್ತಿಕ್ಕಲು ೯ನೆಯ ಜೂನ ೧೯೪೮ ರಂದು ಸೈನ್ಯಕ್ಕೆ ಆದೇಶ ನೀಡಿ ಗಡಿಯೊಳಗೆ ನುಗ್ಗುವ ದಾಳಿಕೋರರನ್ನು ೩ ಮೈಲುಗಳವರೆಗೆ ನಿಜಾಂ ಗಡಿಯೊಳಗೆ ನುಗ್ಗಿ ಅವರನ್ನು ಶಿಕ್ಷಿಸುವ ಕಾರ್ಯಚರಣೆಗೆ ಒಪ್ಪಿಗೆ ಕೊಟ್ಟು ಸೈನ್ಯಕ್ಕೆ ಆದೇಶ ನೀಡಿದರು. ಈ ಕಾರಣದಿಂದ ಗಡಿಯೊಳಗೆ ಭಾರತೀಯ ಸೈನ್ಯ ಬೀಡು ಬಿಟ್ಟಿತ್ತು ನಿಜಾಂ ಸೈನ್ಯ ಬಾಲ ಮುದುರಿಕೊಂಡು ೩ ಮೈಲು ಹಿಂದಕ್ಕೆ ಸರಿಯಿತು. ಇದೇ ಸಂದರ್ಭದಲ್ಲಿ ಭಾರತ ಸರ್ಕಾರವು ರಾಜಕೀಯ ಸುಧಾರಣೆಗಳನ್ನು ಬಯಸಿ ಬಹುಸಂಖ್ಯಾತ ಹಿಂದುಗಳ ಮೇಲೆ ನಡೆಯುತ್ತಿರುವ ಹಿಂಸೆಗಳನ್ನು ತಕ್ಷಣದಿಂದ ನಿಲ್ಲಿಸಲು, ಅರೆಸೈನಿಕ ರಜಾಕಾರರನ್ನು ಹಿಂದಕ್ಕೆ ಪಡೆಯಲು ಸೂಚಿಸಿದಾಗ



ಮಾತುಕತೆ ಭಾರತ ಸರ್ಕಾರದೊಂದಿಗೆ ನಡೆಯಿತು. ಪ್ರಧಾನಿ ಮಿರ್ಜಾ ಇಸ್ಮಾಯಿಲ್‌ರ ವಿಚಾರಗಳನ್ನು ನಿಜಾಮನು ಒಪ್ಪದಾದಾಗ ಅವರು ರಾಜೀನಾಮೆ ನೀಡಿದರು. ಆಗ ಮತ್ತೆ ಲಿಯಾಕತ್ ಅಲಿ ಪ್ರಧಾನಿಯಾಗಿ ಅಧಿಕಾರವಹಿಸಿ ಕೊಂಡರು. ಅವನು ಕಾಶಿಂ ರಜವಿಯ ಕೈಗೊಂಬೆಯಂತೆ ವರ್ತಿಸುತ್ತಿದ್ದನು. ಆಗ ಭಾರತ ಸರ್ಕಾರ ಶ್ವೇತ ಪತ್ರ ಹೊರಡಿಸಿ ನಿಜಾಮನಿಗೆ ಎಚ್ಚರಿಕೆ ಕೊಟ್ಟಿತ್ತು. ಇದೇ ಸಂದರ್ಭದಲ್ಲಿ ಬಿಕಾನೇರನಲ್ಲಿ ಜಯಪ್ರಕಾಶ ನಾರಾಯಣರು ನಿಜಾಮನಿಗೆ ಎಚ್ಚರಿಕೆ ನೀಡಿ ಭಾರತ ಸರ್ಕಾರವು ಸೈನಿಕ ಕಾರ್ಯಚರಣೆ ಮಾಡಿ ಅಲ್ಲಿಯ ಜನರ ಕಷ್ಟ ಪರಿಹರಿಸಬೇಕೆಂದು ಕರೆ ನೀಡಿದರು. ಎಚ್ಚರಿಸಿದಾಗ, ನಿಜಾಮನು ಇಲ್ಲಿಯ ಪರಿಸ್ಥಿತಿ ಸಾಮಾನ್ಯವಾಗಿದೆ ಎಂದು ಮಾಡಿದ ಅಪಾದನೆಗಳನ್ನು ಸುಳ್ಳು ಹೇಳಿ ತಳ್ಳಿ ಹಾಕಿದನು.

ಶ್ವೇತಪತ್ರ: ೮ನೇ ಜುಲೈ ಬುಧವಾರ ೧೯೪೮ ರಂದು ಭಾರತ ಸರಕಾರ ಶ್ವೇತಪತ್ರ ಹೊರಡಿಸಿ ಹೈದರಾಬಾದ ಪ್ರಾಂತದಲ್ಲಿ ನಡೆದ ಅತ್ಯಾಚಾರಗಳನ್ನು, ರಜಾಕಾರರ ಕ್ರೂರ ಕೃತ್ಯಗಳನ್ನು ನಿಜಾಮನ ನಿರ್ಲಕ್ಷ್ಯವನ್ನು ಕಟುವಾಗಿ ಟೀಕಿಸಿ ಜನ ಬಯಸುವ ರೀತಿಯಲ್ಲಿ ಸರಕಾರ ನಡೆಸಬೇಕೆಂದರು. ಇದೇ ರೀತಿ ಮುಂದುವರೆದರೆ ಭಾರತ ಸುಮ್ಮನೆ ಕೊಡುವುದಿಲ್ಲ ಎಂಬ ಎಚ್ಚರಿಕೆಯನ್ನು ನೀಡಿತು. ಬರ್ಸಿ– ಲಾತೂರು ರೈಲನ್ನು ರದ್ದುಪಡಿಸಿತು.

## ಮೂರನೆಯ ಕ್ರಮ:

ಪೊಲೀಸ್ ಆಕ್ಷನ್ ಆಪರೇಷನ್ ಪೋಲೊ: ಭಾರತದ ಉಕ್ಕಿನ ಮನುಷ್ಯನೂ ನವಭಾರತ ನಿರ್ಮಾಪಕನೂ ಆದ ಸರ್ದಾರ ವಲ್ಲಭಭಾಯಿ ಪಟೇಲರು ಆಗ ಹೈದರಾಬಾದ ಪ್ರಾಂತ ವಿಮೋಚನೆಗಾಗಿ 'ಆಪರೇಷನ್ ಪೋಲೋ' ಕಾರ್ಯಾಚರಣೆ ೧೩ನೇ ಸೆಪ್ಟೆಂಬರ ಸೋಮವಾರ ೧೯೪೮ ರಂದು ಬೆಳಗಿನ ಜಾವ ೪ ಗಂಟೆಗೆ ಆದೇಶ ನೀಡಿದ್ದರು. ಜಗತ್ತಿಗೆ ಇದು ಪೊಲೀಸ್ ಕಾರ್ಯಾಚರಣೆ, ಇದು ನೈಜವಾಗಿ ಸೇನಾ ಕಾರ್ಯಾಚರಣೆಯಾಗಿತ್ತು. ಆಪರೇಷನ್ ಪೋಲೊ ಎಂಬುದು ಸೈನಿಕ ಕಾರ್ಯಾಚರಣೆಯ ಹೆಸರು.

## ಭಾರತದ ಸೈನ್ಯದ ದಂಡಯಾತ್ರೆ:

ದಕ್ಷಿಣ ಭಾರತದ ಸೈನಿಕ ವಿಭಾಗದ ಪ್ರಧಾನ ದಂಡನಾಯಕ ಲೆ.ಜ.

ಮಹಾರಾಜಸಿಂಗರ ನೇತೃತ್ವದಲ್ಲಿ ಮೇಜರ ಜನರಲ್ ಡಿ.ಎಸ್. ಬ್ರಾರವರು, ಜನರಲ್ ಚೌಧರಿಯವರು ಮುಂಬೈ ಕಡೆಯಿಂದ ಹೈದರಾಬಾದಿಗೆ ಮುತ್ತಿಗೆ ಹಾಕಲು ಹೊರಟರು. ಮದ್ರಾಸ ಕಡೆಯಿಂದ, ಎ.ಎ.ರುದ್ರ ಹಾಗೂ ಬ್ರಿಗೇಡಿಯರ್ ಶೋಯೆದತ್ತಸಿಂಗ್ ಅವರು ಮಧ್ಯ ಪ್ರಾಂತ ಹಾಗೂ ಬರಾರ್ ಪ್ರಾಂತದಿಂದ ಸಂಸ್ಥಾನಕ್ಕೆ ಲಗ್ಗೆಯಿಟ್ಟರು. ಇದಲ್ಲದೆ ಕೇಂದ್ರ ಸೈನ್ಯವು ಬೇರೆ ಬೇರೆ ಎಂಟು ದಿಕ್ಕಿನೊಂದಿಗೆ ಹೈದರಾಬಾದಿಗೆ ಮುತ್ತಿಗೆ ಹಾಕಿತು.

ಮೇಜರ್ ಜನರಲ್ ಜಯಂತ ನಾಥ ಚೌಧರಿಯವರ ನೇತೃತ್ವದಲ್ಲಿ ಸೊಲ್ಲಾಪುರದಿಂದ ಹೊರಟ ದಂಡಯಾತ್ರೆಯ ಮುಖ್ಯದಳವು ೧೯೪೮ ನೇ ಸೆಪ್ಟೆಂಬರ್ ೧೩ನೇ ದಿನಾಂಕ ಬೆಳಗಾಗುವುದರೊಳಗಾಗಿ ೨೯ ಮೈಲು ಕ್ರಮಿಸಿ ನಿಜಾಮರ ಬಲವಾದ ಕೋಟೆಯೆನಿಸಿದ ನಳದುರ್ಗವನ್ನು ಆಕ್ರಮಿಸಿ ಮುಂದಕ್ಕೆ ಸಾಗಿತು. ಇತ್ತ ಭಾರತದ ಸೈನ್ಯ ಎಲ್ಲ ಕಡೆಯಿಂದ ಹೈದ್ರಾಬಾದ್ ಪ್ರಾಂತವನ್ನು ಮುತ್ತಿತ್ತು. ದಕ್ಷಿಣ ಭಾರತದ ಪ್ರಧಾನ ದಂಡನಾಯಕ ಲೆ.ಜ.ಮಹಾರಾಜಸಿಂಗರ ನೇತೃತ್ವದಲ್ಲಿ ಮೇಜರ್ ಜನರಲ್ ಡಿ.ಎಸ್.ಬ್ರಾ. ಜನರಲ್ ಚೌಧರಿ, ಎ.ಎ.ರುದ್ರ, ಬಿ.ಗ್ರೇಡಿಯರ್ ಶೋಯೆದತ್ತ ಸಿಂಗ್ ಮೊದಲಾದವರು ಸೈನ್ಯ ಮುನ್ನಡೆಸಿದರು. ಭಾರತ ಸೈನ್ಯಕ್ಕೆ ನಿಜಾಮ ಸೈನ್ಯವಾಗಲಿ ಪಠಾಣರಾಗಲಿ ಎಲ್ಲಿಯೂ ತಡೆಯೊಡಲಿಲ್ಲ. ಆದರೆ ನಳದುರ್ಗ ಮತ್ತು ಕೊಪ್ಪಳ ಜಿಲ್ಲೆಯ ಮುನಿರಾಬಾದ್‌ನಲ್ಲಿ ಯುದ್ಧವಾಗಿ, ಸೋತು ಶರಣಾದರು. ಕೇವಲ ೪ ದಿನದಲ್ಲಿ ಸೈನ್ಯದೊಂದಿಗೆ ಹೈದ್ರಾಬಾದಿನ ನಿಜಾಮನು ಭಾರತಕ್ಕೆ ಶರಣಾದನು. ಅಂದು ಸೆಪ್ಟೆಂಬರ್ ೧೭ ಸಾಯಂಕಾಲ, ಮರು ದಿನ ಸೆಪ್ಟೆಂಬರ್ ೧೮ ರಂದು ಹೈದ್ರಾಬಾದ್ ಪ್ರಾಂತವು ಭಾರತದಲ್ಲಿ ವಿಧಿವತ್ತಾಗಿ ವಿಲೀನವಾಯಿತು. ಆಗ ರಾಯಚೂರು ಜಿಲ್ಲೆಯು ಭಾರತದ ಒಂದು ಭಾಗವಾಗಿ ಉಳಿಯಿತು. ಇದು ಹೈದ್ರಾಬಾದ್ ಪ್ರಾಂತದ ರಾಯಚೂರು ಜಿಲ್ಲೆಯ ಸಂಕ್ಷಿಪ್ತ ಇತಿಹಾಸವಾಗಿದೆ.

❑

## ಆಧಾರ ಗ್ರಂಥಗಳು


೧) ಹೈದ್ರಾಬಾದ್ ಸಂಸ್ಥಾನ ವಿಮೋಚನೆಯಲ್ಲಿ ರಾಯಚೂರು ಜಿಲ್ಲೆ : ರಾಮಣ್ಣ ಹವಳೆ

೨) ಹೈದ್ರಾಬಾದ್ ಪ್ರಾಂತ ವಿಮೋಚನೆಯಲ್ಲಿ ಗಜೇಂದ್ರಗಡ ಶಿಬಿರ : ರಾಮಣ್ಣ ಹವಳೆ

೩) ವಿಮೋಚನೆ : ಜಿಲ್ಲಾ ಆಡಳಿತ ಕೊಪ್ಪಳ ಪ್ರಕಾಶಿತ : ಸಂಪಾದನೆ: ಅಲ್ಲಮಪ್ರಭು ಬೆಟ್ಟದೂರು.

೪) ವಂದೇ ಮಾತರಂ ದಿಂದ ಜನಗಣಮನದವರೆಗೆ: ವಿ.ಎಚ್.ದೇಸಾಯಿ.

೫) ಶಿಬಿರಾಧಿಪತಿ ಬೆಟ್ಟದೂರು ಶಂಕರಗೌಡರು, ಭಾರತ ಸರ್ಕಾರ, ಸ್ಕ್ರೀನಿಂಗ್ ಕಮಿಟಿಗೆ ಕಳುಹಿಸಿದ ಟಿಪ್ಪಣಿ.

೬) ಸ್ವಾತಂತ್ರ್ಯ ಯೋಧ ಪಿ.ವೀರಣ್ಣನವರ ಸಂದರ್ಶನ ಹಾಗೂ ಟಿಪ್ಪಣಿ.

೭) ಸ್ವಾತಂತ್ರ್ಯ ಯೋಧ ಡಿ.ಪಂಪಣ್ಣ ನೆರವಿ ಸಂದರ್ಶನ ಹಾಗೂ ಟಿಪ್ಪಣಿ.

೮) ತಿಪ್ಪಯ್ಯ ಹಂಪಯ್ಯರೆಡ್ಡಿ ಫೈಲ್.

೯) ಗಾಣಾಧಾಳ ನಾರಾಯಣಪ್ಪ ಫೈಲ್.

೧೦) ಎಂ.ನಾಗಪ್ಪ ಅವರ ಜೀವನ ಚರಿತ್ರೆ ಹಾಗೂ ಅವರ ಹೇಳಿಕೆಗಳು ೨೦೦೮.

೧೧) B.S. Dheengle : Hyderabad freedom struggle, Kalpana Publication Nanded.

೧೨) ಆರ್.ಕೆ.ಜೋಷಿ : ಬಿಡುಗಡೆ ಬಿರುಗಾಳಿಯಲ್ಲಿ.

೧೩) ರಾ.ಗು. ಜೋಷಿ : ನೆನಪಿನ ಪುಟಗಳು.

೧೪) ಕೋರ್ಟು ತೀರ್ಪಿನ ಪುನಃ ಪ್ರತಿ ಕೇಸ್ ನಂ–೧/೩/೧೩೫೭ ಫಸಲಿ ಮುನಿಸೀಫ್‌ಕೋರ್ಟ್ ರಾಯಚೂರು.

## ಹೈದ್ರಾಬಾದ್ ಸಂಸ್ಥಾನ ನಕಾಶೆ



## ಹೈದ್ರಾಬಾದ್ ಕರ್ನಾಟಕ




## ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ
## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

| ಕ್ರಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ಬೆಲೆ |
|---|---|---|---|
| ೧. | ತುರುವನೂರು | ಡಾ. ಪಿ. ಯಶೋದಾ ರಾಜಶೇಖರಪ್ಪ | ೩೦/– |
| ೨. | ಚಿತ್ರದುರ್ಗ | ಡಾ. ಬಿ. ರಾಜಶೇಖರಪ್ಪ | ೩೦/– |
| ೩. | ರಾಮಸ್ವಾಮಿ ವೃತ್ತ | ಮಂಜುನಾಥ ಹೆಚ್.ಎಲ್. | ೩೦/– |
| ೪. | ಸುಬ್ಬರಾಯನ ಕೆರೆ | ಡಾ. ಇಂದಿರಾ ಬಿ.ಪಿ. | ೩೦/– |
| ೫. | ಬದನವಾಳು | ಡಾ. ಇಂದಿರಾ ಬಿ.ಪಿ. | ೩೦/– |
| ೬. | ತಗಡೂರು | ಡಾ. ಎಚ್.ಎಸ್. ಉಷಾರಾಣಿ | ೩೦/– |
| ೭. | ಶಿವಪುರ | ಡಾ. ಲಿಂಗರಾಜು | ೩೦/– |
| ೮. | ಮಂಡ್ಯ | ಡಾ. ಶಿವರಾಮು ಎಸ್. | ೩೦/– |
| ೯. | ಚಾಮರಾಜನಗರ | ಡಾ. ಸುಂದ್ರೇಶ ಎನ್. | ೩೦/– |
| ೧೦. | ಗುಂಡ್ಲುಪೇಟೆ | ಕವಿತಾ ಎ. | ೩೦/– |
| ೧೧. | ಗೊರೂರು | ಡಾ. ಯೋಗೇಶ್ ಎನ್.ಇ. | ೩೦/– |
| ೧೨. | ಅರಸೀಕೆರೆ | ಡಾ. ಮಂಜುನಾಥ ಜಿ.ಆರ್. | ೩೦/– |
| ೧೩. | ಹೊಸರಿತ್ತಿ | ಡಾ. ಹೇಮಪ್ಪ ಬ. ಕೆಂಚಳ್ಳಿ | ೩೦/– |
| ೧೪. | ಕನ್ನೇಶ್ವರ | ಡಾ. ಚಾಮರಾಜ ಕಮ್ಮಾರ | ೩೦/– |
| ೧೫. | ಚಳ್ಳೆಕೂಡ್ಲೂರು | ರಾಮಣ್ಣ ಹವಳೆ | ೩೦/– |
| ೧೬. | ನ್ಯಾಷನಲ್ ಹೈಸ್ಕೂಲು | ಟಿ.ಕೆ. ತಿಮ್ಮರಾಯ ಶೆಟ್ಟಿ | ೩೦/– |
| ೧೭. | ಬನಪ್ಪ ಪಾರ್ಕ್ | ರಮೇಶ ದೊಡ್ಡಪುರ | ೩೦/– |

| | | | |
|---|---|---|---|
| ೧೮. | ಮಲ್ಲೇಶ್ವರ | ಕೆ.ಎಲ್. ನಟರಾಜ್ | ೩೦/– |
| ೧೯. | ದಂಡುಪ್ರದೇಶ | ಪ್ರಮೋದ್ ನ. ಗೋ. | ೩೦/– |
| ೨೦. | ದೇವನಹಳ್ಳಿ | ಕೆ.ಆರ್. ನರಸಿಂಹನ್ | ೩೦/– |
| ೨೧. | ದೊಡ್ಡಬಳ್ಳಾಪುರ | ಡಿ.ಎಂ. ಘನಶ್ಯಾಮ | ೩೦/– |
| ೨೨. | ರಾಮನಗರ | ಎಸ್. ಶರತ್ ಚಂದ್ರ | ೩೦/– |
| ೨೩. | ಕನಕಪುರ | ಡಾ. ಎಸ್.ಎಚ್. ಭುವನೇಶ್ವರ | ೩೦/– |
| ೨೪. | ಶ್ರೀನಿವಾಸಪುರ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೫. | ಬಂಗಾರಪೇಟೆ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೬. | ವಿದುರಾಶ್ವತ್ಥ | ಡಾ. ಎಸ್.ಜಿ. ರಾಮದಾಸ ರೆಡ್ಡಿ | ೩೦/– |
| ೨೭. | ಈಸೂರು | ಮಾರ್ಪಳ್ಳಿ ಆರ್. ಮಂಜುನಾಥ್ | ೩೦/– |
| ೨೮. | ನಗರ(ಬಿದನೂರು) | ಚಿನ್ಮಯ ಎಂ.ಸಿ. | ೩೦/– |
| ೨೯. | ಚನ್ನಗಿರಿ | ಡಾ. ಕೆಳದಿ ವೆಂಕಟೇಶ ಜೋಯಿಸ್ | ೩೦/– |
| ೩೦. | ದಾವಣಗೆರೆ | ಸಹನಾ ಚೇತನ್ | ೩೦/– |
| ೩೧. | ಸಿಂದಗಿ | ಡಾ. ರಮೇಶ ಎಸ್. ಕತ್ತಿ | ೩೦/– |
| ೩೨. | ಮಸಬಿನಾಳ | ಶಂಕರ ಬೈಚಬಾಳ | ೩೦/– |
| ೩೩. | ಸಾರವಾಡ | ಡಾ. ಸೋಮಶೇಖರ ವಾಲಿ | ೩೦/– |
| ೩೪. | ಹಲಸಂಗಿ | ಶ್ರೀ ಸುಮಿತ್ ಮೇತ್ರಿ | ೩೦/– |
| ೩೫. | ನರಗುಂದ | ಡಾ. ನಿಂಗು ಸೊಲಗಿ | ೩೦/– |
| ೩೬. | ಮುಂಡರಗಿ | ಡಾ. ಉಮೇಶ ತಿಮ್ಮಾಪುರ | ೩೦/– |



| | | | |
|---|---|---|---|
| ೩೭. | ಹಲಗಲಿ | ಡಾ. ವಿಜಯಶ್ರೀ ಇಟ್ಟಣ್ಣವರ | ೩೦/– |
| ೩೮. | ಬಿಸನಾಳ | ಡಾ. ವಿನಯಕುಮಾರ್ ಹಿರೇಮಠ | ೩೦/– |
| ೩೯. | ಬಾಗಲಕೋಟೆ | ರಾಮ ಮನಗೂಳಿ | ೩೦/– |
| ೪೦. | ಬಾದಾಮಿ | ಡಾ. ಪ್ರಕಾಶ ಗ. ಖಾಡೆ | ೩೦/– |
| ೪೧. | ಸುರಪುರ | ಶ್ರೀನಿವಾಸ ಜಾಲವಾದಿ | ೩೦/– |
| ೪೨. | ಕೆಂಭಾವಿ | ನಿಂಗನಗೌಡ ಹ. ದೇಸಾಯಿ | ೩೦/– |
| ೪೩. | ರಾಜನಕೋಳೂರು | ರಾಘವೇಂದ್ರ ಜಹಗೀರದಾರ | ೩೦/– |
| ೪೪. | ಭಾಲ್ಕಿ | ಡಾ. ರಘುಶಂಖ ಭಾತಂಬ್ರಾ | ೩೦/– |
| ೪೫. | ಗೋರಟಾ | ಷ.ಬ್ರ. ಡಾ. ರಾಜಶೇಖರ ಶಿವಾಚಾರ್ಯ ಸ್ವಾಮಿಗಳು | ೩೦/– |
| ೪೬. | ನೆಹರು ಮೈದಾನ | ಡಾ. ವಸಂತ ಕುಮಾರ್ ಪೆರ್ಲ | ೩೦/– |
| ೪೭. | ರಾಮಶಾಲಾ ಬಯಲು | ರಾಮಣ್ಣ ಹವಳೆ | ೩೦/– |
| ೪೮. | ಉಳ್ಳಾಲ | ಡಾ. ಜ್ಯೋತಿ ಚೇಳ್ಯಾರು | ೩೦/– |
| ೪೯. | ಅಮರಸುಳ್ಯ | ಸಹನಾ ಕಾಂತಬೈಲು | ೩೦/– |
| ೫೦. | ಅಜ್ಜರಕಾಡು ಮೈದಾನ | ಡಾ. ಪೃಥ್ವೀರಾಜ ಕವತ್ತಾರು | ೩೦/– |
| ೫೧. | ಬಸರೂರು–ಕುಂದಾಪುರ | ಮಂಜುನಾಥ್ ಚಾಂದ್ | ೩೦/– |
| ೫೨. | ಪೊನ್ನಂಪೇಟೆ | ಸೊಮೆಯಂಡ ಕೌಸಲ್ಯ ಸತೀಶ್ | ೩೦/– |
| ೫೩. | ಮಡಿಕೇರಿ | ಪ್ರೊ. ಕೆ.ಆರ್. ದೀಕ್ಷಿತ್ | ೩೦/– |
| ೫೪. | ಅಜ್ಜಂಪುರ | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೫. | ಚಿಕ್ಕಮಗಳೂರು | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |

| | | | |
|---|---|---|---|
| ೫೬. | ಕಲಬುರಗಿ | ಡಾ. ಶಂಭುಲಿಂಗವಾಣಿ | ೩೦/– |
| ೫೭. | ಮುಧೋಳ–ಸೇಡಂ | ಮುಡಬಿ ಗುಂಡೇರಾವ | ೩೦/– |
| ೫೮. | ಅಂಕೋಲಾ | ಶಾಂತಾರಾಮ ನಾಯಕ | ೩೦/– |
| ೫೯. | ಶಿರಸಿ | ಪದ್ಮಾಕರ ಮಡಗಾಂವಕರ | ೩೦/– |
| ೬೦. | ಕಾರವಾರ | ಡಾ. ಉದಯ ಶಂಕರ ಪುರಾಣಿಕ | ೩೦/– |
| ೬೧. | ಬಳ್ಳಾರಿ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೨. | ಹೊಸಪೇಟೆ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೩. | ಕೊಟ್ಟೂರು | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೪. | ಕೂಡ್ಲಿಗಿ | ಡಾ. ಸತೀಶ ಕೆ. | ೩೦/– |
| ೬೫. | ಕಿತ್ತೂರು | ಪ್ರಕಾಶ ಗಿರಿಮಲ್ಲನವರ | ೩೦/– |
| ೬೬. | ಹುದಲಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೭. | ಬೆಳಗಾವಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೮. | ಹುಲಕುಂದ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೯. | ಬೆಂಗೇರಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೭೦. | ಕೊಪ್ಪಳ | ಮಹೇಶ ಬಳ್ಳಾರಿ | ೩೦/– |
| ೭೧. | ಗಂಗಾವತಿ | ರಮೇಶ ಸಿ. ಬನ್ನಿಕೊಪ್ಪ | ೩೦/– |
| ೭೨. | ಅಳವಂಡಿ | ಡಾ. ಪ್ರಕಾಶ ಬಳ್ಳಾರಿ | ೩೦/– |
| ೭೩. | ತುಮಕೂರು | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೪. | ಮಧುಗಿರಿ | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೫. | ತಾವರೆಕೆರೆ | ಪ್ರೊ. ಕೆ. ಪುಟ್ಟರಂಗಪ್ಪ | ೩೦/– |